ಸಂಪುಟ 22 ಸಂಚಿಕೆ 53-54
ಡಿಸೆಂಬರ್ 31, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ ಪೆಕ್ಯಾರರಗ



ಬಿಜೆಪಿ ನಿಲ್ಲದ ದುಷ್ಟ ಆಟ

ವಿದ್ಯುತ್ ದರ ಹೆಚ್ಚಳ ಜನಸಾಮಾನ್ಯರಿಗೆ ಶಾಕ್

ಕಾರ್ಮಿಕ ವಿರೋಧಿ ಆದಿಚುಂಚನಗಿರಿ ಆಡಳಿತ



ಹೃತಿಕ್–ಸೂಸಾನ್ ಮದುವೆ

ಯುವಜನ ಹೋರಾಟ

ಯುವಜನತೆ ತನ್ನದೇ ಆದ ಆಂದೋಲನ ಆರಂಭಿಸಲು ಇದು ಸಕಾಲವಾಗಿತ್ತು. ಆ ಹೊತ್ತಿಗೆ ಯುವಸಂಘ ಪರಿಷ್ಕರಣವಾದಿಗಳ ಬಲೆಗೆ ಬಿದ್ದಿತ್ತು. ಯುವ ಉತ್ಸವ ಇನ್ನೊಂದು ಕಟಾಚಾರದ ಕಾರ್ಯಕ್ರಮವೆನ್ನುವಂತಾಗಿತ್ತು. ಯಾವುದೇ ಇತರ ರಾಜಕೀಯ ಕಾರ್ಯಕ್ರಮ ಅದರ ಅಜೆಂಡಾದಲ್ಲಿ ಇರಲಿಲ್ಲ. ರಾಜಕೀಯ ಬಂಧಿಗಳ ಬಿಡುಗಡೆ, ಆಹಾರ ಬಿಕ್ಕಟ್ಟು ಮತ್ತು ಉದ್ಯೋಗ ಸಮಸ್ಯೆಗಳ ವಿಚಾರದಲ್ಲಿ ಚಳುವಳಿ ಇರಲಿಲ್ಲ. ಈ ವಿಷಯದಲ್ಲಿ ಅರ್ಥಹೀನ ನೆಪಗಳನ್ನು ಮುಂದೊಡ್ಡಲಾಯಿತು.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 54

ಸ್ವಾತಂತ್ರ್ಯನಂತರ ಯುವಜನರ ಹೃದಯಗಳಲ್ಲಿ ಎದ್ದ ಆಶಾಭಾವನೆಗಳು ಮಣ್ಣುಪಾಲಾದವು. ಹೀಗಾಗಿ ಅವರೀಗ ಹೋರಾಟದ ಕಣಕ್ಕೆ ಧುಮುಕಲು ತಹತಹಿಸುತ್ತಿದ್ದರು. ಆದರೆ ಬಹುಪಾಲು ನಾಯಕತ್ವ ಪರಿಷ್ಕರಣವಾದಿ ಹಾದಿಯನ್ನು ತುಳಿದಿತ್ತು. ಮುಗ್ಧ ಮನಸ್ಸುಗಳನ್ನು ಪ್ರತ್ಯೇಕಿಸಲು ಯತ್ನಿಸಿತ್ತು.

ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟ (ಡಿವೈಎಫ್) 1968 ಜೂನ್ 7 ರಿಂದ 9 ರವರೆಗೆ ಪ್ರಥಮ ರಾಜ್ಯ ಸಮ್ಮೇಳನ ನಡೆಸಿತು. ಅದು ಈಗ ಜಗತ್ತಿನ ಅತ್ಯಂತ ದೊಡ್ಡ ಯುವಜನ ಸಂಘಟನೆಗಳಲ್ಲಿ ಒಂದಾಗಿದೆ. ಡಿವೈಎಫ್ಐ ಹುಟ್ಟುತ್ತಲೇ ಸಾಮ್ರಾಜ್ಯವಾದ ಮತ್ತು ಬಂಡವಾಳಶಾಹಿ ತನ್ನ ಪ್ರಮುಖ ಶತ್ರುಗಳೆಂದು ಪರಿಗಣಿಸಿತು. ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದವನ್ನು ಪ್ರಮುಖ ಘೋಷಣೆಗಳನ್ನಾಗಿ ಅಂಗೀಕರಿಸಿತು.

ದಿನೇಶ ಮಜುಂದಾರ್ ಡಿವೈಎಫ್ಐನ ಸ್ಥಾಪಕ ಅಧ್ಯಕ್ಷರು, ಬುದ್ಧದೇವ ಭಟ್ಟಾಚಾರ್ಯ (ಈಗಷ್ಟೇ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದಿರುವ) ಕಾರ್ಯದರ್ಶಿ. ಯುವ ಆಂದೋಲನಕ್ಕೆ ಈಗೊಂದು ಹೊಸ ದನಿ ಸಿಕ್ಕಂತಾಯಿತು.

'ಕ್ರಾಂತಿ'ಯ ಹೆಸರಿನಲ್ಲಿ ಜನತೆಗೆ ದ್ರೋಹ

ಪರಿಷ್ಕರಣವಾದದ ಹಿಂದೆಯೇ ಬಂದದ್ದು ತೀವ್ರಗಾಮಿ ಎಡಪಂಥೀಯ ದಿಕ್ಚ್ಯುತಿ. ಪಕ್ಷ ಆಗಲೆ ವಿಭಜನೆಗೊಂಡಿತ್ತು. ಅದು ಅನಿವಾರ್ಯವಾಗಿತ್ತು. ವಿಭಜನೆಯು ಪರಿಣಾಮದಿಂದ ನಾವಿನ್ನೂ ಸುಧಾರಿಸಿಕೊಂಡಿರಲಿಲ್ಲ. ಸಂಘಟನಾತ್ಮಕ ದೌರ್ಬಲ್ಯಗಳು ಅನೇಕ ಪ್ರದೇಶಗಳಲ್ಲಿ ಎದ್ದು ಕಾಣುತ್ತಿತ್ತು. ಈ ಎಲ್ಲದರ ಮಧ್ಯೆ, ತೀವ್ರಗಾಮಿ ಎಡಪಂಥೀಯ ಧೋರಣೆ ತಲೆಹಾಕಿ ಪಕ್ಷದ ಒಳಗಿನಿಂದಲೇ ಹೊಸ ಅಪಾಯ ತಂದೊಡ್ಡಿತ್ತು. ದೇಶದ ಪರಿಸ್ಥಿತಿಯನ್ನು ಕೆಲವರು ತಪ್ಪಾಗಿ ವಿಶ್ಲೇಷಿಸಿ ಹಠಾತ್ ಕ್ರಾಂತಿಯ ಸಂದೇಶ ಸಾರತೊಡಗಿದರು.

ಈ ಜನರು ಪಕ್ಷದ ಕಾರ್ಯಕ್ರಮಗಳಿಗೆ ಸವಾಲು ಹಾಕಿದರು. ಸಂಸದೀಯ ಪ್ರಜಾಪ್ರಭುತ್ವ ಮತ್ತು ಸರಕಾರದಲ್ಲಿ ಪಾಲ್ಗೊಳ್ಳುವ ನೀತಿ ನಿರ್ಧಾರಗಳನ್ನು ಅವರು ವಿರೋಧಿಸಿದರು. ಅವರು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷವೊಂದರ ಬುಡಕ್ಕೇ ಕೊಡಲಿಯೇಟು ಹಾಕಿದರು. ಏಕತೆ, ಶಿಸ್ತು ಮತ್ತು ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಗಾಳಿಗೆ ತೂರಿದರು.

ಈ ಸಮಯಸಾಧಕರು ನಮ್ಮ ಪಕ್ಷದ ಕಾರ್ಯಕ್ರಮ ಪರಿಷ್ಕರಣವಾದಿ ಎಂದು ಕರೆದರು ಹಾಗೂ ಭಾರತೀಯ ಸರಕಾರ, ನವ-ವಸಾಹತುಶಾಹಿ ಎಂದರು. ಭಾರತ 'ಕೈಗೊಂಬೆ ಆಡಳಿತಕ್ಕೆ' ಒಳಪಟ್ಟಿದೆ ಹಾಗೂ ಸಾಮ್ರಾಜ್ಯಶಾಹಿಗಳ ನೆರವಿನಿಂದ ಪುಟ್ಟ ಬಂಡವಾಳಶಾಹಿಗಳು (ಪೆಟಿ ಬೂರ್ಜ್ವಾ) ಅಧಿಕಾರದಲ್ಲಿದೆ ಎಂದು ಅವರು ಹೇಳಿದರು.

1964 ರಲ್ಲಿ ನಡೆದ ಕಲ್ಕತ್ತ ಮಹಾಧಿವೇಶನ ಈ ಧೋರಣೆಯನ್ನು ಚರ್ಚಿಸಿ ಅದನ್ನು ತಿರಸ್ಕರಿಸಿತ್ತು. ಬಂಡವಾಳಶಾಹಿಗಳಿಗೆ ತಮ್ಮದೇ ಆದ ಅಧಿಕಾರವಿಲ್ಲ., ಅವರು ಸಾಮ್ರಾಜ್ಯಶಾಹಿಗಳ ನೇತೃತ್ವದಲ್ಲಿ ಇದ್ದಾರೆ ಎಂದು ಈ ಜನರು ನಂಬಿದ್ದರು. ಇದೊಂದು ತಪ್ಪು ವಿಶ್ಲೇಷಣೆಯಾಗಿತ್ತು. ಸರಕಾರ ಒಂದು ಕೈಗೊಂಬೆ ಆಡಳಿತ ಎಂಬ ಅವರ ಅಂದಾಜು ಕೂಡ ತಪ್ಪಾಗಿತ್ತು. ಸತತ ಚುನಾವಣೆಗಳಲ್ಲಿ ಭಾರಿ ಜನಬೆಂಬಲವನ್ನು ಸರಕಾರ ಪಡೆದಿತ್ತು. ಒಂದುವೇಳೆ ಕೈಗೊಂಬೆ ಆಡಳಿತವಾಗಿದ್ದರೆ ಜನತೆಯ ಈ ರೀತಿಯ ಬೆಂಬಲ ದೊರಕಲು ಸಾಧ್ಯವಿರಲಿಲ್ಲ ಎಂಬುದನ್ನು ಈ ಸಮಯಸಾಧಕರು ಮರೆತಿದ್ದರು.

ಸರಕಾರ ಜನರಿಂದ ಪೂರ್ಣವಾಗಿ ಪ್ರತ್ಯೇಕಗೊಂಡಿದೆ. ಜನರ ಖಂಡನೆಗೆ ಗುರಿಯಾಗಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಅಸ್ತಿತ್ವದಲ್ಲಿದ್ದ ವರ್ಗಸ್ವರೂಪವನ್ನು ಪೂರ್ಣವಾಗಿ ಕಡೆಗಣಿಸಿದ್ದರು. ಜನತಾ ಪ್ರಜಾಪ್ರಭುತ್ವ ರಂಗ ಅಗತ್ಯ ಎಂಬುದನ್ನು ಬಲವಾಗಿ ಪ್ರತಿಪಾದಿಸಲಿಲ್ಲ. ಸಶಸ್ತ್ರ ಕ್ರಾಂತಿಯೇ ಉಳಿದಿರುವ ದಾರಿ ಹಾಗೂ ಅದು ಯಾವತ್ತಿದ್ದರೂ ಸಂಭವಿಸಲೇ ಬೇಕು ಎಂದು ನಂಬಲು ಈ ತಪ್ಪು ಅಂದಾಜೇ ಕಾರಣವಾಗಿತ್ತು.

ಹೇಳಿಕೆ ತಿಳಿಸಿತು.

ವಾಸ್ತವವಾಗಿ, ಈ ಸಮಯಸಾಧಕರು ಕಾರ್ಮಿಗ ವರ್ಗ ಮತ್ತು ಒಟ್ಟಾರೆಯಾಗಿ ಜನತೆಯ ಏಕತೆಯನ್ನು ತಡೆಯುವ ಪ್ರಯತ್ನಗಳಿಗೆ ನೆರವಾಗುತ್ತಾರೆ. ಸಾಮೂಹಿಕ ಸಂಘಟನೆಗಳನ್ನು ಸ್ಥಾಪಿಸುವುದು ಹಾಗೂ ಕಾರ್ಮಿಕ ಮತ್ತು ರೈತ ವರ್ಗಗಳ ಹಕ್ಕುಗಳಿಗಾಗಿ ಹೋರಾಡುವ ಅಗತ್ಯವನ್ನು ಕಡೆಗಣಿಸಿದ ಕೆಲವರು ತೀವ್ರಗಾಮಿತನದ ಅತ್ಯಂತ ಕೆಟ್ಟ ಸ್ವರೂಪಕ್ಕೆ - ಕೃತ್ಯಗಳಿಗೆ ಇಳಿದರು ಹಾಗೂ

ಹಿಂದಿನ ಸಂಚಿಕೆಯಲ್ಲಿ ಸಂಯುಕ್ತ ರಂಗ ಸಭೆ ವಿಫಲಗೊಳಿಸಲು ಪೋಲೀಸರು ನಿಷೇದಾಜ್ಞೆ ಹೇರಿ ವೇದಿಕೆಯನ್ನು ಮುರಿದು ಹಾಕಿದ್ದು, ರಾಜ್ಯವ್ಯಾಪ್ತಿ ಮುಷ್ಕರದಿಂದಾಗಿ ಅಧಿಕಾರ ನಡೆಸಲು ಸಾಧ್ಯವಾಗದೆ ಕಾಂಗ್ರೆಸ್ ಸರ್ಕಾರ ಮಧ್ಯಂತರ ಚುನಾವಣೆ ಘೋಷಣೆಯ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಎಡ ಸಾಹಸವಾದಿಗಳು ಪಕ್ಷದ ಕಾರ್ಯಕ್ರಮಕ್ಕೆ ಸವಾಲು ಹಾಕಿ, ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷವೊಂದರ ಬುಡಕ್ಕೆ ಕೊಡಲಿಯೇಟು ಹಾಕಿ ಶಿಸ್ತು, ಏಕತೆ, ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಗಾಳಿಗೆ ತೂರಿದರು. ಇದೇ ಸಂದರ್ಭದಲ್ಲಿ ಸಾಮ್ರಾಜ್ಯವಾದ ಮತ್ತು ಬಂಡವಾಳಶಾಹಿ ವಿರುದ್ಧ ಒಂದು ಪ್ರಬಲ ಯುವಜನ ಸಂಘಟನೆ ಬೆಳೆದು ಬಗ್ಗೆ ಓದಿ.

ಈ ಬೇಜವಾಬ್ದಾರಿ ಎಡಪಂಥೀಯ ಸಂಸದೀಯ ಪ್ರಜಾಪ್ರಭುತ್ವ ಮತ್ತು ಫ್ಯಾಸಿಸಂ ನಡುವಿನ ವ್ಯತ್ಯಾಸವನ್ನೇ ಕಾಣದಾಗಿದ್ದರು. ವಿಶಾಲ ಹೋರಾಟಗಳಿಗೆ ಎಲ್ಲಾ ಸಂಸದೀಯ ಸಂಸ್ಥೆಗಳನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕೆಂಬ ಲೆನಿನ್‌ರ ಸಿದ್ಧಾಂತವನ್ನು ಅನುಸರಿಸುವ ಬದಲು ಈ ತೀವ್ರಗಾಮಿಗಳು ಸಂಸದೀಯ ಪ್ರಜಾಪ್ರಭುತ್ವವನ್ನು ಮಾನ್ಯ ಮಾಡುವುದು ಪರಿಷ್ಕರಣವಾದ ಎಂದು ಅಭಿಪ್ರಾಯಪಟ್ಟರು.

ಅವರ ಪ್ರಕಾರ, ಎಲ್ಲ ಕಾಂಗ್ರೆಸ್ಸೇತರ ಸರಕಾರಗಳು ಪರಿಷ್ಕರಣವಾದಿ ಸ್ವರೂಪಗಳಾಗಿದ್ದವು. ಚುನಾವಣೆಗಳಲ್ಲಿ ಭಾಗವಹಿಸುವುದು ಕೂಡಾ ತಪ್ಪಾಗಿತ್ತು. ಸಂಯುಕ್ತ ರಂಗದ ಪರಿಕಲ್ಪನೆ ಮತ್ತು ಪರ್ಯಾಯ ಸರಕಾರವೊಂದರ ಅವಶ್ಯಕತೆಯನ್ನು ಕೂಡ ಅವರು ತಿರಸ್ಕರಿಸಿದರು. ಎಲ್ಲ ಕಾರ್ಯತಂತ್ರಗಳು ಮತ್ತು ನೀತಿಗಳನ್ನು ಸಂಸದೀಯ ಅಧಿಕಾರ ಎಂದು ಅವರು ಜರಿದರು. ಆದರೆ ಇವೆಲ್ಲದರ ಪರಿಣಾಮವಾಗಿ ಅವರು ಎಡ ಚಳುವಳಿಯ ದೊಡ್ಡ ಆಯಾಮವನ್ನೇ ತಿರಸ್ಕರಿಸುವ ಹಾದಿಯಲ್ಲಿದ್ದರು.

ಈ ವಾದಗಳು ಎಷ್ಟು ಟೊಳ್ಳು ಎನ್ನುವುದನ್ನು ನಾವು ಆ ಕಾಲದಲ್ಲೇ ಸಾಬೀತುಪಡಿಸಿದೆವು. ಅಷ್ಟು ಮಾತ್ರವಲ್ಲದೆ ಪಕ್ಷದಿಂದ ಜನರನ್ನು ದೂರಮಾಡಲಷ್ಟೇ ಈ ಜನರು ಕೆಲಸಮಾಡುತ್ತಾರೆ ಎಂದು ನಾವು ಹೇಳಿದೆವು.

1967 ರ ಆಗಸ್ಟ್‌ನಲ್ಲಿ ಮಧುರೆಯಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಈ ದಿಕ್ಚ್ಯುತಿಗಳ ಬಗ್ಗೆ ಪಕ್ಷದ ನಿಲುವನ್ನು ವಿವರಿಸಿತು. ವ್ಯವಸ್ಥೆಯ ವಿರುದ್ಧ ನಡೆಯುವ ಹೋರಾಟವನ್ನು ನಗಣ್ಯಗೊಳಿಸುವುದಷ್ಟೆ ಈ ಶಕ್ತಿಗಳ ಉದ್ದೇಶ ಎಂದು

ಕ್ರಾಂತಿಯ ಹೆಸರಿನಲ್ಲಿ ಜನತಾ ಆಂದೋಲನವನ್ನು ಅಂತ್ಯಗೊಳಿಸಲು ಬಯಸಿದರು.

ಸಾಮೂಹಿಕ ಸಂಘಟನೆಗಳಿಗೆ ಯಾವುದೇ ಪಾತ್ರವಿಲ್ಲ. ತಥಾಕಥಿತ ಕ್ರಾಂತಿಕಾರಿ ಹೆಜ್ಜೆಗಳು ಹಾಗೂ ಚಟುವಟಿಕೆಗಳಿಂದ ಜನರ ವಿಜಯವನ್ನು ಸಾಧಿಸಬಹುದು ಎಂಬುದು ಈ ಮಂದಿಯ ಅಭಿಮತ. ಮಾರ್ಕ್ಸ್‌ವಾದ-ಲೆನಿನ್‌ವಾದ ಯಾವತ್ತೂ ಇಂಥ ಅಭಿಪ್ರಾಯಗಳ ಮೇಲೆ ತನ್ನ ಸಿದ್ಧಾಂತವನ್ನು ರೂಪಿಸಿಕೊಂಡಿಯೇ ಇಲ್ಲ. ಇದು ಪೂರ್ಣವಾಗಿ ತಪ್ಪು ತಿಳುವಳಿಕೆಯಾಗಿತ್ತು.

ಪ್ರತಿಗಾಮಿಗಳಿಗೆ ನೆರವು

ಸಹಜವಾಗಿಯೇ, ಈ ಕ್ರಾಂತಿಕಾರಿಗಳು ತಮ್ಮ ಬೇಜವಾಬ್ದಾರಿ ಹೇಳಿಕೆಗಳು ಮತ್ತು ಕೃತ್ಯಗಳಿಂದ ಜನತೆಯ ಏಕತೆಯ ಗುರಿಗೆ ಹಾನಿ ಉಂಟು ಮಾಡಿದರು. ಹಾಗೂ ಕಾಂಗ್ರೆಸ್‌ನ ಪ್ರಜಾಪ್ರಭುತ್ವ ವಿರೋಧಿ ಹೋರಾಟಕ್ಕೆ ನೆರವಾದರು.

ಸಮಯಸಾಧಕತನದ ಪ್ರಚಾರದಲ್ಲಿ ಬಲಪಂಥೀಯರಿಗೆ ಪರಿಷ್ಕರಣವಾದಿಗಳು ನೆರವಾಗಿದ್ದರು. ಅದೇ ರೀತಿ ಎಡಪಂಥೀಯ ಬೇಜವಾಬ್ದಾರಿತನ ಪ್ರತಿಗಾಮಿಗಳಿಗೆ ಸಹಾಯಕವಾಯಿತು. ಕಾಂಗ್ರೆಸ್‌ನ ರಾಷ್ಟ್ರವಿರೋಧಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳ ವಿರುದ್ಧ ಸಿಪಿಐ(ಎಂ) ನಡೆಸುತ್ತಿದ್ದ ಹೋರಾಟಕ್ಕೆ ಭಂಗ ತಂದಿತು.

ಕಾಂಗ್ರೆಸ್ ಆಡಳಿತಕ್ಕಿಂತ ಸಂಯುಕ್ತ ರಂಗ ಸರಕಾರವೇ ಅವರಿಗೆ ಹೆಚ್ಚು 'ಪ್ರತಿಗಾಮಿ' ಆಗಿದ್ದರಿಂದ ನಮ್ಮ ಪಕ್ಷ ಕೆಂಗಣ್ಣಿಗೆ ಗುರಿಯಾಯಿತು. ವ್ಯಕ್ತಿಗತ ಕೊಲೆಗಳು ಮತ್ತು ಭಯೋತ್ಪಾದನೆ ವಿಪರೀತವಾಯಿತು. ಇದು ಯಾವ ಮಟ್ಟ ಮುಟ್ಟಿತೆಂದರೆ ಕಾಂಗ್ರೆಸ್ ಮತ್ತು ಈ 'ಕ್ರಾಂತಿಕಾರಿಗಳ' ನಡುವಿನ ಬಾಂಧವ್ಯ ಸ್ಪಷ್ಟವಾಗಿ ಎದ್ದು ಕಾಣುವಂತಿತ್ತು. ಅವರಿಬ್ಬರೂ ನಮ್ಮ ವಿರುದ್ಧ ಕತ್ತಿ ಮಸೆಯುತ್ತಿದ್ದರು.

ಈ ಸಿದ್ಧಾಂತದಲ್ಲಿ ತಿಳುವಳಿಕೆಯ ಕೊರತೆಯ ಟೊಳ್ಳುತನವಿದ್ದರೂ ಎಡ ಸಾಹಸವಾದಿಗಳು ಆಂಧ್ರಪ್ರದೇಶ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿ ಸ್ವಲ್ಪ ಮಟ್ಟಿಗಿನ ಪ್ರಭಾವ ಬೀರುವಲ್ಲಿ ಯಶಸ್ವಿಯಾದರು. ದುರದೃಷ್ಟವಶಾತ್, ಕೆಲವು ಸಮರಶೀಲರು, ಮಧ್ಯಮವರ್ಗದ ಬುದ್ಧಿಜೀವಿಗಳು ಮತ್ತು ಯುವಜನರು ಕ್ರಾಂತಿಯ ಕರೆಯ ಗ್ಲಾಮರ್‌ಗೆ ಬಲಿಬಿದ್ದರು.

(ಮುಂದುವರಿಯುವುದು)


ಆರ್. ವೆಂಕಟರಾಮಯ್ಯ ನಿಧನ

ಕೋಲಾರ ಜಿಲ್ಲೆಯ ರೈತ ಮುಖಂಡರು ಹಾಗೂ ಸಿಪಿಐ(ಎಂ)ನ ಶಾಸಕರೂ ಆಗಿದ್ದ ಆರ್.ವೆಂಕಟರಾಮಯ್ಯ ನವೆಂಬರ್ 26 ರಂದು ಹೃದಯಾಘಾತದಿಂದ ನಿಧನರಾದರು. 1952 ರಲ್ಲಿ ಕೋಲಾರ ಜಿಲ್ಲೆಯಲ್ಲಿ ಜೋಡಿ ಇನಾಮ್ ರದ್ದತಿಗಾಗಿ ನಡೆದ ಚಳುವಳಿಗೆ ಆಕರ್ಷಿತರಾಗಿ ಜಿಲ್ಲೆಯ ರೈತ ಸಮುದಾಯದ ಸಮಸ್ಯೆಗಳಿಗೆ ಧ್ವನಿಯಾಗಿ ಎಡ ಚಳುವಳಿಯಲ್ಲಿ ತೊಡಗಿಸಿಕೊಂಡ ಸರಳ ವ್ಯಕ್ತಿತ್ವದ ಸ್ನೇಹ ಜೀವಿಯಾಗಿದ್ದರು.

ರೈತ ಚಳುವಳಿಯ ಮೂಲಕ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿ ಜಿಲ್ಲೆಯಹಿರಿಯ ಹೋರಾಟಗಾರರೂ ಹಾಗೂ ಅಂದಿನ ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿದ್ದ ವಿ.ವೆಂಕಟಗಿರಿಯಪ್ಪ, ಬಿ.ಕೆ..ಗಂಗಿರೆಡ್ಡಿ, ವಾಸನ್, ಎ.ವಿ.ಅಪ್ಪಸ್ವಾಮಿ ರೆಡ್ಡಿ, ಹೆಚ್.ಎಸ್.ರಾಮರಾವ್, ಮಳ್ಳೂರು ಪಾಪಣ್ಣ, ಆರ್.ಎಸ್.ಬೈರಾರೆಡ್ಡಿ ಮುಂತಾದವರ ಜೊತೆಗೂಡಿ ರೈತ-ಕೂಲಿಕಾರ, ಕಾರ್ಮಿಕರ ಪರವಾದ ಹಲವಾರು ಚಳುವಳಿಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದರು. ಕಾಂಗ್ರೆಸ್ ವಿರುದ್ಧ ಜಿಲ್ಲೆಯಲ್ಲಿ ಒಂದು ಸಂಯುಕ್ತ ರಂಗ ಹುಟ್ಟು ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಜಿಲ್ಲೆಯ ಬಗರ್ ಹುಕುಂ ಚೀಟಿಗಾಗಿ ನಡೆದ ಹೋರಾಟ, 1972 ರಲ್ಲಿ ನಡೆದ ಕಾಂಗ್ರೆಸ್ ಸರ್ಕಾರದ ವಿರುದ್ಧದ ಜೈಲ್ ಭರೋ ಚಳುವಳಿ, 1980 ರಲ್ಲಿ ಗುಂಡುರಾವ್ ಸರ್ಕಾರ ನರಗುಂದ-ನವಲಗುಂದ, ಬಾಗೇಪಲ್ಲಿಗಳಲ್ಲಿ ರೈತರ ಮೇಲೆ ನಡೆಸಿದ ಗೋಲಿಬಾರ್ ವಿರುದ್ಧದ ಹೋರಾಟ, 1994 ರಲ್ಲಿ ಕೋಲಾರ ಜಿಲ್ಲೆಯ ಹಾಲು ಉತ್ಪಾದಕರ ಚಳುವಳಿಯ ನೇತೃತ್ವ ನೀಡಿ ಸಕ್ರಿಯವಾಗಿ ತೊಡಗಿಸಿಕೊಂಡು, ರೈತರ ಕೂಗಿನ ಧ್ವನಿಯಾಗಿದ್ದರು. ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಹಿಂದೆ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿದ್ದರು.

1985 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ನಿಂದ ಸ್ಪರ್ಧಿಸಿ ಮುಳಬಾಗಿಲು ಕ್ಷೇತ್ರದಿಂದ ಆಯ್ಕೆಯಾಗಿ ಶಾಸನ ಸಭೆಯಲ್ಲಿ ರೈತರ, ಜನಸಾಮಾನ್ಯರ ಧ್ವನಿಯಾಗಿದ್ದರು.



ತಮ್ಮ ಕೊನೆಯದಿನಗಳಲ್ಲಿ ಕ್ರಾಂತಿಕಾರಿ ರಾಜಕೀಯದಿಂದ ದೂರವಾಗಿದ್ದರು.

ಅಗಲಿದ ಆರ್.ವಿ.ಯವರಿಗೆ ಸಿಪಿಐ(ಎಂ) ರಾಜ್ಯ ಸಮಿತಿ, ಜಿಲ್ಲಾ ಸಮಿತಿಗಳು ಸಂತಾಪ ಸೂಚಿಸಿವೆ. ಕೋಲಾರದಲ್ಲಿದ್ದ ಅವರ ಪಾರ್ಥಿವ ಶರೀರಕ್ಕೆ ರಾಜ್ಯ ಸೆಕ್ರೇಟರಿಯೇಟ್ ಸದಸ್ಯರಾದ ವಿ.ಜೆ.ಕೆ.ನಾಯರ್, ಎಸ್.ವೈ.ಗುರುಶಾಂತ್, ರಾಜ್ಯ ಸಮಿತಿ ಸದಸ್ಯರಾದ ಪ್ರಸನ್ನ ಕುಮಾರ್ ಹೂಗಳನ್ನಿರಿಸಿ ಸಂತಾಪ ಸಲ್ಲಿಸಿದರು.

ಅಂಚೆ ನೌಕರರ ಮುಷ್ಕರದಿಂದಾಗಿ ಪತ್ರಿಕೆ ಪ್ರತಟವಾಗಲಿಲ್ಲ. ಆದ್ದರಿಂದ ಎರಡೂ ಸಂಚಿಕೆಗಳು ಒಳಗೊಂಡು ಈಗ ಪ್ರಕಟಿಸಲಾಗಿದೆ. ಓದುಗರು ಸಹಕರಿಸಬೇಕಾಗಿ ಕೋರುತ್ತೇವೆ.

- ಸಂಪಾದಕರು

ವಿದ್ಯುತ್ ದರ ಏರಿಕೆ: ಬಡವರಿಗೆ ಅತಿ ದುಬಾರಿ, ಶ್ರೀಮಂತರಿಗೆ ಅಗ್ಗ

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ದರಗಳನ್ನು ಹೆಚ್ಚಿಸಲು ನೀಡಿದ ಆಜ್ಞೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಕೆಲವೇ ದಿನಗಳಲ್ಲಿ ಜಾರಿಗೆ ತರಲಾಗುತ್ತಿದೆ. ಈ ಪ್ರಸ್ತಾವಗಳನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ ನಂತರ ಸರ್ಕಾರ ನಿರ್ಧಾರ ಕೈಗೊಳ್ಳುತ್ತದೆ ಎಂದಿದ್ದ ಮುಖ್ಯಮಂತ್ರಿಗಳು ನಿನ್ನೆ ತಮ್ಮ ಅಭಿಪ್ರಾಯವನ್ನು ತಿರುವಿ ಈ ದರ ಏರಿಕೆಯನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಲಾಗುವುದಿಲ್ಲ ಎಂದು ಘೋಷಿಸಿದ್ದಾರೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸುವ ಕ್ರಿಯೆಯಲ್ಲಿ ಭಾಗವಹಿಸಿದ್ದ ಏಕಮಾತ್ರ ರಾಜಕೀಯ ಪಕ್ಷ ಸಿಪಿಐ(ಎಂ) ಕೆಪಿಸಿಎಲ್‌ನ ಪ್ರಸ್ತಾವಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ತನ್ನ ಪರ್ಯಾಯ ಪ್ರಸ್ತಾವಗಳನ್ನು ಸೂಚಿಸಿತ್ತು. ಮತ್ತು ಆಯೋಗದ ಮುಂದೆ ಹಾಜರಾಗಿ ತನ್ನ ವಾದಗಳನ್ನು ಮಂಡಿಸಿತು. ಈಗ 18.12.20000 ರಂದು ಕೆವಿನಿ ಆಯೋಗದ 222 ಪುಟಗಳ ಆಜ್ಞೆಯನ್ನು ಕೂಲಂಕುಶವಾಗಿ ಅಧ್ಯಯನ ಮಾಡಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಪ್ರಸ್ತಾವಗಳನ್ನು ಹಾಗೂ ಅದನ್ನು ಆಧರಿಸಿದ ಕ.ವಿ.ನಿ. ಆಯೋಗದ ಆಜ್ಞೆ ಅವೈಜ್ಞಾನಿಕ, ಕರ್ನಾಟಕ ವಿದ್ಯುತ್ ನೀತಿಯನ್ನು ಕರ್ನಾಟಕ ಅಸಮಗ್ರ ಅಭಿವೃದ್ಧಿ ಹಾಗೂ ಸಾಮಾಜಿಕ ವಾಸ್ತವತೆಯ ಹಿನ್ನೆಲೆಯಲ್ಲಿ ಪರಿಶೀಲಿಸದ ಪೊಳ್ಳು ವ್ಯಾಯಾಮ.

ಜೊತೆಗೆ ಇಂದು ಚಾಲ್ತಿಯಲ್ಲಿರುವ 1948 ರ ವಿದ್ಯುತ್ ಸರಬರಾಜು ಕಾಯಿದೆ ಹಾಗೂ 1995 ರ ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆಯ ನಿರ್ದೇಶನಗಳನ್ನು ಕೂಡ ಉಲ್ಲಂಘಿಸಿದಂತಾಗಿದೆ.

ದಕ್ಷತೆ, ಸಂಪನ್ಮೂಲಗಳೆಲ್ಲದರ ಸೂಕ್ತ ಬಳಕೆ, ಉತ್ತಮ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಬೇಕೆಂಬ ಆರ್ಥಿಕವಾಗಿ ಅತ್ಯಂತ ಕಡಿಮೆ ಬೆಲೆಯ ವಿದ್ಯುತ್ ಒದಗಿಸುವುದೇ ಗುರಿಯಾಗಿರಬೇಕೆಂದು ಈ ಕಾಯಿದೆಗಳ ನಿರ್ದೇಶನವನ್ನು ಬದಿಗೊತ್ತಿ ಅದಕ್ಕೆ ವಿರುದ್ಧವಾಗಿ ಅದಕ್ಷತೆ, ಅತ್ಯಂತದುಬಾರಿ ವಿದ್ಯುತ್ ತಯಾರಿಸುವ ಸಂಪನ್ಮೂಲಗಳನ್ನು ಪೋಲುಮಾಡುವ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವಂತಿದೆ.

ಕರ್ನಾಟಕದಲ್ಲಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಲಭ್ಯವಿರುವ ಹಾಗೂ ಅತ್ಯಂತ ಅಗ್ಗ ದರದಲ್ಲಿ ತಯಾರಿಸಬಹುದಾದ 7700 ಮೆ.ವಾಟ್ ವಿದ್ಯುತ್‌ನಲ್ಲಿ ಅರ್ಧದಷ್ಟನ್ನು ಅಭಿವೃದ್ಧಿಪಡಿಸದೇ ಇರುವುದೇ, ಅದಕ್ಕೆ ತನ್ನ ಸೀಮಿತ ಹಣ ಸಂಪನ್ಮೂಲವನ್ನು ವಿನಿಯೋಗಿಸದೆ ದುಬಾರಿಯಾದ ಥರ್ಮಲ್ ವಿದ್ಯುತ್‌ಗೆ - ದೂರದಿಂದ ತರುವ ಕಲ್ಲಿದ್ದಲು, ಹೊರ ದೇಶಗಳಿಂದ ಆಮದು ಮಾಡಿಕೊಳ್ಳುವ ಪೆಟ್ರೋಲಿಯಂ ವಸ್ತುಗಳ ಮೇಲೆ ಆದರಿಸಿದ ವಿದ್ಯುತ್ ತಯಾರಿಕೆಗೆ ಮೊರೆ ಹೋಗಿರುವುದೇ ವಿದ್ಯುತ್ ದರ ಏರಿಕೆಗೆ ಮೂಲ ಕಾರಣ.

1985 ರ ವರೆಗೆ ಶೇ 90 ರಿಂದ ನೂರರಷ್ಟು ಜಲವಿದ್ಯುತ್ ಇದ್ದರೆ 1994-95 ರಲ್ಲಿ ಶೇ 64 ಇದ್ದು 2000-2001 ರ ವೇಳೆ ಇದು ಶೇ 37 ಕ್ಕೆ ಇಳಿದಿರುವುದೇ ಈ ಅವೈಜ್ಞಾನಿಕ ವಿದ್ಯುತ್ ನೀತಿಗೆ ಸಾಕ್ಷಿ. ಹೀಗಾಗಿ ಸರ್ಕಾರಗಳ ದುರ್ನೀತಿಯ ಹೊರೆಯನ್ನು ಜನರು ಹೊರಬೇಕೆಂದು ಆಜ್ಞೆ ಮಾಡಲಾಗಿದೆ.

ವಿದ್ಯುತ್ ನೀತಿಗೆ ಹೊಣೆಗಾರನಾಗಿರುವ ರಾಜ್ಯ ಸರ್ಕಾರ, ವಿದ್ಯುತ್ ಉತ್ಪಾದಕರಾದ ಕೆ.ಪಿ.ಸಿ. ಹಾಗೂ ಇತರ ಖಾಸಗಿ ಉತ್ಪಾದಕರನ್ನು ದರ ನಿಗದಿಯಲ್ಲಿ ಪಾಲುಗೊಳ್ಳುವಂತೆ ಮಾಡಬೇಕು.

> **ರಾಜ್ಯಾದ್ಯಂತ ಎಲ್ಲಾ ಜನವಿಭಾಗಗಳಲ್ಲೂ ಈ ದರ ಏರಿಕೆ ಮತ್ತು ವಿದ್ಯುತ್ ನೀತಿಯ ವಿರುದ್ಧ ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಕರೆ ನೀಡಿದೆ**

ಇಲ್ಲದಿದ್ದರೆ ಈ ದರ ನಿಗದಿಯ ವ್ಯಾಯಾಮ ನಿಷ್ಪ್ರಯೋಜಕವೆಂದು ಸಿಪಿಐ(ಎಂ)ಆಯೋಗದ ಮುಂದೆ ವಾದ ಮಂಡಿಸಿತ್ತು.

ಈ ಆಯೋಗದ ಆಜ್ಞೆಯೇ ಇದನ್ನು ಪರೋಕ್ಷವಾಗಿ ಒಪ್ಪಿಕೊಂಡಿದೆ. ರಾಜ್ಯ ಸರ್ಕಾರ ವಿವಿಧ ವಿದ್ಯುತ್ ಸಂಪನ್ಮೂಲಗಳು ಹಾಗೂ ತಂತ್ರಜ್ಞಾನಗಳ ಪರಿಶೀಲನೆ ಮಾಡಿಲ್ಲ ಎಂದಿದೆ. ಈ ಹಿನ್ನೆಲೆಯಲ್ಲಿ ದರ ಏರಿಕೆ ಆಜ್ಞೆ ತಡೆಹಾಕಿ, ಅದಕ್ಷ ಸಂಪನ್ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸಿದಂತಿದೆ.

ಹಾಗೆಯೇ ವಿದ್ಯುತ್ ಸಾಗಾಣಿಕೆ ನಷ್ಟ ಶೇ 38 ರಷ್ಟು ಎಂದರೆ ರಾಜ್ಯ ವಿದ್ಯುತ್ ವ್ಯವಸ್ಥೆಯ ಮುಖಕ್ಕೆ ಹಿಡಿದ ಕನ್ನಡಿ. 1200 ಕೋಟಿ ಮೌಲ್ಯದ ವಿದ್ಯುತ್ ಹೀಗೆ ಸೋರಿಕೆಯಾಗುತ್ತಿದೆ. ಇದರಲ್ಲಿ ಕಳ್ಳತನದ ಲೆಕ್ಕ ಶೇ 15. ಕೈಗಾರಿಕೆಗಳು ಬಳಸುವ ಹೆಚ್‌ಪಿಯಲ್ಲಿ ಈ ನಷ್ಟ ಅಧಿಕವಾಗಿರುವುದು (ಶೇ 20) ಕೂಡ ಕಳ್ಳತನ ಎಲ್ಲಿ ಹೆಚ್ಚು ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಹೀಗೆ ವಿದ್ಯುತ್ ಕಳ್ಳತನ ಹಾಗೂ ಸೋರಿಕೆಯ ಹೊರೆಯನ್ನು ಜನಸಾಮಾನ್ಯರು ಹೊರಬೇಕಾಗಿದೆ.

ಇನ್ನು ಕೃಷಿಗಾಗಿ ವಿದ್ಯುತ್ ಬಳಕೆ ಎಷ್ಟು ಎಂಬುದರ ಸರಿಯಾದ ಲೆಕ್ಕಾಚಾರ ಇನ್ನು ವಿದ್ಯುತ್ ಪ್ರಸರಣ ನಿಗಮದಲ್ಲಿ ಇಲ್ಲ. ತನ್ನ ಅದಕ್ಷತೆ-ವಿದ್ಯುತ್ ಸೋರಿಕೆ ಹಾಗೂ ಭ್ರಷ್ಟಾಚಾರವನ್ನೆಲ್ಲಾ ರೈತರ ಮೇಲೆ ಹೊರಿಸುತ್ತಾ ವಿದ್ಯುತ್ ಸೋರಿಕೆ ಕೇವಲ ಶೇ 18 ಎಂದು ತೋರಿಸಲಾಗುತ್ತಿತ್ತು. ಶೇ 40-45 ಕೃಷಿಯ ಬಳಕೆ ಎಂದು ಬಿಂಬಿಸಿ ವಿದ್ಯುತ್ ರಂಗದ ಎಲ್ಲಾ ತೊಂದರೆಗಳಿಗೂ ಕೃಷಿಗೆ ವಿದ್ಯುತ್ತನ್ನು ಸಬ್ಸಿಡಿ ದರದಲ್ಲಿ ನೀಡುತ್ತಿರುವುದೇ ಎಂದು ಬಿಂಬಿಸಲಾಗುತ್ತಿತ್ತು. ಈಗ ಕೃಷಿಯ ಉಪಯೋಗ ಕೇವ ಶೇ 27 ಎಂಬುದು ಕಂಡು ಬಂದಿದೆ.

1980 ರಲ್ಲಿ ರಾಜ್ಯಾದ್ಯಂತ ಎದ್ದ ರೈತ ಚಳುವಳಿಯ ಅಲೆಯಲ್ಲಿ ರೈತರಿಗೆ ವಿದ್ಯುತ್ ಬಿಲ್‌ನಹೊರೆಯನ್ನು ನೀಗಿಸಲಾಗುತ್ತಿಲ್ಲ ಎಂಬ ಕಾರಣಕ್ಕಾಗಿ ಎಚ್.ಪಿ.ಗೆ ರೂ. 50 ನಂತೆ ದರ ನಿಗದಿ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಶೇ 18 ಮಾತ್ರ ಇದ್ದ ಕೃಷಿ ಬಳಕೆ ಈಗ ಶೇ 276 ಕ್ಕೆ ಏರಿದೆ. ರಾಜ್ಯ ರೇಷ್ಮೆ, ಹೂವು, ತರಕಾರಿ, ಹಣ್ಣು, ಹಾಲು ಉತ್ಪಾದನೆಯಲ್ಲಿ ದೇಶದಲ್ಲಿ ಪ್ರಸಿದ್ಧವಾಗಿದೆ. ಕಳೆದ 20 ವರ್ಷಗಳಲ್ಲಿ ರೈತರಲ್ಲಿ ಇಲ್ಲ ಎಂದು ಪರಿಗಣಿಸಿದ್ದ ವಿದ್ಯುತ್ ಕೊಳ್ಳುವ ಶಕ್ತಿ ಇದ್ದಕ್ಕಿದ್ದಂತೆ ಈಗ ಬಂದಿದೆ ಎಂದು ಆಯೋಗ ಭಾವಿಸಿದೆಯೇ? ಅದು ಎಲ್ಲಾ ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿರುವಾಗ - ಎಂಬುದು ಪ್ರಶ್ನೆ.

ಇದಕ್ಕಾಗಿ ರೈತರಲ್ಲಿ ಪೇಯಿಂಗ್ ಕ್ಯಾಪಾಸಿಟಿಯ ಬಗ್ಗೆ ಅಧ್ಯಯನ ನಡೆಸಬೇಕು. ನಂತರ ಕೃಷಿಗೆ ವಿದ್ಯುತ್ ದರ ಏರಿಕೆ ಬಗ್ಗೆ ತೀರ್ಮಾನ ಮಾಡಬೇಕು. ಆಯೋಗ ಅಧ್ಯಯನ ಮಾಡದಿರುವುದರಿಂದ ಈ ಬಗ್ಗೆ ಯಾವ ಮಾಹಿತಿಯೂ ಇಲ್ಲ ಎಂದು ಒಪ್ಪಿಕೊಂಡಿದೆ. ಮುಂದಿನ ಆರುತಿಂಗಳ ಒಳಗಾಗಿ ಅಧ್ಯಯನ ನಡೆಸಬೇಕು ಎಂದು ಸೂಚಿಸಿದೆ. ಆದರೆ ಪಂಪ್‌ಸೆಟ್‌ಗಳ ದರ ಏರಿಕೆಯನ್ನು ವಿದ್ಯುತ್ ಪ್ರಸರಣ ನಿಗಮ ರೂ. 500 ಎಂದು ಕೋರಿದರೆ ಅದನ್ನು ರೂ. 540 ಕ್ಕೆ ಹಾಗೂ ರೂ. 900 ಏರಿಸಿದೆ. ಇದು ಸಮರ್ಥ ಅಸಮರ್ಥನೀಯ. ಅಧ್ಯಯನ ಮಾಡುವವರೆಗೂ 10 ಹೆಚ್.ಪಿ.ಯ ಒಂದು ಪಂಪ್‌ಸೆಟ್‌ಗೆ ಮಾಡಿರುವ ದರ ಏರಿಕೆಯನ್ನು ತಡೆ ಹಿಡಿಯಬೇಕು.

ಈ ಅಧ್ಯಯನವನ್ನು ಕೆಪಿಟಿಸಿಎಲ್ ತನ್ನ ಮೂಗಿನ ನೇರಕ್ಕೆ ನಡೆಸುವುದಲ್ಲ. ಕೆ.ಇ.ಆರ್.ಸಿ.ಯೇ ಸಮಾಜ ವಿಜ್ಞಾನಿಗಳ ತಂಡ ಒಂದನ್ನು ರಚಿಸಿ ಅಧ್ಯಯನ ಕೈಗೊಳ್ಳಬೇಕು. ಈ ಅಧ್ಯಯನ ಸೂಚಿಯನ್ನು ತಯಾರಿಸುವಲ್ಲಿ ರೈತರ, ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಸಮಿತಿಗಳನ್ನು ಒಳಗೊಳ್ಳಬೇಕು.

ಸಾಮಾನ್ಯ ಗೃಹ ಬಳಕೆದಾರರಿಗೆ ಲೈಫ್ ಲೈನ್(ಜೀವ ಮಾರ್ಗ) ಎಂಬ ಸೂತ್ರವನ್ನು ಬಳಸಿದೆ ಎಂದು ಸೂಚಿಸಿದೆ. ಆದರೆ ತಿಂಗಳಿಗೆ ಕೇವಲ 30 ಯೂನಿಟ್‌ಗಿಂತ ಕಡಿಮೆ ವಿದ್ಯುತ್ ಬಳಸುವ ಬಳಕೆದಾರರಿಗೂ ದರವನ್ನು ಶೇ 25 ಏರಿಸಿದೆ (ಒಟ್ಟು ದರ ಏರಿಕೆಯಾದ ಶೇ 17 ಕ್ಕಿಂತ ಹೆಚ್ಚು). ಈಗಾಗಲೇ ಕರ್ನಾಟಕದಲ್ಲಿ ವಿದ್ಯುತ್ ಬಳಸುವ ಮನೆಗಳ ಸಂಖ್ಯೆ ಕೇವಲ ಶೇ 52.47, ಗ್ರಾಮಾಂತರದಲ್ಲಿ ಕೇವಲ ಶೇ 41.75 ರಾಯಚೂರು, ಗುಲ್ಬರ್ಗಗಳಂತಹ ಹಿಂದುಳಿದ ಪ್ರದೇಶಗಳಲ್ಲಿ ಕೇವಲ ಶೇ 25 ರಿಂದ 26. ಇಂತಹ ಸಂದರ್ಭದಲ್ಲಿ ಮತ್ತಷ್ಟು ಮನೆಗಳ ವಿದ್ಯುತ್ ಸಂಪರ್ಕ ಕಡಿದು ಹೋಗುವ ವಿದ್ಯುತ್ ದರ ಇದು.

ಇನ್ನು ನಗರಗಳ ಬಡವರು ತಿಂಗಳಿಗೆ 30 ರಿಂದ 50 ಯೂನಿಟ್‌ಬಳಸುವವರಿಗಂತೂ ಶೇ 105 ರಷ್ಟು ಏರಿಕೆ ಮಾಡಲಾಗಿದೆ. ಇದು ಕೆಪಿಟಿಸಿಎಲ್ ಕೇಳಿದ್ದಕ್ಕಿಂತಲೂ ಶೇ 3 ರಷ್ಟು ಜಾಸ್ತಿ. ಎಲ್ಲಾ ವಿಭಾಗಗಳಿಗೆ ಮಾಡಿದ ಏರಿಕೆಗಿಂತಲೂ ಇದು ದುಬಾರಿ. ಇದು ವಿದ್ಯುತ್ ಆಯೋಗ ಹೇಗೆ ಬಡವರ ವಿರೋಧಿ ಎಂಬುದನ್ನು ಸೂಚಿಸುತ್ತದೆ.

ಇದೇ ರೀತಿ ದುಡಿಯುವ ಜನ ವಿಭಾಗಗಳು ನಗರಗಳಲ್ಲಿ ತಿಂಗಳಿಗೆ ಸುಮಾರು 150 ಯುನಿಟ್ ಬಳಸುವವರು ಇವರಿಗೆ ವಿದ್ಯುತ್ ಬಿಲ್ ಇನ್ನು ಮುಂದೆ ರೂ. 100 ಕ್ಕಿಂತಲೂ ಹೆಚ್ಚು ದುಬಾರಿಯಾಗುತ್ತಿದೆ.

ಹೀಗೆಯೇ ಕೈಗಾರಿಕೆ, ವ್ಯಾಪಾರಿ ರಂಗಗಳಲ್ಲೂ ಬಡ ವರ್ಗಗಳಿಗೆ ಅತ್ಯಂತ ದುಬಾರಿ ಶ್ರೀಮಂತರಿಗೆ ಅಗ್ಗದ ವಿದ್ಯುತ್ ಎಂಬುದು ಕೆ.ಇ.ಐರ್.ಸಿ. ಹಾಗೂ ಕೆಪಿಟಿಸಿಎಲ್ ನೀತಿಯಾಗಿದೆ.

ವಿದ್ಯುತ್ ಏರಿಕೆ ವಿರುದ್ಧ ಜನವಾದಿ ಮಹಿಳಾ ಸಂಘಟನೆ ಮತ್ತು ಡಿವೈಎಫ್ಐ ಬೆಂಗಳೂರು ಜಿಲ್ಲಾ ಸಮಿತಿಗಳಿಂದ ಡಿ. 23 ರಂದು ಮೈಸೂರುಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ



ಕರ್ನಾಟಕ ಈ ವಾರ: ಒಂದು ನೋಟ

ಎಸ್.ವೈ.ಗುರುಶಾಂತ್

ವಸತಿ ಸಮಸ್ಯೆ: ಕಾಲಹರಣದಲ್ಲಿ ನಿರತ ಸರ್ಕಾರ

ಕರ್ನಾಟಕದಲ್ಲಿ ವಸತಿ ಸಮಸ್ಯೆ ಬಗ್ಗೆ 'ಕಾರ್ಯಪಡೆ'(Task Force) ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. ವರದಿ ಪಡೆದವರು ರಾಜ್ಯದಲ್ಲಿ 'ವಸತಿ ಸಮಸ್ಯೆ' ಇದೆಯೆಂಬ ಸಂಶೋಧನೆಯನ್ನು ಒಪ್ಪಿಬಿಟ್ಟಿದ್ದಾರೆ. ಈ ವರದಿಯಂತೆ 23 ಲಕ್ಷ 74 ಸಾವಿರ ಜನರಿಗೆ ಆಕಾಶವೇ ಆಲಯ. ಚೂರು ನೆಲೆ ಇಲ್ಲದೆ ತಲೆಗೆ ಸೂರೂ ಇಲ್ಲದ ದಿಕ್ಕೇಡಿಗಳು. ಆ ವರದಿಯೇ ತಿಳಿಸಿದಂತೆ ಪ್ರತಿವರ್ಷವೂ ಈ ವಸತಿಹೀನರ ಸಂಖ್ಯೆ ಬೆಳೆಯುತ್ತಲೇ ಇದೆ.

ಇನ್ನೂ....... ಸಿಗದವರು

ವಸತಿ ಸಮಸ್ಯೆ ನೀಗಿಸಲು ಈ ಹಿಂದಿನ ಸರ್ಕಾರಗಳು ಇರಿಸಿಕೊಂಡ ಗುರಿಯನ್ನು ತುಂಬಿದ ಉದಾಹರಣೆಗಳೇ ಇಲ್ಲ. ಹೀಗೆ ಆಡುವುದು ಮಾಡುವುದು ಬೇರೆ ಬೇರೇನೆ. ಎಸ್.ಎಂ.ಕೃಷ್ಣ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರುಷ ಪೂರೈಸಿದೆ. ಚುನಾವಣಾ ಪ್ರಣಾಳಿಕೆಯ ಅನುಷ್ಠಾನದ ಪರೀಶೀಲನಾ 'ಪರೀಕ್ಷೆಯೂ' ಮುಗಿದಿದೆ. ಆದರೆ ಈ ಅವಧಿಯಲ್ಲಿ ಮನೆ ನಿರ್ಮಾಣವನ್ನು ಕೈಗೆತ್ತಿಕೊಳ್ಳಲೇ ಇಲ್ಲ. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿಯಲ್ಲಿ 'ಸೋನಿಯಾಗಾಂಧಿ ನಗರ'. ಎಂಬ ನಾಮಾಂಕಿತ ಕಾಲೋನಿಯಲ್ಲಿ ನೂರು ಮನೆಗಳನ್ನು ರಾತ್ರೋರಾತ್ರಿ ತರಾತುರಿಯಲ್ಲಿ ಕಟ್ಟಿ ವಿವಾದಾಸ್ಪದವಾಗಿರುವುದನ್ನು ಬಿಟ್ಟರೆ, ಒಂದೂ ಮನೆಗಳು ಮೇಲೇಳಲಿಲ್ಲ.

ವಸತಿ ಸಮಸ್ಯೆ ಎಷ್ಟು, ಏನು, ಹಣಕಾಸು ಹಾಗೂ ಯೋಜನೆಗಳೇನು? ಎಂಬ ಅಂಕಿ ಅಂಶಗಳು ಹಾಗೂ ಸಾಧನೆಯ ವರದಿಗಳು ಸರ್ಕಾರದ ಮುಂದಿದೆ. ಹೊಸದಾಗಿ ಶೋಧಿಸಬೇಕಾದ್ದು ಈಗ ಅಗತ್ಯ ಇರಲಿಲ್ಲ. ಹೀಗಾಗಿ ಕಳೆದ ಜನವರಿಯಲ್ಲಿ 'ಕಾರ್ಯಪಡೆ' ರಚಿಸಿ, ವರ್ಷಪೂರ್ತಿ ಅದಕ್ಕಾಗಿ ಕಾಯಬೇಕಿರಲಿಲ್ಲ. ಆದ್ದರಿಂದ ಸರ್ಕಾರದ್ದು ವೃಥಾ ಕಾಲ ತಳ್ಳುವ, ಪ್ರಾಮಾಣಿಕ ಕಾಳಜಿಯನ್ನೇ ತೋರದ ಧೋರಣೆ.

ಏನಿದ್ದರೂ ಕೃಷ್ಣರ ಧ್ಯಾನ. ಹೈಟೆಕ್ ಕಂಪನಿಗಳ ಕಾಳಜಿಯತ್ತ, ಪ್ರೇಮ್‌ಜಿ, ನಾರಾಯಣ ಮೂರ್ತಿಯಂಥವರಿಗೆ ಎಲ್ಲಿಲ್ಲದ ಮುತುವರ್ಜಿ. ಅವರಿಗೆ ಕಣ್ಣು ಮುಚ್ಚಿ ತೆರೆಯುವದರೊಳಗೆ ಎಲ್ಲಕ್ಕೂ ಅಂಗೀಕಾರ. ಇದೇ ಅವರ ಆದ್ಯತೆ. ಬೆಂಗಳೂರನ್ನು ಸಿಂಗಾಪೂರ ಮಾಡುವ 'ಶೃಂಗಾರ ಕೃಷ್ಣ' ಸರ್ಕಾರಕ್ಕೆ ದುಡಿದುಣ್ಣುವ ನಾಡಿನ ಅಭಿವೃದ್ಧಿಗೆ ಅಹೋರತ ಶ್ರಮಿಸುವ ಬಡವರೆಂದರೆ ಕಡು ತಿರಸ್ಕಾರ.

ಈಗಲಾದರೂ ವರದಿಯೆಂಬ ಹುಲ್ಲನ್ನು ಕುದುರೆಯ ಮುಂದೆ ಕಟ್ಟಿ, ಬಾಯಲ್ಲಿ ನೀರೂರಿಸುತ್ತಲೇ ಜಟಕಾಬಂಡಿ ಎಳೆಸುವುದನ್ನು, ನೊಂದವರನ್ನು ವಂಚಿಸುವುದನ್ನು ಬಿಡಬೇಕು. ಕೂಡಲೇ ಕಾರ್ಯಪ್ರವೃತ್ತರಾಗಬೇಕು. ನಿಜವಾದ ಅರ್ಹ ಜನರನ್ನು ಗುರುತಿಸುವುದು, ಅವ್ಯವಹಾರ, ಭ್ರಷ್ಟಾಚಾರ ತಡೆಯುವುದು ಸರ್ಕಾರದ ಅಧಿಕಾರಿಗಳು ಅಥವಾ ಶಾಸಕರುಗಳೇ ಅಂತಿಮ ನಿರ್ಣಯಿಸುವಂತಹ ಅಪ್ರಜಾಸತ್ತಾತ್ಮಕ ಸ್ಥಿತಿ ತೊಲಗಿಸುವುದು, ನಿಜವಾದ ಫಲಾನುಭವಿಗಳಿಗೆ ತಲುಪುವಂತೆ ಜನಸಭೆಗಳ ಮೂಲಕ ಜನರ ನಡುವೆಯೇ

ಪುಟ 9 ಕ್ಕೆ

ಕಾರ್ಮಿಕ ಆಯೋಗ ಯಾರಿಗಾಗಿ?

ಕಾರ್ಮಿಕ ಆಯೋಗವೆಂದರೆ ಕಾರ್ಮಿಕರ ಹಿತರಕ್ಷಣೆ ಹಾಗೂ ಉನ್ನತಿಗಾಗಿ ಎಂದು ತಿಳಿದು ಭಾರೀ ನಿರೀಕ್ಷೆಯಿಂದ ಯಾರಾದರೂ ವೀರಾವೇಶದಲ್ಲಿ ಈ ಆಯೋಗದ ಮುಂದೆ ಅಭಿಪ್ರಾಯ ನೀಡಲು ಶ್ರಮ ಪಟ್ಟಿದ್ದರೆ ಅವರಿಗೆ ಕಾದಿದೆ ಭಾರಿ ನಿರಾಸೆ.

2ನೇ ರಾಷ್ಟ್ರೀಯ ಕಾರ್ಮಿಕ ಆಯೋಗವನ್ನು ರಚಿಸಿದ್ದು ಏತಕ್ಕಾಗಿ? ಯಾರಿಗಾಗಿ? ಈ ಪ್ರಶ್ನೆಗಳು ಸಹಜವಾಗಿಯೇ ಸಾರ್ವಜನಿಕರಲ್ಲಿ ಕುತೂಹಲ ಉಂಟು ಮಾಡಿವೆ. ಈ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಬೆಂಗಳೂರಿಗೆ ನವೆಂಬರ್ 27 ರಂದು ಭೇಟಿ ನೀಡಿದ್ದೂ ಸಾರ್ವಜನಿಕವಾಗಿ ವಿಚಾರಣೆ ನಡೆಸಿ ಸಂಬಂಧಿಸಿದವರ ಅಭಿಪ್ರಾಯಗಳನ್ನು ಪಡೆಯಲು ಬಂದಿದ್ದರು. ಅಲ್ಲದೇ ಕೆಲವು ಕೈಗಾರಿಕೆಗಳಿಗೆ ಭೇಟಿ ನೀಡುವ ಕಾರ್ಯಕ್ರಮವನ್ನು ಆಯೋಗ ಹೊಂದಿತ್ತು. ಆಯೋಗದ ಈ ಕಸರತ್ತುಗಳು ಏನು ಸಾಧಿಸಲಿಕ್ಕಾಗಿ ಅಂದರೆ, ಮುಖ್ಯವಾಗಿ ಈಗ ಕಾರ್ಮಿಕರಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮಾಲೀಕರ ಅವಶ್ಯಕತೆಗಳಿಗನುಗುಣವಾಗಿ ಅವರ ತಾಳಕ್ಕೆ ತಕ್ಕಂತೆ ಸರಿ ಹೊಂದಿಸುವುದಾಗಿದೆ. ಮಾಲೀಕರೆಂದರೆ ಯಾವ ಮಾಲೀಕರು ಅಂತರ್‌ರಾಷ್ಟ್ರೀಯ ವ್ಯಾಪಾರವನ್ನು ಅಡೆತಡೆ ಇಲ್ಲದೆ ಯಾವುದೇ ದೇಶದ ಸಾರ್ವಭೌಮತೆಗೂ ಮೀರಿ ವ್ಯಾಪಾರ ನಡೆಸುವ ಬಹುರಾಷ್ಟ್ರೀಯ ಕಂಪನಿಗಳ ಮಾಲೀಕರು.

2ನೇ ರಾಷ್ಟ್ರೀಯ ಕಾರ್ಮಿಕ ಆಯೋಗವು ಸಾರ್ವಜನಿಕವಾಗಿ ಎಲ್ಲರಿಗೂ ಅವಕಾಶ ನೀಡಿ ಅಭಿಪ್ರಾಯ ಕೇಳುವಾಗ ಸಾರ್ವಜನಿಕರಲ್ಲಿ ಒಂದು ಭ್ರಮೆ ಉಂಟಾಗಬಹುದು. ಕಾರ್ಮಿಕ ಆಯೋಗವೆಂದರೆ ಕಾರ್ಮಿಕರ ಹಿತರಕ್ಷಣೆ ಹಾಗೂ ಉನ್ನತಿಗಾಗಿ ಎಂದು ತಿಳಿದು ಭಾರೀ ನಿರೀಕ್ಷೆಯಿಂದ ಯಾರಾದರೂ ವೀರಾವೇಶದಲ್ಲಿ ಈ ಆಯೋಗದ ಮುಂದೆ ಅಭಿಪ್ರಾಯ ನೀಡಲು ಶ್ರಮ ಪಟ್ಟಿದ್ದರೆ ಅವರಿಗೆ ಕಾದಿದೆ ಭಾರಿ ನಿರಾಸೆ. ಏಕೆಂದರೆ ಈ ಆಯೋಗ ಅಭಿಪ್ರಾಯಗಳನ್ನು ಪಡೆಯುವುದಕ್ಕೂ ಮತ್ತು ಅದು ಅಂತಿಮವಾಗಿ ನೀಡುವ ಶಿಫಾರಸುಗಳಿಗೂ ಯಾವುದೇ ಸಂಬಂಧವಿಲ್ಲ. ಏಕೆಂದರೆ ಏನು ವರದಿ ಕೊಡಬೇಕೆಂದು ಆಯೋಗ ರಚಿಸುವ ಆದೇಶದಲ್ಲಿ ಸ್ಪಷ್ಟವಾಗಿ ನಿಗದಿ ಪಡಿಸಲಾಗಿದೆ. ನಿಗದಿ ಪಡಿಸುವಾಗಲೂ ಅತಿ ಚಾಕಚಕ್ಯತೆಯಿಂದ ಶಬ್ದಗಳನ್ನು ಬಳಸಲಾಗಿದೆ. ಆಯೋಗಕ್ಕೆ ಎರಡು ಅಂಶಗಳ ಬಗ್ಗೆ ತನ್ನ ಶಿಫಾರಸ್ಸು ಕೊಡಬೇಕೆಂದು ಆದೇಶ ನೀಡಲಾಗಿದೆ.

1. ಸಂಘಟಿತ ವಲಯದಲ್ಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಅಸ್ಥಿತ್ವದಲ್ಲಿರುವ ಕಾನೂನುಗಳನ್ನು 'ತರ್ಕಬದ್ಧಗೊಳಿಸಲು' ಸಲಹೆ ನೀಡುಬೇಕು.

2. ಅಸಂಘಟಿತ ವಲಯದ ಕಾರ್ಮಿಕರಿಗೆ ಕನಿಷ್ಟ ಮಟ್ಟದ ರಕ್ಷಣೆ ಒದಗಿಸುವ ಒಂದು Umbrala(ಕೊಡೆಯಂತಹ) ಕಾನೂನು ರಚಿಸುವ ಬಗ್ಗೆ ಸಲಹೆ ನೀಡಬೇಕು.

ಈ ಬಗ್ಗೆ ಸಲಹೆ ನೀಡುವಾಗ 4 ಮುಖ್ಯ ಅಂಶಗಳಿಗೆ ಅನುಕೂಲವಾಗುವಂತೆ ಗಮನ ಹರಿಸಿ ಸಲಹೆ ನೀಡಬೇಕೆಂದು ಆಯೋಗಕ್ಕೆ ಸೂಚಿಸಲಾಗಿದೆ ಅದರಲ್ಲಿ.

1. ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಕಾನೂನುಗಳನ್ನು ಬದಲಾಯಿಸಿರುವ ಅಂಶಗಳಿಗೆ ಪೂರಕವಾಗಿರಬೇಕು.

ಹೀಗಂದರೇನು? ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ಅದೇನೆಂದರೆ ಜಾಗತೀಕರಣ ಪ್ರಕ್ರಿಯೆ, 'ಗ್ಯಾಟ್ ಒಪ್ಪಂದಗಳ ಪರಿಣಾಮವಾಗಿ WTO ಜಾಗತಿಕ ಆಡಳಿತದ ಜಾರಿಗೆ ಬಂದ ಹಿನ್ನೆಲೆಯಲ್ಲಿ ಮೂರು ಮುಖ್ಯ ಮಂತ್ರಗಳನ್ನು ಜಪಿಸಲಾಗುತ್ತಿದೆ. ಅದೇ ಎಲ್‌ಪಿಜಿ. (ಎಲ್) ಉದಾರೀಕರಣ, (ಪಿ)ಖಾಸಗೀಕರಣ, (ಜಿ)ಜಾಗತೀಕರಣ. ಇದಕ್ಕಾಗಿಯೇ ಕೈಗಾರಿಕಾ ಆಡಳಿತಕ್ಕೆ ಸಂಬಂಧಿಸಿ ಇನ್ಸ್‌ಪೆಕ್ಟರ್ ರಾಜ್ ಹೋಗಬೇಕು. ಲೈಸೆನ್ಸ್ ಮತ್ತು

ಎಸ್. ಪ್ರಸನ್ನಕುಮಾರ್

ನಿಯಂತ್ರಣ ಇರಬಾರದು. ಅಂದರೆ ಯಾವುದೇ ಅಡೆತಡೆ ಇಲ್ಲದಂತೆ ವ್ಯಾಪಾರ ವ್ಯವಹಾರ ನಡೆಸಲು, ತೆರಿಗೆ ಕಟ್ಟದೇ Evadge ಮಾಡುವುದು. ಅಲ್ಲದೆ (ಅ)ವ್ಯವಹಾರಗಳಿಗೆ ಕಾರ್ಮಿಕರಿಗೆ ಸಂಬಂಧಿಸಿಯೂ ಯಾವುದೇ ಮಾಲೀಕರಿಗೆ ಯಾವುದೇ ಅಡೆತಡೆ ಇರಬಾರದು. ಅವರ ಮನಸ್ಸಿಗೆ ತಕ್ಕಂತೆ ದುಡಿಸಿಕೊಳ್ಳಲು, ಕಿತ್ತುಹಾಕಲು, ಕೂಲಿಕೊಡದಿರಲು ಎಲ್ಲಕ್ಕೂ ಮುಕ್ತ ಅವಕಾಶಗಳಿರಬೇಕು.

ಅದಕ್ಕಾಗಿಯೇ ಮೊದಲನೇ ಅಂಶದಲ್ಲಿ ಸಂಘಟಿತ ವಲಯದ ಕಾರ್ಮಿಕರ ಕಾನೂನುಗಳನ್ನು ತರ್ಕಬದ್ಧಗೊಳಿಸಲು ಆದೇಶ ನೀಡಿದೆ. ಸಂಘಟಿತ ವಲಯದ ಕಾರ್ಮಿಕರು ಹಲವು ದಶಕಗಳ ತ್ಯಾಗ ಬಲಿದಾನಗಳಿಂದ ಕೆಲವು ಹಕ್ಕುಗಳನ್ನು ಕಾನೂನು ರೂಪದಲ್ಲಿ ಪಡೆದಿದ್ದಾರೆ. ಕಾರ್ಮಿಕ ವರ್ಗದ ತ್ಯಾಗ ಬಲಿದಾನಗಳಿಂದ ಸರಕಾರದ ಪೋಲೀಸರು ಹಾಗೂ ಮಾಲೀಕರ ಗೂಂಡಾಗಳ ಧಾಳಿ ದಬ್ಬಾಳಿಕೆಗಳನ್ನು ಧಿರೋದ್ದಾತವಾಗಿ ಎದುರಿಸಿ ಗುಂಡುಗಳಿಗೆ ಎದೆಕೊಟ್ಟು ವಿರೋಜಿತವಾಗಿ ನಡೆಸಿದ ಹೋರಾಟಗಳ ಪರಿಣಾಮವಾಗಿ ಅನಿವಾರ್ಯವಾಗಿ ರಚಿಸಲಾದ ಕಾರ್ಮಿಕ ಕಾನೂನುಗಳು, ಸರಕಾರ ಅಥವಾ ಮಾಲೀಕರ ಕೃಪಾಕಟಾಕ್ಷಗಳಿಂದ ರಚಿಸಲಾಗಿಲ್ಲ. ಅನಿವಾರ್ಯವಾಗಿ ರಚಿಸಲಾದ ಈ ಕಾನೂನುಗಳನ್ನು ಕೂಡಾ ಜಾರಿಗೊಳಿಸುವಾಗ ಅದು ಹಲವು ಸಂದರ್ಭಗಳಲ್ಲಿ **'ಕನ್ನಡಿಯೊಳಗಿನ ಗಂಟು' ಆಗಿಯೇ ಉಳಿಸಲು ಈಗಿರುವ ಕಾನೂನುಗಳಲ್ಲಿ ತೀವ್ರವಾಗಿ ಪ್ರಯತ್ನಿಸಲಾಗಿದೆ. ಆದ್ದರಿಂದಲೇ ಹಲವು ಕಾನೂನುಗಳು ಸರ್ವೋಜನ ಸುಖಿನೋಭವಂತು' ಎಂದು ಶುಭಾಶಯ ಹೇಳಿ, ಜಾರಿಗೊಳಿಸಲು ಯಾವುದೇ ನಿರ್ದಿಷ್ಟ ಕ್ರಮಗಳಿಲ್ಲದಂತೆ ಮಾಡಲಾಗಿದೆ. ಈಗ ಅಸ್ತಿತ್ವದಲ್ಲಿರುವ ಕಾನೂನುಗಳು ಹೇಗಿವೆ ಅಂದರೆ 'ತಳ ಇಲ್ಲದ ಕೊಡ ಕೊಟ್ಟು ಎಷ್ಟು ಬೇಕಾದರೂ ನೀರು ತುಂಬಿಕೋ' ಎಂಬಂತಿವೆ.**

ಈ ಮೇಲೆ ಚರ್ಚಿಸಿದ 'ತರ್ಕರಹಿತ' ಅಂಶಗಳನ್ನು ಸರಿಪಡಿಸಿ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ತರ್ಕಬದ್ಧಗೊಳಿಸಲು ಈ ಆಯೋಗದ ಉದ್ದೇಶ, ದಿಶೆ, ನಿರ್ದೇಶನ ಇದೆ ಎಂದೇನಾದರೂ ನೀವು ತಿಳಿದರೇ ಅದೊಂದು ಅಪಾಯವೇ ಸರಿ. ಅಂದರೆ ಆಯೋಗದ 'ತರ್ಕಬದ್ಧ' ಗೊಳಿಸುವುದೆಂದರೆ ಕಾರ್ಮಿಕರಿಗೆ ಸಂಘಟಿತ ಕ್ಷೇತ್ರದಲ್ಲಿ ಈಗಿರುವ ಅಲ್ಪಸ್ವಲ್ಪ ರಕ್ಷಣೆ ಹಾಗೂ ಸೌಲಭ್ಯಗಳನ್ನು ಕಿತ್ತುಕೊಳ್ಳುವುದಾಗಿದೆ. ಅದಕ್ಕಾಗಿಯೇ ಆಯೋಗ ರಚಿಸುವಾಗಲೂ ಬಹಳ ಎಚ್ಚರಿಕೆ ವಹಿಸಲಾಗಿದೆ. ಈ ಆಯೋಗದಲ್ಲಿ ಯಾವುದೇ ಎಡ ಕಾರ್ಮಿಕ ಚಳುವಳಿಯ ಮುಖಂಡರನ್ನು ಸದಸ್ಯರಾಗಿ ಮಾಡಿಲ್ಲ. ಬದಲಾಗಿ ಮಾಲೀಕರ ಬಾಲಬಡುಕರ, ಸರಕಾರದ ಬಾಲಬಡುಕರಾದ ಬಿ.ಎಂ.ಎಸ್. ಮುಖಂಡರು ಹಾಗೂ ಜಾಗತೀಕರಣ ನೀತಿಗಳ ಮೂಲಪ್ರತಿಪಾದಕರಾದ ಕಾಂಗ್ರೆ ಒಲವಿನ ಇಂಟಕ್ ಮುಖಂಡರು ಒಳಗೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ವಿಶ್ವಕಾರ್ಮಿಕ ಒಕ್ಕೂಟ(WFTU) ವು ಈ ಜಾಗತೀಕರಣದ ದುಷ್ಪರಿಣಾಮಗಳನ್ನು ತಡೆಯಲು ವಿಶ್ವವ್ಯಾಪಾರ ಸಂಸ್ಥೆಯ 3ನೇ ಮಂತ್ರಿಗಳ ಮಟ್ಟದ ಸಭೆ ಸಿಯಾಟಲ್‌ನಲ್ಲಿ ನಡೆಯುವಾಗ ಸಲ್ಲಿಸಿದ ಮನವಿಯ ಒಂದು ಅಂಶ ನೋಡಬೇಕು.

"ಉರುಗ್ವೆ ಸುತ್ತಿನ ಮಾತುಕತೆ ಹಾಗೂ ವಿಶ್ವ ವ್ಯಾಪಾರ ಸಂಸ್ಥೆ(WTO) ಸ್ಥಾಪನೆಯಿಂದಾಗಿ ಅಂತರ್‌ರಾಷ್ಟ್ರೀಯ ಆರ್ಥಿಕ ಸಂಬಂಧಗಳಲ್ಲಿ ವ್ಯಾಪಾರ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ - ಈಗ ತೀವ್ರ ಆತಂಕ, ಭಯಾಂದೋಲನಗಳು ಬೆಳೆಯಲಾರಂಭಿಸಿವೆ. ಜಾಗತೀಕ ವ್ಯಾಪಾರ ಬಹುರಾಷ್ಟ್ರೀಯ ಸಂಸ್ಥೆಗಳ ಅಧಿಪತ್ಯದಲ್ಲೇ ಮುಂದುವರಿದಿದೆ. ಆಗಲೇ ಜಗತ್ತಿನ ಬಹುತೇಕ ವ್ಯಾಪಾರವು ಬಹುರಾಷ್ಟ್ರೀಯ ಸಂಸ್ಥೆಗಳ ಆಂತರಿಕ ವ್ಯವಹಾರಗಳಲ್ಲೇ ನಡೆಯುತ್ತಿದೆ ಮತ್ತು ಯಾವುದೇ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ನಿಯಂತ್ರಣವಿಲ್ಲದೇ ನಡೆಯುತ್ತಿದೆ"

ಹಿಂಡಸಗೇರಿ ಅವರೇ ನೀವೇಕೆ ಮಾಡಬಾರದು ಮನವಿ

ರಾಜ್ಯ ಸರ್ಕಾರದ ಪರವಾಗಿ ಕಾರ್ಮಿಕ ಸಚಿವರಾದ ಹಿಂಡಸಗೇರಿ ಅವರು 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗಕ್ಕೆ ಕಾರ್ಮಿಕ ಕಾನೂನುಗಳಲ್ಲಿ ಆಗಬೇಕಾದ ಹಲವು ಬದಲಾವಣೆಗಳನ್ನು ಸೂಚಿಸಿ ಕಾರ್ಮಿಕರ ಬಗ್ಗೆ ಅಪಾರ ಕಾಳಜಿ ವ್ಯಕ್ತಪಡಿಸಿದ್ದಾರೆ. ಅದರಲ್ಲಿ ರಾಜ್ಯ ಸರ್ಕಾರವೇ ರಾಜ್ಯ ಮಟ್ಟದ ತಿದ್ದುಪಡಿ ಮಾಡಿ ಜಾರಿಗೊಳಿಸಲು ಸಾಧ್ಯವಿರುವವು ಬಹಳ ಇವೆ. ಏಕೆ ಹಿಂಡಸಗೇರಿ ಅವರು ಅವರ ಕಾಂಗ್ರೆ ನೇತೃತ್ವದ ರಾಜ್ಯ ಸರ್ಕಾರದ ಮುತುವರ್ಜಿಯಿಂದ ಈ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಿಲ್ಲ ಎಂಬುದು ಅರ್ಥವಾಗದ ಸಂಗತಿಯಾಗಿದೆ. ಎಸ್.ಕೆ.ಕಾಂತಾಗೆ ಆದ ಗತಿ ನಿಮಗೆ ಆಗುತ್ತೆ ಅಂಥ ಭಯವೇ? ಹಿಂದೆ ಕೆಲವು ಪ್ರಗತಿಪರ ತಿದ್ದುಪಡಿಗಳನ್ನು 1986 ರಲ್ಲಿ ಎಸ್.ಕೆ.ಕಾಂತಾ ಅವರು ಕಾರ್ಮಿಕ ಸಚಿವರಾಗಿದ್ದಾಗ ಜಾರಿಗೆ ತಂದರು. ಅದರಲ್ಲಿ ಮುಖ್ಯವಾಗಿ ಕಾರ್ಮಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ಅವಕಾಶ, ಮಾಲೀಕರ ಸಂಧಾನ ಸಭೆಗಳಿಗೆ ಹಾಜರಾಗದಿದ್ದಲ್ಲಿ ಅವರಿಗೆ ಸಮನ್ಸ್ ನೀಡಿ ಕಡ್ಡಾಯವಾಗಿ ಹಾಜರಾಗುವಂತೆ ಮಾಡುವ ಅಧಿಕಾರ ಸಂಧಾನ ಅಧಿಕಾರಿಗಳಿಗೆ ನೀಡಲಾಗಿದೆ. ಮುಂತಾಗಿ ಕೆಲವು ಪ್ರಗತಿಪರ ತಿದ್ದುಪಡಿಗಳು ತಂದ ಹಿನ್ನೆಲೆಯಲ್ಲಿ ಅಂದಿನ ಮುಖ್ಯಮಂತ್ರಿಗಳ ಮೇಲೆ ಕೈಗಾರಿಕೋದ್ಯಮಿಗಳು ಒತ್ತಡ ಹೇರಿ ಮಂತ್ರಿಸ್ಥಾನದಿಂದ ಕೈ ಬಿಡುವಂತೆ ಮಾಡುವಲ್ಲಿಯೂ ಯಶಸ್ವಿ ಆಗಿದ್ದರು. ಇದೇ ಸರಕಾರದ ವರ್ಗಗುಣ. ಅದಿಕಾರದ ಚುಕ್ಕಾಣಿ ಹಿಡಿದ ಯಾರೇ ಮಂತ್ರಿ, ಮುಖ್ಯಮಂತ್ರಿಯಿದ್ದರೂ ಬಂಡವಾಳಶಾಹಿಯ ಹಿತರಕ್ಷಣೆಗೆ ದುಡಿಯುತ್ತಾರೆಂಬುದು ಸ್ಪಷ್ಟವಾಗಿದೆ.

ಈಗ ಕಾರ್ಮಿಕ ಸಚಿವ ಹಿಂಡಸಗೇರಿ ಅವರು

1. ರಿಟ್ರೆಂಚ್‌ಮೆಂಟ್ ಅಥವಾ ಕಾರ್ಖಾನೆ ಮುಚ್ಚುವ ಸಂದರ್ಭದಲ್ಲಿ ನೀಡುವ ಪ್ರತಿವರ್ಷ ಸೇವೆಗೆ 15 ದಿನಗಳ ವೇತನ ಪರಿಹಾರ ಬದಲಾಗಿ 45 ದಿನ ನೀಡಲು ತಿದ್ದುಪಡಿ ಒತ್ತಾಯಿಸಿದ್ದಾರೆ.
2. ಚಾಪ್ಟರ್ VA ಮತ್ತು VB ಗೆ ತಿದ್ದುಪಡಿ ಬಯಸಿದ್ದು ಅದರಲ್ಲಿ ಲೇ-ಆಫ್ 45 ದಿನಗಳ ನಂತರ ಕಾರ್ಮಿಕರನ್ನು ರಿಟ್ರೆಂಚ್‌ಮೆಂಟ್ ಮಾಡುವುದನ್ನು ಬದಲಿಸಿ 90 ದಿನಗಳ ಅವಕಾಶ ಇರುವಂತೆ ತಿದ್ದುಪಡಿ ಹಾಗೂ ರಿಟ್ರೆಂಚ್‌ಮೆಂಟ್ ಮತ್ತು ಮುಚ್ಚುವಿಕೆಯ ಸಂದರ್ಭದಲ್ಲಿ ಈಗಿರುವ 15 ದಿನಗಳು ಪ್ರತಿ ವರ್ಷದ ಪರಿಹಾರದ ಬದಲಾಗಿ 45 ದಿನಗಳ ಪರಿಹಾರ ಸೂಚನೆ ನೀಡಿದ್ದಾರೆ. ಅಲ್ಲದೇ ಗ್ರಾಚ್ಯುಟಿ ಕೂಡ ಈಗಿರುವ 15 ದಿನಗಳ ಬದಲಾಗಿ 45 ದಿನಗಳ ಪ್ರತಿವರ್ಷ ಸೇವೆಗೆ ಇರಬೇಕೆಂದು ಕೇಳಿದ್ದಾರೆ. ಮತ್ತು ರಿಟ್ರೆಂಚ್‌ಮೆಂಟ್, ಲೇ ಆಫ್ ಮತ್ತು ಮುಚ್ಚುವಿಕೆ ಸಂದರ್ಭದಲ್ಲಿ ಕನಿಷ್ಟ 100 ಕ್ಕೂ ಹೆಚ್ಚು ಕಾರ್ಮಿಕರಿರುವ ಕೈಗಾರಿಕೆಗಳು ತಪ್ಪದೇ ಸರಕಾರದ ಪರವಾನಗಿ ಪಡೆದ ನಂತರವಷ್ಟೇ ಜಾರಿಗೊಳಿಸಬಹುದು. ಆದರೇ 100 ಕ್ಕೂ ಕಡಿಮೆ ಇರುವ ಕೈಗಾರಿಕೆಯಲ್ಲಿ ಸರಕಾರದ ಪರವಾನಿಗೆ ಪಡೆಯುವುದು ಈಗಿರುವ ಕಾನೂನಿನಲ್ಲಿ ಅಗತ್ಯವಿರುವುದಿಲ್ಲ. ಆದ್ದರಿಂದ 50 ಕ್ಕೂ ಹೆಚ್ಚು ಕಾರ್ಮಿಕರು ಇರುವ ಕೈಗಾರಿಕೆಗಳಿಗೂ ಪರವಾನಿಗೆ ತೆಗೆದುಕೊಳ್ಳುವುದು ಖಡ್ಡಾಯಗೊಳಿಸುವ ತಿದ್ದುಪಡಿ ಬಯಸಿದ್ದಾರೆ. ಅಲ್ಲದೇ ಮಹಿಳಾ ಕಾರ್ಮಿಕರಿಗೆ ಕಾರ್ಮಿಕ ಸಂಘದಲ್ಲಿ ಖಡ್ಡಾಯ ಪಾತ್ರ ಇರುವಂತೆ ವೃತ್ತಿ ಕಾನೂನಿಗೆ ತಿದ್ದುಪಡಿ ಬಯಸಿದ್ದಾರೆ. ಮತ್ತೊಂದು ಬಹಳ ಮುಖ್ಯ ತಿದ್ದುಪಡಿ ಕೋರಿಕೆ ಸಲ್ಲಿಸಿರುವುದೆಂದರೆ ಔದ್ಯಮಿಕ ವಿವಾದಗಳ ಕಾಯಿದೆ ಕಲಂ 33(ಸಿ)(2). ಇದು ಕಾರ್ಮಿಕರಿಗೆ ಮಾಲೀಕರಿಂದ ಬರಬೇಕಾದ ಬಾಕಿ ಹಣವನ್ನು ವಸೂಲಿ ಮಾಡುವ ಕುರಿತಾಗಿದೆ. ಇದರಂತೆ ಕಾರ್ಮಿಕರ ಬಾಕಿಯನ್ನು ಭೂಕಂದಾಯದಂತೆ ವಸೂಲಿ ಮಾಡಬೇಕೆಂದಿದೆ. ಮತ್ತು ಇದಕ್ಕಾಗಿ ಉಪಕಾರ್ಮಿಕ ಆಯುಕ್ತರು ಬಾಕಿ ಇರುವ ಬಗ್ಗೆ ಬಾಕಿ ಪ್ರಮಾಣ ಪತ್ರ ನೀಡಿ ನಂತರ ಕಂದಾಯ ಅಧಿಕಾರಿಗಳು ಅದನ್ನು ವಸೂಲಿ ಮಾಡಿಕೊಡಬೇಕೆಂದಿದೆ. ಒಂದು ವೇಳೆ ಬಾಕಿ ಮೊತ್ತ ಹಣದ ನಿರ್ದಿಷ್ಟ ಮೊತ್ತ ಲೆಕ್ಕ ಹಾಕಲು ಕಾರ್ಮಿಕ ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ. ಇದು ಬಹಳ ಸಂಕೀರ್ಣ ಹಾಗು ಸಂಕ್ಲಿಷ್ಟ ದೀರ್ಘಕಾಲದ ಪ್ರಕ್ರಿಯೆ ಆಗಿದೆ. ಆದ್ದರಿಂದ ಸೂಕ್ತ ತಿದ್ದುಪಡಿಯನ್ನು ಬಾಕಿ ಮೊತ್ತ ಲೆಕ್ಕ ಹಾಕಲು ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಅಧಿಕಾರ ನೀಡಬೇಕೆಂದು ಕೇಳಲಾಗಿದೆ. ಇದು ಸೂಕ್ತವಾದ ಬೇಡಿಕೆ. ಬಾಕಿ ಹಣ ಲೆಕ್ಕ ಹಾಕಲು ಸಾಮಾನ್ಯ ಗಣಿತದ ಪರಿಜ್ಞಾನ ಸಾಕಾಗುತ್ತದೆ. ಆದರೆ ಭೂಕಂದಾಯದ ರೀತಿಯಲ್ಲಿ ವಸೂಲಿ ಎಂಬುದು ಕೂಡ ಬಹಳ ಸಂಕೀರ್ಣ ಹಾಗೂ ದೀರ್ಘಕಾಲ ಹಿಡಿಯುವ ಪ್ರಕ್ರಿಯೆ. ಇದರ ಬಗ್ಗೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಮಾಡಿರುವ ತಿದ್ದುಪಡಿಯಂತೆ ಕಾರ್ಮಿಕರ ಬಾಕಿಯನ್ನು 'ನ್ಯಾಯಾಲಯ ವಿಧಿಸಿದ ದಂಡವಾಗಿ ವಸೂಲಿ ಮಾಡಲು ಅವಕಾಶ ನೀಡಿದ್ದೂ ಇದರಿಂದಾಗಿ ಕಾರ್ಮಿಕರಿಗೆ ಬಾಕಿ ಇರುವ ಹಣವನ್ನು ಮಾಲಿಕ ಕೂಡಲೇ ಪಾವತಿ ಮಾಡದಿದ್ದ ಪಕ್ಷದಲ್ಲಿ ಕೋರ್ಟು ವಿಧಿಸಿದ ದಂಡ ಪಾವತಿ ಮಾಡದಿದ್ದಲ್ಲಿ ಹೇಗೆ ಜೈಲಿಗೆ ಹೋಗಬೇಕಾಗುತ್ತದೆಯೋ ಹಾಗೆ ಜೈಲಿಗೆ ಹೋಗಬೇಕಾಗುತ್ತದೆ. ಇದರಿಂದ ಕಾರ್ಮಿಕರ ಬಾಕಿ ಹಣ ಪಾವತಿ ತೀವ್ರವಾಗಿ ಜಾರಿಯಾಗಲು ಸಾಧ್ಯ. ಇಂತಹ ತಿದ್ದುಪಡಿಯನ್ನೇನು ರಾಜ್ಯ ಸರ್ಕಾರದ ಈ ಸಚಿವ ಹಿಂಡಸಗೇರಿ ಕೇಳಿಲ್ಲ. ಹಿಂಡಸಗೇರಿ ಅವರು ಮೇಲೆ ಹೇಳಿದ ಹಲವು ಪ್ರಗತಿಪರ ತಿದ್ದುಪಡಿಗಳನ್ನು ಮಾಡಲು 2ನೇ ಕಾರ್ಮಿಕ ಆಯೋಗಕ್ಕೆ ಮನವಿ ಮಾಡಿ ಕೇಳಿದ್ದು ಸ್ವಾಗತಾರ್ಹವಾಗಿದೆ. ಆದರೆ ಏಕೆ ಹಿಂಡಸಗೇರಿ ಅವರು ಅವರ ಸರಕಾರದಿಂದಲೇ ಈ ತಿದ್ದುಪಡಿಗಳನ್ನು ರಾಜ್ಯದ ತಿದ್ದುಪಡಿಗಳಾಗಿ ವಿಧಾನಸಭೆಯಲ್ಲಿ ಮಂಡಿಸಬಾರದು? ಇದು ಕೇಂದ್ರ ಸರ್ಕಾರ ಮಾಡಲು ಕೇಳಿರುವ ರಾಜ್ಯ ಸರ್ಕಾರವು ಅವರೇ ತಿದ್ದುಪಡಿ ತರಲು ಏನು ಅಡ್ಡಿ? ಯಾರು ಅಡ್ಡಿ?

ರಾಜ್ಯ ಸರ್ಕಾರದ ಮೇಲಿನ ಪ್ರಗತಿಪರ ತಿದ್ದುಪಡಿಗಳಲ್ಲದೆ ಕೆಲವು ಪ್ರತಿಗಾಮಿ, ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಬಯಸಿದ್ದಾರೆ. ಅದರಲ್ಲಿ ಕಾರ್ಮಿಕ ಸಂಘಗಳಲ್ಲಿ ಹೊರಗಿನ ಕಾರ್ಮಿಕ ಮುಖಂಡರು ಇರಬಾರದು, ಏಕೆಂದರೆ ಸರಕಾರವು ಕಾರ್ಮಿಕರಿಗೆ ಬಹಳ ತರಬೇತಿ ನೀಡಿಬಿಟ್ಟಿದೆಯಂತೆ.

ಅಂಚೆನೌಕರರ ಅಭೂತಪೂರ್ವ ಮುಷ್ಕರ



ಡಿಸೆಂಬರ್ 12 ರಂದು ಅಂಚೆ ನೌಕರರ ಬೃಹತ್ ಪ್ರತಿಭಟನೆ ಬೆಂಗಳೂರಿನಲ್ಲಿ ನಡೆಯಿತು.

ಜನರ ನಡುವಿನ ಸಂಪರ್ಕದ ಕೊಂಡಿ ಕಳಚಿತ್ತು. ಜಗತ್ತಿನಲ್ಲೇ ಅತ್ಯಂತ ಯಶಸ್ವಿ ಎಂದು ಹೆಸರಾದ ಭಾರತದ ಲಕ್ಷಾಂತರ ಅಂಚೆ ಕೇಂದ್ರಗಳು ಸ್ಥಗಿತಗೊಂಡವು. ಅಂಚೆ ಪತ್ರದ ಮೂಟೆಗಳು ದಿನದಿಂದ ದಿನಕ್ಕೆ ಗುಡ್ಡೆಗಳಾದವು. ದೇಶದ ಮೂಲೆ ಮೂಲೆಗಳಲ್ಲಿ ಕೆಲಸ ಮಾಡುತ್ತಿರುವ ಆರು ಲಕ್ಷಕ್ಕೂ ಹೆಚ್ಚು ನೊಂದ ನೌಕರರ ಆಕ್ರೋಶ ಮುಗಿಲು ಮುಟ್ಟಿದೆ. ಆಶ್ವಾಸನೆಗಳ ಸುರಿಮಳೆಯನ್ನೇ ಹರಿಸಿದ ಬಿಜೆಪಿ ನೇತೃತ್ವದ ಸರಕಾರದ ನೌಕರ ವಿರೋಧಿ ನೀತಿಯ ವಿರುದ್ಧ ಅಂಚೆ ನೌಕರರು ಸೆಟೆದು ನಿಂತಿದ್ದಾರೆ. ಮೂರು ನೌಕರ ಸಂಘಟನೆಗಳು ಒಂದಾಗಿ ಹೋರಾಟ ಸಮಿತಿ ರಚಿಸಿ ಐಕ್ಯತೆಯ ಕಹಳೆಯನ್ನು ಊದಿದರು. ದೆಹಲಿ ಹೈಕೋರ್ಟ್ ಡಿಸೆಂಬರ್ 15 ರ ಒಳಗೆ ಮುಷ್ಕರವನ್ನು ಇತ್ಯರ್ಥಗೊಳಿಸಬೇಕೆಂದು ಸೂಚಿಸಿದ್ದರೆ ವಾಜಪೇಯಿ ಸರಕಾರ ಮುಷ್ಕರವನ್ನು ಕಾನೂನು ಬಾಹಿರ ಎಂದು ಘೋಷಿಟ್ಟು. ಇದು ಡಿಸೆಂಬರ್ 5 ರಂದು ದೇಶದ ಅಂಚೆ ನೌಕರರು ಆರಂಭಿಸಿದ ಅನಿರ್ದಿಷ್ಟ ಮುಷ್ಕರದ ಕಿರುನೋಟ.

ಅಂಚೆ ನೌಕರರ ಬೇಡಿಕೆ ಇಂದು ನೆನ್ನೆಯದಲ್ಲ. 7 ವರ್ಷಗಳಿಗಿಂತಲೂ ಹಳೆಯದು. ನಾರಾಯಣ ಮೂರ್ತಿ, ಪ್ರೇಮ್ ಜಿ, ಅಂಬಾನಿಯಂತಹ ಭಾರಿ ಕುಳಗಳು, ವಿದೇಶಿ ಕಂಪನಿಯಂತಹ ದೇಶದ್ರೋಹಿಗಳು ಬಾಯಿ ಬಿಡುವ ಮೊದಲೇ 'ಬಾಯಿಗೆ ತುರುಕುವ' ವಾಜಪೇಯಿ-ಸಿನ್ಹಾ-ಪಾಸ್ವಾನ್ ಕೂಟ, ಅಂಚೆ ನೌಕರರ ದೀರ್ಘ ಹೋರಾಟದ ನಂತರವೂ ಕಿವುಡು ಕಿವಿಯನ್ನು ಸರಿಪಡಿಸಿಕೊಂಡಿಲ್ಲ. ಮೂರು ಲಕ್ಷಕ್ಕೂ ಹೆಚ್ಚು ಇಲಾಖೇತರ ನೌಕರರ ಬವಣೆಯ ಕುರಿತು ಜಸ್ಟೀಸ್ ತಳವಾರ್ ಸಮಿತಿ 1997 ರ ಏಪ್ರಿಲ್ 30 ರಂದು ಹಲವಾರು ಶಿಫಾರಸುಗಳನ್ನು ನೀಡಿದರೂ ಜಾರಿಗತವಾಗಿಲ್ಲ. 1996 ಜನವರಿ 1 ರಿಂದ 5ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡುವಾಗ ಆದ ತಪ್ಪುಗಳನ್ನು ಸರಿಪಡಿಸಲು ಬಾರಿ ಬಾರಿಗೂ ಕೇಳಿದರೂ ಕಿವುಡು ಕಿವಿ ನೆಟ್ಟಗಾಗಲಿಲ್ಲ.

1997ರ ನವೆಂಬರ್ 18 ರಂದೇ ಅನಿರ್ದಿಷ್ಟ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಲಿಖಿತ ಒಪ್ಪಂದದ ಆಧಾರದಲ್ಲಿ ಮುಷ್ಕರವನ್ನು ಮುಂದೂಡಲಾಯಿತು. ಆದರೆ ಒಪ್ಪಂದ ಕಾಗದದಲ್ಲೇ ಉಳಿಯಿತು. ಜಾರಿಯಾಗಲಿಲ್ಲ. 1998 ರ ಜುಲೈ 9 ರಿಂದ ಅನಿರ್ದಿಷ್ಟ ಮುಷ್ಕರ ನಡೆಯಿತು. ಪ್ರಧಾನ ಮಂತ್ರಿ ಮತ್ತು ಸಂಪರ್ಕ ಖಾತೆಯ ಮಂತ್ರಿ ಲೋಕಸಭೆಯಲ್ಲಿ ವಾಗ್ದಾನ ಮಾಡಿದರೂ, ಅದು ದಾಖಲಾಯಿತೇ ಹೊರತು ನೌಕರರಿಗೆ ದಕ್ಕಲಿಲ್ಲ. ಪುನಃ ಮುಷ್ಕರದ ಕರೆ, ಮಾತುಕತೆ - ಒಪ್ಪಂದ.

ಒಂದೇ ಬೇಡಿಕೆಯ ಪಟ್ಟಿ ಆದಾರದಲ್ಲಿ 3 ವರ್ಷ 6 ತಿಂಗಳಲ್ಲಿ 4ನೇ ಬಾರಿಗೆ ಅನಿರ್ದಿಷ್ಟ ಮುಷ್ಕರದಕರೆ ನೀಡಲಾಗುತ್ತಿದೆ ಎಂದರೆ ಯಾರಾದರೂ ನಂಬುತ್ತಾರೆಯೇ? ಆದರೆ ಇದು ಸತ್ಯ. ದುಡಿಯುವ ವರ್ಗದ ಹಿತದಲ್ಲಿ ನಂಬಿಕೆ ಇರುವ ಎಲ್ಲರೂ ಈ ಮುಷ್ಕರವನ್ನು ಮನಸಾರೆ ಬೆಂಬಲಿಸಬೇಕಾಗಿದೆ.ಇದೇ ಸಂದರ್ಭದಲ್ಲಿ ಪ.ಬಂಗಾಳ ಮತ್ತು ಕೇರಳದ ಪ್ರಜ್ಞಾವಂತ ಎಲ್ಲಾ ಸರಕಾರಿ ನೌಕರರು ಕ್ರಮವಾಗಿ 4 ಗಂಟೆ ಮತ್ತು 2 ಗಂಟೆಗಳ ಮುಷ್ಕರ ನಡೆಸಿ ತಮ್ಮ ಬೆಂಬಲವನ್ನು ಸಾರಿದ್ದಾರೆ. ವರ್ಗ ಐಕ್ಯತೆಯ ಹಿರಿಮೆಯನ್ನು ಮೆರೆದಿದ್ದಾರೆ.

ಕರ್ನಾಟಕದಲ್ಲಿ ಮುಷ್ಕರದ ಬಿಸಿ: ಕರ್ನಾಟಕದಲ್ಲೂ ಮುಷ್ಕರ ಅತ್ಯಂತ ಯಶಸ್ವಿಯಾಗಿ ನಡೆದು ರಾಜ್ಯ ಕೇಂದ್ರವಾದ ಬೆಂಗಳೂರಿನಿಂದ ಹಿಡಿದು ಬಹುತೇಕ ಎಲ್ಲಾ ಹಳ್ಳಿಗಳಲ್ಲೂ ಅಂಚೆ ಕಛೇರಿ ಕೆಲಸ ಸ್ಥಗಿತಗೊಂಡಿತ್ತು. ಮುಷ್ಕರ ನಿರತ ನೌಕರರು ಮನೆಯಲ್ಲಿ ಕೂರದೆ, ಸಭೆ ಮೆರವಣಿಗೆಗಳನ್ನು ನಡೆಸಿದರು. ವಿವಿಧ ಕಾರ್ಮಿಕ, ನೌಕರ ಸಂಘಟನೆಗಳಿಂದ ಸೌಹಾರ್ದ ಬೆಂಬಲ ನೀಡಿದವು. ಸಿಐಟಿಯು ಪರವಾಗಿ ಕಾಂ. ವಿಜೆಕೆನಾಯರ್, ಕಾರ್ಯದರ್ಶಿಗಳಾದ ವರಲಕ್ಷ್ಮಿ ಮೀನಾಕ್ಷಿ ಸುಂದರಂ, ವಿವಿಧ ಸಂದರ್ಭಗಳಲ್ಲಿ ಮುಷ್ಕರ ನಿರತ ನೌಕರರಿಗೆ ಬೆಂಬಲ ಕೋರಿ ಮಾತನಾಡಿದರು. ಎಐಟಿಯುಸಿ, ಬಿಎಂಎಸ್ ಸಂಘಟನೆಯ ಮುಖಂಡರೂ ಮುಷ್ಕರಕ್ಕೆ ಬೆಂಬಲ ನೀಡಿದ್ದು ಕೇಂದ್ರ ಸರ್ಕಾರವು ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಮೈಸೂರು, ಮಂಡ್ಯ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ನೌಕರರು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು. ಈ ರ್‍ಯಾಲಿಯನ್ನು ಉದ್ದೇಶಿಸಿ ಟೆಲಿಕಾಂ ನೌಕರರ ಮುಖಂಡರು, ಕೇಂದ್ರ ಸರಕಾರಿ ನೌಕರರ ಸಂಘಟನೆಯ ಮುಖಂಡರು ಮಾತನಾಡಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕಿಯರ ಸಂಘದ ಅಧ್ಯಕ್ಷೆ ರಮಾದೇವಿ ಮುಷ್ಕರಕ್ಕೆ ಪೂರ್ಣ ಬೆಂಬಲವನ್ನು ಸೂಚಿಸಿದ್ದಾರೆ.

ಮುಷ್ಕರ ಮುರಿಯಲು ಪ್ರಯತ್ನ: ಈ ಮಧ್ಯೆ ಅಂಚೆ ನೌಕರರ ಹೋರಾಟಕಾರೀ ಐಕ್ಯತೆಯನ್ನು ಮುರಿಯಲು, ಸರಕಾರದ ಆಡಳಿತ ಯಂತ್ರವು ಸತತ ಪ್ರಯತ್ನವನ್ನು ಮಾಡಿತು. ದೆಹಲಿ ಹೈಕೋರ್ಟ್ ಆದೇಶದ ಹೆಸರಿನಲ್ಲಿ 'ಎಸ್ಮಾ' ವನ್ನು ಬಳಸುವುದಾಗಿ ಸಚಿವ ಪಾಸ್ವಾನ್ ಕೆಣಕಿದರೆ, ಸೇನೆ ಮತ್ತು ನಿರುದ್ಯೋಗಿ ಯುವಕರನ್ನು ಮುಷ್ಕರ ನಿರತರ ವಿರುದ್ಧ ಎತ್ತಿಕಟ್ಟುವ ಕೆಲಸ ಸತತವಾಗಿ ನಡೆಯುತ್ತಿದೆ. ಅಂಚೆ ಛೇರಿಯ ಕೆಲಸದ ಬಗ್ಗೆ ಸ್ವಲ್ಪವೂ ಜ್ಞಾನ ಇಲ್ಲದ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಈ ಕೆಲಸಗಳಿಗೆ ಬಳಸಿಕೊಳ್ಳಲಾಯಿತು. ಕಾಲೇಜು ವಿದ್ಯಾರ್ಥಿಗಳನ್ನು, ನಿರುದ್ಯೋಗಿ ಯುವಕರನ್ನು ಈ ಕೆಲಸಗಳಿಗೆ ಬಳಸಿಕೊಳ್ಳುವ ಪ್ರಯತ್ನವೂ ನಡೆಯಿತು.

ಈಗಾಗಲೇ ಬೃಹತ್ ಸಂಖ್ಯೆಯಲ್ಲಿ ಬೃಹತ್ ಗಾತ್ರದ ಕೋರಿಯರ್ ಕಂಪನಿಗಳು ಅಂಚೆ ಸೇವೆಯ ಬಹುಪಾಲು ಭಾಗವನ್ನು ಖಾಸಗಿ ಕ್ಷೇತ್ರಕ್ಕೆ ಸೆಳೆದುಕೊಂಡಿದೆ. ಕೇಂದ್ರ ಸರಕಾರದ ನೀತಿಯ ಭಾಗವಾಗಿ ಈಗಾಗಲೇ ನೌಕರರ ಸಂಖ್ಯೆಯಲ್ಲಿ ಬಾರಿ ಕಡಿತ ಉಂಟಾಗಿದೆ. ಅದರಲ್ಲೂ ಶೇಕಡಾ 50 ರಷ್ಟಿರುವ ಇಲಾಖೇತರ ನೌಕರರು ಯಾವುದೇ ಕೆಲಸದ ಭದ್ರತೆ ಇಲ್ಲದೆ, ನಿವೃತ್ತಿ ಸೌಲಭ್ಯಗಳಿಲ್ಲದೆ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಮಂತರಿಗೆ ಎಲ್ಲಾ ಸವಲತ್ತುಗಳನ್ನು ಧಾರೆ ಎರೆದು ಕೊಡುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ತನ್ನ ನೌಕರರಿಗೆ ನೀಡುವ ಬಳುವಳಿ ಇದು.

- ಬಾಲಕೃಷ್ಣ ಶೆಟ್ಟಿ

ಬಿಜೆಪಿ ನಿಲುವು : ಅಂದು ಮುಷ್ಕರಕ್ಕೆ ಬೆಂಬಲ - ಇಂದು ಮುರಿಯುವ ಮೂರ್ಖ ಯತ್ನ

ಇಲಾಖೇತರ ನೌಕರರನ್ನು ಖಾಯಂಗೊಳಿಸಬೇಕು, ಅವರಿಗೆ ನಿವೃತ್ತಿ ಸೌಲಭ್ಯ ನೀಡಬೇಕು ಎಂಬುದು ಬಹಳ ಹಳೆಯ ಬೇಡಿಕೆ. ಗ್ರಾಮೀಣ ಪ್ರದೇಶಗಳಿಗೆ ಅಂಚೆ ವ್ಯವಸ್ಥೆ ವಿಸ್ತರಿಸಬೇಕೆಂದು ಬಯಸಿದ ಕೇಂದ್ರ ಸರಕಾರ ಅಂಚೆ ಕಚೇರಿಗಳನ್ನು ತೆರೆದರೂ ಅಲ್ಪಾವಧಿ ನೌಕರರನ್ನು ನೇಮಿಸಿ, ಅವರಿಗೆ ನೀಡುತ್ತಿದ್ದ ವೇತನ ತಿಂಗಳಿಗೆ ರೂ. 100, 150 ಮಾತ್ರ. ಬರಬರುತ್ತಾ ಅಂಚೆ ಕಚೇರಿಯ ಕೆಲಸ ಹೆಚ್ಚಾಗಿ ನೌಕರರು ಪೂರ್ಣಾವಧಿ ಕೆಲಸ ಮಾಡಬೇಕಾಗಿ ಬಂದರೂ, ಅವರ ವೇತನ ಹೆಚ್ಚಾಗಿರಲಿಲ್ಲ. ಖಾಯಂ ಆಗಲಿಲ್ಲ. ಬದಲಾಗಿ ಅವರನ್ನು ಇಲಾಖೆಯೇತರ ನೌಕರರು ಎಂದು ಹೆಸರಿಸಲಾಯಿತು. ಅಂದರೆ 3 ಲಕ್ಷ ನೌಕರರನ್ನು ಅಂಚೆ ಇಲಾಖೆ ನೌಕರರಲ್ಲ ಎಂದು ಪರಿಗಣಿಸಲಾಯಿತು.

ಇತ್ತ ನೌಕರ ಸಂಘಟನೆಗಳು ತಮ್ಮಂತೆ ದುಡಿಯುತ್ತಿರುವ ಸಹೋದ್ಯೋಗಿಗಳ ಸಮಸ್ಯೆಯನ್ನು ಕೈಗೆತ್ತಿಕೊಂಡಿತು. ಸರಕಾರಕ್ಕೆ ಮನವಿ ಸಲ್ಲಿಸಿತು. ಫಲಕಾರಿಯಾಗದೇ ಉಳಿದಾಗ 1993 ಡಿಸೆಂಬರ್‌ನಿಂದ ಅನಿರ್ದಿಷ್ಟಾವಧಿ ಮುಷ್ಕರದ ಕರೆ ನೀಡಿತು. 1968 ರಲ್ಲಿ ಸಮಸ್ತ ಕೇಂದ್ರ ಸರಕಾರಿ ನೌಕರರ ನಡೆಸಿದ ಐತಿಹಾಸಿಕ ಮುಷ್ಕರದ ನಂತರ ಪ್ರಥಮ ಬಾರಿಗೆ 1993 ರ ಐಕ್ಯ ಮುಷ್ಕರ ಅಂಚೆ ಇಲಾಖೆಯಲ್ಲಿ ನಡೆದಿತ್ತು.

ಅಂದು ವಿರೋಧ ಪಕ್ಷವಾಗಿದ್ದ ಬಿಜೆಪಿ ಮುಷ್ಕರಕ್ಕೆ ಪೂರ್ಣ ಬೆಂಬಲ ಸೂಚಿಸಿತ್ತು. ರಾಜ್ಯ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಜಸ್ವಂತ್ ಸಿಂಗ್ ನೇತೃತ್ವದಲ್ಲಿ ಸುಷ್ಮಾಸ್ವರಾಜ್ ಮತ್ತಿತರ ಮುಖಂಡರು ಸಭಾತ್ಯಾಗ ನಡೆಸಿದರು. ಅಂದು ಸಂಪರ್ಕ ಸಚಿವರಾದ ಭ್ರಷ್ಟ ಸುಖರಾಂ ವಿರುದ್ಧ ಘೋಷಣೆ ಕೂಗುತ್ತಾ ಹೊರನಡೆದರು.

ಆದರೆ ಇಂದು? ಗಂಗಾ-ಕಾವೇರಿಯಲ್ಲಿ ಸಾಕಷ್ಟು ನೀರು ಹರಿದಿದೆ. ರಾಜ್ಯಸಭೆ, ಲೋಕಸಭೆಯಲ್ಲಿ ಹಲವು ಕುರ್ಚಿಗಳು ಬದಲಾಗಿವೆ. ವಿರೋಧ ಪಕ್ಷವಾಗಿ ಕೂತಿದ್ದ ಬಿಜೆಪಿ ಆಡಳಿತ ಸೂತ್ರಕ್ಕೆ ನೇತೃತ್ವ ನೀಡುತ್ತಿದೆ. ಸಂಪರ್ಕಖಾತೆಗಾಗಿ ರಚಿತವಾದ ಮಂತ್ರಿವರ್ಯರ ಗುಂಪಿಗೆ ಎಲ್.ಕೆ.ಅಡ್ವಾಣಿಯವರೇ ಮುಖ್ಯಸ್ಥ. ಡಿಸೆಂಬರ್ 14 ರಂದು ಅವಸರವಾಗಿ ಕರೆದ ಸಭೆಯಲ್ಲಿ ಅವಸರದ ನಿರ್ಣಯ - ಅಂಚೆ ಇಲಾಖೆ ನೌಕರರ ಮುಷ್ಕರ ಕಾನೂನು ಬಾಹಿರ!

ಇನ್ನೊಂದು ಸೋಜಿಗ -ಅಂದು ಭ್ರಷ್ಟರಾಗಿದ್ದ ಸುಖರಾಂ ಇಂದು ಬಿಜೆಪಿಯ ಮಿತ್ರ.

ಸರ್ಕಾರ ಬೇಡಿಕೆ ಈಡೇರಿಸದೇ ಎಸ್ಮಾ ಬಳಸಿ ಮುಷ್ಕರ ಮುರಿಯಲು ಮುಂದಾಯಿತು. ಇದಕ್ಕೆ ಕಾಂಗ್ರೆಸ್ ಸೇರಿಕೊಂಡಿತು. ಮುಖ್ಯ ಬೇಡಿಕೆಗಳು ಈಡೇರದೇ ಮುಷ್ಕರ ಮುಗಿದಿದೆ.

ಧನಂಜಯ - ಮಣಿಕ್ಕನ್ ಸಂಬಂಧ? ಬಯಲಾದ ಗುಟ್ಟು

ಕೇರಳದ ಕಳ್ಳಭಟ್ಟಿ ದುರಂತ

ಮಣಿಕ್ಕನ್ ಎನ್ನುವ ಹೆಂಡದ ದೊರೆ ಕಳ್ಳಭಟ್ಟಿ ಮಾರಾಟ ಮಾಡುವ ಕುಖ್ಯಾತ ವ್ಯಕ್ತಿ. ಇತ್ತೀಚಿಗೆ ಕೇರಳದಲ್ಲಿ 35 ಅಮಾಯಕರ ಸಾವಿಗೆ ಕಾರಣವಾದ ಪ್ರಕರಣದ ಪ್ರಮುಖ ಆರೋಪಿ.

ಧನಂಜಯ ಕುಮಾರ್ ಕೇಂದ್ರ ಸರ್ಕಾರದ ಜವಳಿ ಖಾತೆಯ ಮಂತ್ರಿ. ಕೇರಳಕ್ಕೆ ಚಾಚಿಕೊಂಡಿರುವ ಕರ್ನಾಟಕದ ಮಂಗಳೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಲೋಕಸಭಾ ಸದಸ್ಯ.

ಹಾಗಾದರೆ ಧನಂಜಯ ಕುಮಾರ್ ಮತ್ತು ಮಣಿಕ್ಕನ್‌ಗೆ ಎಲ್ಲಿಯ ಸಂಬಂಧ.

ಕೇರಳದಲ್ಲಿ ಬಿಜೆಪಿ ನಗಣ್ಯ

ಇದುವರೆಗೆ ಒಂದು ಅಸೆಂಬ್ಲಿ ಸ್ಥಾನವನ್ನು ಗಳಿಸಲಾಗಲಿಲ್ಲ. ಆದರೆ ಕೇಂದ್ರದಲ್ಲಿ ಹಿಡಿದಿರುವ ಅಧಿಕಾರದ ದುರಪಯೋಗ ನಡೆಯುತ್ತಿದೆ. ರಾಜ್ಯದಲ್ಲಿ ಬಿಜೆಪಿಯನ್ನು ಬಲಪಡಿಸಲು ಹೊರರಾಜ್ಯಗಳಿಂದ 'ಎಲ್ಲಾ' ಬೆಂಬಲ ಪಡೆಯಲಾಗುತ್ತಿದೆ. ಅದರ ಭಾಗವಾಗಿ ಕೇಂದ್ರದ ಜವಳಿ ಸಚಿವ ಧನಂಜಯ ಕುಮಾರ್ ಗುಟ್ಟಾಗಿ ಕೇರಳಕ್ಕೆ ಭೇಟಿ ನೀಡುತ್ತಿದ್ದಾರೆ. ಅವರ ಭೇಟಿ ಎಷ್ಟು ಗುಪ್ತವಾಗಿದೆ ಎಂದರೆ ಕೇರಳ ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೂ ಸರ್ಕಾರಿ ಶಿಷ್ಟಾಚಾರದಂತೆ ತಿಳಿದಿಲ್ಲ! ಸರಕಾರಿ ಶಿಷ್ಟಾಚಾರದ ಪ್ರಕಾರ, ಕೇಂದ್ರದ ಹೊರ ರಾಜ್ಯದ ಮಂತ್ರಿಗಳು ಮುಖ್ಯಕಾರ್ಯದರ್ಶಿ ಯವರಿಗೆ ತಿಳಿಸಲೇಬೇಕು.

ಕೇರಳಕ್ಕೆ ಭೇಟಿ ನೀಡುವುದು ಮಾತ್ರವಲ್ಲ,




ಕೇಂದ್ರ ಜವಳಿ ಸಚಿವ ಧನಂಜಯ ಕುಮಾರ್

ಕಳ್ಳಭಟ್ಟಿ 'ಕಿಂಗ್ ಪಿನ್' ಮಣಿಕ್ಕನ್ ಅವರನ್ನು ಗುಪ್ತವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಇದು ಬಹಿರಂಗವಾದಾಗ ಬಿಜೆಪಿ ಇಕ್ಕಟ್ಟಿನಲ್ಲಿ ಸಿಲುಕಿದ್ದು ಅವರಲ್ಲಿ ಆಂತರಿಕ ಕಲಹ ಆರಂಭವಾಗಿದೆ. ರಾತ್ರಿ ಬೆಳಗಾಗುವುದರೊಳಗೆ ಕೆಲವು ಬಿಜೆಪಿ ಮುಖಂಡರು ದಿಢೀರನೇ ಶ್ರೀಮಂತರಾಗಿದ್ದಾರೆ. ಇದು ಹೇಗೆ ಸಾಧ್ಯ ಎಂದು ಉಳಿದವರು ಪ್ರಶ್ನಿಸುತ್ತಿದ್ದಾರೆ.

ಅಧಿಕಾರದ ರುಚಿ ಕಂಡ ಕೆಲವೇ ತಿಂಗಳಲ್ಲಿ 'ಶಿಸ್ತುಬದ್ಧ' ಪಕ್ಷದ ಮುಖಂಡರು ಅಧಃಪತನ ಆರಂಭವಾಗಿರುವುದರ ಒಂದು ಉದಾಹರಣೆ. ಆದರೆ ಧನಂಜಯಕುಮಾರ್‌ನ ಭೇಟಿ, ನಡೆಸುತ್ತಿರುವ ಗುಪ್ತ ಮಾತುಕತೆ, ವ್ಯವಹಾರಗಳು ಯಾವ ಪಿತೂರಿಯ ಸಿದ್ಧತೆಗಳು ಎಂಬುದು. ಮುಂದಿನ ವರ್ಷವೇ ವಿಧಾನಸಭೆಗೆ ಕೇರಳದಲ್ಲಿ ಚುನಾವಣೆಗಳು ನಡೆಯಲಿವೆ.

- ಬಾಲಾ

ನಿಲ್ಲದ ಬಿಜೆಪಿ ದುಷ್ಟ



ಸುರ್ಜಿತ್

ಬಾಬ್ರಿ ಮಸೀದಿ ಧ್ವಂಸದಲ್ಲಿ ಶಾಮೀಲಾಗಿದ್ದಾರೆಂದು ಮೂವರು ಕೇಂದ್ರಮಂತ್ರಿಗಳ ರಾಜಿನಾಮೆಗೆ ಒತ್ತಾಯ ತೀವ್ರಗೊಳ್ಳುತ್ತಿರುವಾಗ ಪ್ರಧಾನ ಮಂತ್ರಿಗಳ ಹೇಳಿಕೆ ಇಡೀ ದೇಶವನ್ನು ಆಶ್ಚರ್ಯಚಕಿತಗೊಳಿಸಿದೆ. ಮೂವರು ಮಂತ್ರಿಗಳನ್ನು ಬಹಿರಂಗವಾಗಿ ಸಮರ್ಥಿಸಿಕೊಂಡದ್ದಷ್ಟೇ ಅಲ್ಲ, ಬಾಬ್ರಿ ಸ್ಥಳದಲ್ಲಿ ದೇವಸ್ಥಾನ ಕಟ್ಟುವುದು ತನ್ನ ಪಕ್ಷದ 'ಅಪೂರ್ಣವಾಗುಳಿದಿರುವ ಕೆಲಸ', 'ಇನ್ನೂ ಈಡೇರದಿರುವ ರಾಷ್ಟ್ರೀಯ ಭಾವನೆಯ ಅಭಿವ್ಯಕ್ತಿ' ಎಂದೂ ಹೇಳಿದರು. ಆ ಮೂವರು ಮಂತ್ರಿಗಳು ವಾಸ್ತವವಾಗಿ ಮಸೀದಿಯನ್ನು ರಕ್ಷಿಸಲು, ಅದನ್ನು ಉರುಳದಂತೆ ಜನಜಂಗುಳಿಯನ್ನು ಹತೋಟಿಗೆ ತರಲು" ಹೋಗಿದ್ದರೆಂದು ಒಂದು ಶುದ್ಧ ಸುಳ್ಳು ಹೇಳುವವರೆಗೆ ಹೋಗಿದ್ದಾರೆ.

ಈ ಕುಖ್ಯಾತ ಹೇಳಿಕೆಗಳನ್ನು ವಾಜಪೇಯಿ ನೀಡಿದ್ದು ಡಿಸೆಂಬರ್ 6 ರಂದು- ಅಯೋಧ್ಯೆಯಲ್ಲಿ ಕಾವಿ ಪಡೆ ನಡೆಸಿದ ಕರಾಳ ಕೃತ್ಯದ 8ನೇ ವಾರ್ಷಿಕದಂದು. ದೇಶ 'ಲಜ್ಜಾದಿನ'ವನ್ನು ಆಚರಿಸುತ್ತಿರುವಾಗ ಆರ್.ಎಸ್.ಎಸ್. ಮತ್ತು ಅದರ ಸಂಘಟನೆಗಳು (ಬಿಜೆಪಿಯೂ ಸೇರಿ) 'ಶೌರ್ಯದಿನ' ಆಚರಿಸುತ್ತಿದ್ದರು. ಆದರೆ ವಾಜಪೇಯಿ ಯವರ ಟಿಪ್ಪಣಿ ಒಂದು ಪ್ರಯೋಜನ ಕಾರಿ ಕೆಲಸ ಕೂಡ ಮಾಡಿದೆ - ಆತ ತೊಟ್ಟಿದ್ದ ಉದಾರವಾದೀ ಮುಖವಾಡ ಕಳಚಿ ಬಿದ್ದಿದೆ.

ಈ ಟಿಪ್ಪಣಿಗಳು ಮತ್ತೊಮ್ಮೆ ಬಿಜೆಪಿಯ ನಿಜ ಸ್ವರೂಪವನ್ನು ಬಯಲು ಮಾಡಿದೆ. ಅದು ಆರ್.ಎಸ್.ಎಸ್. ಮತ್ತು ಅದರ ಅಂಗ ಸಂಘಟನೆಗಳ ರಾಜಕೀಯ ವೇದಿಕೆಯಂತೆ ಕೆಲಸ ಮಾಡುತ್ತಾರಷ್ಟೆ. ಈ ಪರಿವಾರದ ದೀರ್ಘಕಾಲದ ಹೊಲಸು ಕೋಮುವಾದಿ ಗುರಿ ಸಾಧಿಸಲು ಅದೊಂದು ಸಾಧನ ಮಾತ್ರ. ಅಂದರೆ ಎನ್‌ಡಿಎ ಎಂದೆನಿಸಿಕೊಂಡಂತದ್ದು ಮತ್ತು ಅದರ ಅಂಗ ಪಕ್ಷಗಳೆಲ್ಲಾ ಬಿಜೆಪಿಗೆ ಬೇಕಾಗಿರುವುದು ತಾನಾಗಿ ಅಧಿಕಾರ ಗಿಟ್ಟಿಸುವವರೆಗೆ ಮಾತ್ರ. ತಾನಾಗಿ ಬಹುಮತ ಪಡೆಯಲು ಅದಕ್ಕೆ ಸಾಧ್ಯವಾದಾಗ ತನ್ನ ಮಿತ್ರ ಪಕ್ಷಗಳನ್ನು 'ರಾಷ್ಟ್ರೀಯ ಅಜೆಂಡಾ'ವನ್ನು ತಿಪ್ಪೆಗೆಸೆಯಲೂ ಅದು ಹಿಂಜರಿಯದು.

ಮುಖವಾಡ ಕಳಚಿದ್ದೇಕೆ?

ಕೋಮುವಾದಿ ಹೊಲಸನ್ನು ತಲೆಯಲ್ಲಿ ತುಂಬಿಕೊಂಡ ಪರಂಪರೆಯಲ್ಲೇ ಬೆಳೆದ ಆರ್‌ಎಸ್‌ಎಸ್ ಮುಖಂಡರಿಗೆ ಮತ್ತು ಕಾರ್ಯಕರ್ತರಿಗೆ

ಸಿಬಿಐ ಚಾರ್ಜ್ ಶೀಟ್ ಹೇಳುತ್ತಿರುವುದೇನು?

ಕರಸೇವಕರು, ಅವರ ಮುಖಂಡರು ಒಪ್ಪಿಕೊಂಡ ಸಂಗತಿಗಳ ಆಧಾರದಲ್ಲಿಯೇ ಸಿಬಿಐ ಅಕ್ಟೋಬರ್ 5, 1993 ರಂದು ಹಾಕಿದ ಚಾರ್ಜ್‌ಶೀಟ್ ಏನು ಹೇಳಿದೆ ನೋಡಿ:

"ತನಿಖೆಯಿಂದ ತಿಳಿದು ಬಂದ ಸಂಗತಿಯೆಂದರೆ 5.12.1992 ರಂದು ಶ್ರೀ ವಿನಯ ಕಟಿಯಾರ್ ನಿವಾಸದಲ್ಲಿ ಒಂದು ಗುಪ್ತ ಸಭೆ ನಡೆಯಿತು. ಅದರಲ್ಲಿ ಸರ್ವಶ್ರೀ ಎಲ್.ಕೆ.ಅಡ್ವಾಣಿ, ಪವನ್ ಪಾಂಡೆ ಇತ್ಯಾದಿ ಭಾಗವಹಿಸಿದರು. ಅಲ್ಲಿ ವಿವಾದಿತ ಕಟ್ಟಡವನ್ನು ಧ್ವಂಸ ಮಾಡುವ ಅಂತಿಮ ನಿರ್ಣಯ ಕೈಗೊಳ್ಳಲಾಯಿತು. ಇದೇ ಅವಧಿಯಲ್ಲಿ ಒಬ್ಬ ಸಾಕ್ಷಿಯ ಸಂಪರ್ಕಿಸಿದಾಗ ಶ್ರೀ ಕಲ್ಯಾಣ ಸಿಂಗ್ ಹೇಳಿದರು - "ರೋಕ್ ಕನ್‌ಸ್ಟ್ರಕ್ಷನ್ ಪರ್ ಲಗೀಹೈ, ಡಿಸ್ಟ್ರಕ್ಷನ್ ಪರ್ ನಹೀಂ"(ಸುಪ್ರಿಂ ಕೋರ್ಟ್ ತಡೆ -ಕಟ್ಟುವುದಕ್ಕೇ ಹೊರತು ಕೆಡುವುದಕ್ಕಲ್ಲ)

ಮೇಲೆ ತಿಳಿಸಿದ ಕ್ರಿಮಿನಲ್ ಪಿತೂರಿ ಸಾಧಿಸಲು ಕರಸೇವೆಯನ್ನು ಅಣಿನೆರೆಸುವ ಪ್ರಮಾಣವನ್ನು ಉದ್ದೇಶಪೂರ್ವಕವಾಗಿ ವಾರಣಾಸಿಯಿಂದ ಶ್ರೀ ಎಲ್.ಕೆ.ಅಡ್ವಾಣಿ ಮತ್ತು ಮಥುರೆಯಿಂದ ಶ್ರೀ ಮುರುಳಿಮನೋಹ ಜೋಶಿ 1.12.92 ರಂದು ಆರಂಭಿಸಿದರು. ಅದು ಕೊನೆಗೆ 5.12.92 ರಂದು ಅಯೋಧ್ಯೆಯಲ್ಲಿ ಕೊನೆಗೊಂಡಿತು. ಇಂತಹ ಪ್ರಮಾಣದಲ್ಲಿ ಸಾರ್ವಜನಿಕ ಭಾಷಣಗಳೂ ಇದ್ದವು...... 6.12.92 ರಿಂದ ಆರಂಭವಾಗುವ ಕರಸೇವಾದ ಅರ್ಥ ಭಜನೆ ಮತ್ತು ಕೀರ್ತನೆ ಮಾತ್ರವಲ್ಲ. ಶ್ರೀರಾಮ ದೇವಸ್ಥಾನದ ನಿರ್ಮಾಣವೂ ಸೇರಿರಲು ಸಾಧ್ಯ. ಇಟ್ಟಿಗೆ, ಪಿಕಾಸಿಗಳೊಂದಿಗೆ ಅದು ನಡೆಯುತ್ತದೆ ಎಂದು ಪದೇ ಪದೇ ಶ್ರೀ ಅಡ್ವಾಣಿ ತೀವ್ರತೆಯಿಂದ ಹೇಳಿದ್ದಾರೆ. ಅಲ್ಲದೆ ಬಿಜೆಪಿ ಅಯೋಧ್ಯೆಯಲ್ಲಿ ರಾಮ ಜನ್ಮಭೂಮಿ ದೇವಸ್ಥಾನ ಕಟ್ಟಲು ಕಾನೂನನ್ನು ಮುರಿಯುತ್ತದೆ ಎಂದು 2.12.92 ರಂದು 'ಜನಸಾತ್ತ' ಪತ್ರಿಕೆಗೆ ತಿಳಿಸಿದರು."

ಬಿಜೆಪಿ: ಹೊಲಸು ಮುಖದ್ದೇ ಇತಿಹಾಸ

ಬಿಜೆಪಿ ತನ್ನ ನಿಜವಾದ ಮುಖವನ್ನು ಬಯಲು ಮಾಡಿಕೊಂಡಿರುವುದು ಇದೇ ಮೊದಲಲ್ಲ. 1979 ರ ಜನತಾ ಪಾರ್ಟಿ ಒಡೆಯಲು ಮತ್ತು ಅದರ ಸರಕಾರ ಬೀಳಲು ಕಾರಣ ಈಗಿನ ಬಿಜೆಪಿ ಮುಖಂಡರೇ. 'ದ್ವಿ ಸದಸ್ಯತ್ವ' ದ ಪ್ರಶ್ನೆಯಲ್ಲಿ ಜನತಾಪಾರ್ಟಿಯ ಇತರರ ಒತ್ತಾಯವನ್ನು ತಿರಸ್ಕರಿಸಿದ್ದರಿಂದ ಜನತಾಪಾರ್ಟಿ ಸರಕಾರ ಬಿತ್ತು.

ಬಿಜೆಪಿಯ ಹೊಲಸು ಮುಖ 1990 ರಲ್ಲಿ ಮತ್ತೊಮ್ಮೆ ಬಯಲಾಯಿತು. ವಿ.ಪಿ.ಸಿಂಗ್ ಸರಕಾರ ಹತ್ತುವರ್ಷ ನೆನೆಗುದಿಗೆ ಬಿದ್ದಿದ್ದ ಮಂಡಲ್ ಆಯೋಗ ಶಿಫಾರಸುಗಳನ್ನು ಜಾರಿಗೆ ತರುವ ಆಶಯವನ್ನು ಪ್ರಕಟಿಸಿದಾಗ ಬಿಜೆಪಿ ಅದನ್ನು ಎದುರಿಸಲು ರಾಮಮಂದಿರ ಪ್ರಶ್ನೆ ಎತ್ತಿಕೊಂಡಿತು. ಬಿಜೆಪಿಯ ಚುನಾವಣಾ ಚಿಹ್ನೆ, ಚುನಾವಣೆ ಘೋಷಣೆಗಳನ್ನು ಅಡ್ವಾಣಿಯವರ ರಥಯಾತ್ರೆಯ ಬೆನ್ನ ಹಿಂದೆ ಮಾಡಿದ ರಕ್ತಪಾತವನ್ನು ತಡೆಯಲು ಬಿಹಾರದ ಜನತಾದಳ ಸರ್ಕಾರ ಅವರನ್ನು ಬಂಧಿಸಿದಾಗ ಬಿಜೆಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡು ವಿ.ಪಿ.ಸಿಂಗರ ಸರಕಾರ ಪತನಗೊಳ್ಳುವಂತೆ ಮಾಡಿತು.

ಮಂದಿರ ಪ್ರಶ್ನೆ

ಮಂದಿರ ಪ್ರಶ್ನೆಯನ್ನು ಅದು ಹರಡಿಸಿರುವುದೂ ಹೊರದೇನಲ್ಲ. 1980ರ ದಶಕದಲ್ಲಿ ಆರ್.ಎಸ್.ಎಸ್. ಅಂಗ ಸಂಘಟನೆ ವಿಶ್ವ ಹಿಂದು ಪರಿಷತ್ ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿಚಾರವನ್ನು ಬಡಿದೆಬ್ಬಿಸಿದಾಗ ಬಿಜೆಪಿ ತನಗೂ ಅದಕ್ಕೂ ಸಂಬಂಧವಿಲ್ಲ ಎಂದು ಮತ್ತೆ-ಮತ್ತೆ ಹೇಳಿತು. ಆದರೆ ಅಡ್ವಾಣಿಯವರ ರಥಯಾತ್ರೆ ಅದನ್ನೆಲ್ಲಾ ಬದಲಿಸಿತು. ವಿಹೆಚ್‌ಪಿ ಚಳುವಳಿಯಲ್ಲಿ ಬಿಜೆಪಿ ಧುಮುಕಿ ಅಯೋಧ್ಯೆ, ಉತ್ತರ ಪ್ರದೇಶಕೆ ಸೀಮಿತವಾಗಿದ್ದ ವಿವಾದವನ್ನು ಇಡೀ ದೇಶಕ್ಕೆ ವಿಸ್ತರಿಸಿತು. ಇದು ಉತ್ತರ ಪ್ರದೇಶದಲ್ಲಿ 1990 ರಲ್ಲಿ ಮುಲಾಯಂ ಸಿಂಗ್ ಸರಕಾರ ಬಿದ್ದಾಗ ನಡೆದ ಚುನಾವಣೆಗಳಲ್ಲಿ ತುಸು ಬಹುಮತ ಪಡೆಯಲು ಅದಕ್ಕೆ ನೆರವಾಯಿತು.

1991, 1992 ರಲ್ಲಿ ಮಂದಿರದ ಪ್ರಶ್ನೆಯ ಮೇಲೆ ಬಿಜೆಪಿ ಚಟುವಟಿಕೆಗಳು ತೀವ್ರಗೊಂಡವು. ದೇಶವಿಡೀ ಭಾವೋದ್ವೇಗ ಹರಡಿಸುವುದಲ್ಲದೆ ತಾನು ಆಳ್ವಿಕೆಯಲ್ಲಿದ್ದ ರಾಜ್ಯಗಳಲ್ಲಿ ಅಧಿಕಾರದ ದುರುಪಯೋಗವನ್ನು ಇದಕ್ಕಾಗಿ ಮಾಡಿತು. ಆದಾಗಲೇ 1990 ರಲ್ಲಿ ಕೆಲವು ಕರಸೇವಕರು ಕೈಚಳಕ ತೋರಿದ್ದರು. ಡೈನಮೆಟ್ ಸಲಾಕೆಗಳೊಂದಿಗೆ ಕೆಲವರನ್ನು ಬಂದಿಸಲಾಗಿತ್ತು. ಆಗ ಮುಲಾಯಂ ಸಿಂಗ್ ಸರಕಾರ ಇದ್ದುದರಿಂದ ಬಾಬ್ರಿ ಮಸೀದಿಗೆ ಹಾನಿ ತಟ್ಟಿರಲಿಲ್ಲ.

ಈ ಅವಧಿಯಲ್ಲಿ ಆರ್.ಎಸ್.ಎಸ್.- ಬಿಜೆಪಿ ಮತ್ತಿತರ ಅವರ ಸಂಘಟನೆಗಳು ತಾವು ಸಾರ್ವಜನಿಕ ಅಭಿಪ್ರಾಯಕ್ಕೆ, ನ್ಯಾಯಾಂಗಕ್ಕೆ, ಸಂವಿಧಾನಕ್ಕೆ ಎಳ್ಳಷ್ಟೂ ಸೊಪ್ಪು ಹಾಕುವುದಿಲ್ಲ ಎಂಬುದನ್ನು ಪ್ರದರ್ಶಿಸಿದರು. ಮುಸ್ಲಿಂ-ಮುಖಂಡತ್ವ ಮಾತುಕತೆಗೆ ಅಥವಾ ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರಲು ಸಿದ್ಧವಿದ್ದವು. ಆದರೆ ಆರ್‌ಎಸ್‌ಎಸ್, ಬಿಜೆಪಿ, ವಿಹೆಚ್‌ಪಿಗೆ ಮಾತುಕತೆಯೆಂದರೆ ಬಾಬ್ರಿ ಮಸೀದಿಯನ್ನುಬಿಟ್ಟುಕೊಡಬೇಕು, ಮಸೀದಿಗೆ ಬೇರೆ ಜಾಗ ಒಪ್ಪಿಕೊಳ್ಳಬೇಕು ಎಂಬುದು ಮಾತ್ರ. (ವಾಜಪೇಯಿಯವರು ಡಿಸೆಂಬರ್ 6 ರ ಹೇಳಿಕೆಯಲ್ಲಿ ಪುನರುಚ್ಚರಿಸಿರುವುದು ಇದನ್ನೇ), ವಿಹೆಚ್‌ಪಿಯಂತೂ ನ್ಯಾಯಾಲಯದ ತೀರ್ಪು ತನ್ನ ಪರವಾಗಿ ಇದ್ದರೆ ಮಾತ್ರ ಅದನ್ನು ಒಪ್ಪಿಕೊಳ್ಳುವುದಾಗಿ ಸಾರಿತು!

ಆಗ 50 ಕ್ಕೂ ಹೆಚ್ಚು ಇತಿಹಾಸಕಾರರು ಜನತೆಯನ್ನು ಉದ್ದೇಶಿಸಿ ಒಂದು ಮನವಿ ಜಾರಿ ಮಾಡಿದರು. 1528 ರಲ್ಲಿ ಬಾಬರನ ಸೇನಾಪತಿ ರಾಮಮಂದಿರ ಒಡೆದು ಬಾಬ್ರಿ ಮಸೀದಿ ಕಟ್ಟಿಸಿದ ಎಂಬುದನ್ನು ಪುರಾವೆಗಳು ನಿರಾಕರಿಸುತ್ತವೆ ಎಂದು ಅದರಲ್ಲಿ ಹೇಳಿದರು. ನಾಲ್ಕುಪ್ರಖ್ಯಾತ ಇತಿಹಾಸಕಾರರು 'ದೇಶಕ್ಕೆ ಇತಿಹಾಸಕಾರರ ವರದಿ'ಯಲ್ಲಿ ವಿಹೆಚ್‌ಪಿಯ ವಾದವನ್ನು ತಿರಸ್ಕರಿಸಿದರು. ಆದರೆ ಬಿಜೆಪಿ, ವಿಹೆಚ್‌ಪಿ ಆಗ ಇದನ್ನು ಕೇವಲ 'ನಂಬಿಕೆ'ಯ ಪ್ರಶ್ನೆಯಾಗಿಸಿಬಿಟ್ಟರು.

ಹೀಗೆ ಹದಗೆಡುತ್ತಿದ್ದ ಸನ್ನಿವೇಶದಲ್ಲಿ ರಾಜಕೀಯ ಪಕ್ಷಗಳು ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕರೆಯಬೇಕು ಎಂದು ಆಗ್ರಹಪಡಿಸಿದರು. ನವೆಂಬರ್ 3, 1992 ರಂದು ಆ ಸಭೆ ನಡೆಯಿತು. ಬಿಜೆಪಿ ಮಾತ್ರ ಅದನ್ನು ಬಹಿಷ್ಕರಿಸಿತು. ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿದ ಆ ಸಭೆ ನರಸಿಂಹರಾವ್ ಸರಕಾರಕ್ಕೆ ಮಸೀದಿ ರಕ್ಷಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ನೀಡಿತು.

ಧ್ವಂಸಕಾರ್ಯ ಮತ್ತು ನಂತರ

ಡಿಸೆಂಬರ್ 3 ರ ನಂತರ ಕರಸೇವಕರು ಸಾವಿರಾರು ಸಂಖ್ಯೆಯಲ್ಲಿ ಅಯೋಧ್ಯೆಯಲ್ಲಿ ಸೇರಲಾರಂಭಿಸಿದರು. ಒಂದೆಡೆ ಬಿಜೆಪಿ ಮುಖಂಡರು ವಿವಾದಿತ ಕಟ್ಟಡಕ್ಕೆ ಏನೂ ಧಕ್ಕೆ ತರುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ವಚನ ನೀಡಿದರು. ಇನ್ನೊಂದೆಡೆ ಕರಸೇವಕರು ಡಿಸೆಂಬರ್ 6, 1992 ರಂದು 463 ವರ್ಷಗಳ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದರು. ಡಾ. ಅಂಬೇಡ್ಕರವರ ಪುಣ್ಯತಿಥಿಯಂದು ಈ ಹೇಯ ಕೃತ್ಯ ನಡೆಸಿ ಕಾವಿ ಪಡೆ ಭಾರತೀಯ ಸಂವಿಧಾನದ ಈ ಶಿಲ್ಪಿಗೆ, ದಲಿತ ಮುಖಂಡನಿಗೆ ಅವಮಾನ ಮಾಡಿತು.

ಬಾಬ್ರಿ ಮಸೀದಿ ಧ್ವಂಸ ನಂತರ ಜಯಪುರ, ಭೋಪಾಲ, ಸೂರತ್ ಮತ್ತಿತರ ನಗರಗಳಲ್ಲಿ ಗಲಭೆಗಳು ನಡೆದವು. ಅದರಲ್ಲಿ ಆಶ್ಚರ್ಯವೇನಿಲ್ಲ. ಮುಂಬೈ ನಗರ ಎರಡು ಬಾರಿ ಡಿಸೆಂಬರ್ 1992 ರಲ್ಲಿ ಮತ್ತೆ ಜನವರಿ 1993 ರಲ್ಲಿ ಭೀಕರ ಗಲಭೆಗಳನ್ನು ಕಂಡಿತು. ಶ್ರೀ ಕೃಷ್ಣ ಆಯೋಗ ವರದಿ ಬಿಜೆಪಿ, ಶಿವಸೇನೆ ನಡೆಸಿದ ಭೀಕರ ಕೃತ್ಯಗಳನ್ನು ಮನಕರಗುವಂತೆ ದಾಖಲಿಸಿದೆ. ಈ ಹಿನ್ನೆಲೆಯಲ್ಲೇ ಕೇಂದ್ರ ಸರಕಾರ ಬಿಜೆಪಿ ಆಳ್ವಿಕೆಯ ರಾಜ್ಯ ಸರ್ಕಾರಗಳನ್ನು ವಜಾ ಮಾಡಿತು- ಇವು ರಾಷ್ಟ್ರೀಯ ಐಕ್ಯತೆಗೆ, ದೇಶದ ಧರ್ಮನಿರಪೇಕ್ಷತೆಗೆ ಬೆದರಿಕೆಗಳು ಎಂದು. ಜನಗಳೂ ಬಿಜೆಪಿ ಆಟದ ಅಪಾಯವನ್ನು ಅರಿತರು. ಈ ರಾಜ್ಯಗಳಿಗೆ ಮಧ್ಯಂತರ ಚುನಾವಣೆಗಳು ನಡೆದಾಗ ಮಧ್ಯಪ್ರದೇಶ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ ಸ್ಪಷ್ಟ ಸೋಲುಂಡಿತು. ರಾಜಸ್ತಾನದಲ್ಲಿ ಕೆಲವು ಸ್ಥಳೀಯ ಅಂಶಗಳಿಂದಾಗಿ ಹೇಗೋ ಅಧಿಕಾರವನ್ನು ಸ್ವಲ್ಪದಲ್ಲಿ ಉಳಿಸಿಕೊಂಡಿತು.

ಏಕಾಂಗಿಯಾದ ಬಿಜೆಪಿ

ಈ ಧ್ವಂಸದ ಹೀನ ಕೃತ್ಯದಿಂದಾಗಿ ಬಿಜೆಪಿ ಇತರ ಪಕ್ಷಗಳಿಂದ ದೂರವಾಯಿತು. ಆದ್ದರಿಂದ 1996 ರಲ್ಲಿ ವಾಜಪೇಯಿ ಮೊದಲ ಸರಕಾರ ರಚಿಸಿದಾಗ 13 ದಿನಗಳಿಗಿಂತ ಹೆಚ್ಚು ಬದುಕುಳಿಯಲು ಅದಕ್ಕಾಗಲಿಲ್ಲ. ಮಹಾಜನ್, ಶೆಖಾವತ್‌ಗಳಂತಹ ಟ್ರಿಕ್‌ಮಾಸ್ಟರ್‌ಗಳಿಂದಲೂ ಅಧಿಕಾರ, ಹಣ ಅಮಿಷದಿಂದಲೂ ಒಬ್ಬನೇ ಒಬ್ಬ ಎಂ.ಪಿ.ಯ ಬೆಂಬಲಪಡೆಯಲಾಗಲಿಲ್ಲ.

ಇದರಿಂದ ಬಿಜೆಪಿಗೆ ಒಂದು ವಿಷಯ ಅತ್ಯಂತ ಸ್ಪಷ್ಟವಾಯಿತು. ಏನೆಂದರೆ ತಾನಾಗಿಯೇ ಅಧಿಕಾರಕ್ಕೆ ಬರುವ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ ಎಂದು. ನಿಜ ಬಿಜೆಪಿ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಂಡಿತು. ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಎರಡೆರಡು ಸಂಯುಕ್ತ ರಂಗದ ಸರಕಾರಗಳನ್ನು ಉರುಳಿಸಿದ ರೀತಿಯಿಂದಾಗಿ ಮತ್ತು ಈ ಸರಕಾರಗಳು ಹಿಂದಿನ ಕಾಂಗ್ರೆಸ್ ಸರಕಾರಗಳಿಗಿಂತ ಭಿನ್ನ ಎಂದು ತೋರಿಸಿಕೊಳ್ಳುವುದರಲ್ಲಿ ವಿಫಲವಾಗಿದ್ದರಿಂದಾಗಿ ಹೀಗಾಯಿತಷ್ಟೆ. ಆದರೂ ಅಧಿಕಾರದ ಹತ್ತಿರ ಸುಳಿಯಲೂ ಬಿಜೆಪಿಗಾಗಲಿಲ್ಲ. ಇಂತಹ ಸನ್ನಿವೇಶದಲ್ಲಿ ಅದು ಒಂದು ಚುನಾವಣೋತ್ತರ ಮೈತ್ರಿ ಕೂಟವನ್ನು ಹೇಗೋ ಜಮಾಯಿಸಿ ಅದಕ್ಕೆ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ' ಎನ್‌ಡಿಎ ಎಂದಿತು. ಒಂದು 'ರಾಷ್ಟ್ರೀಯ ಆಡಳಿತ ಅಜೆಂಡಾ'ವನ್ನೂ ಅಂಗೀಕರಿಸಿತು.

ತಮಿಳುನಾಡಿನಲ್ಲಿ ಎಐಎಡಿಎಂಕೆ ಮೈತ್ರಿಯನ್ನು ಒಡೆಯುವ ಪ್ರಯತ್ನಗಳಿಂದಾಗಿ ಎರಡನೇ ವಾಜಪೇಯಿ ಸರಕಾರ ಏಪ್ರಿಲ್ 1999 ರಲ್ಲಿ ಬಿತ್ತು. ಬಿಜೆಪಿ ಈ ಬಾರಿ ಚುನಾವಣಾ-ಪೂರ್ವ ಮೈತ್ರಿಕೂಟ ರಚಿಸಿಕೊಂಡಿತು. ತನ್ನದೇ ಪ್ರಣಾಳಿಕೆ ಹೊರಡಿಸದೆ ಚುನಾವಣೆಗೆ ಹೋಯಿತು. ರಾಮಮಂದಿರ, 370ನೇ ಕಲಮು ಮತ್ತು ಸಮಾನ ನಾಗರಿಕ ಸಂಹಿತೆಯ ವಿವಾದಾತ್ಮಕ ಪ್ರಶ್ನೆಗಳನ್ನು ಬದಿಗಿಡಬೇಕಾಯಿತು. ಆದರೆ ಇವನ್ನು ತಮ್ಮದೇ ಬಹುಮತ ಇಲ್ಲದ್ದರಿಂದ ಮುಂದೂಡಲಾಗಿದೆ ಎಂದು ಮತ್ತೆ-ಮತ್ತೆ ತನ್ನ ಮಿತ್ರರಿಗೆ ಅದು ನೆನಪಿಸುತ್ತಾ ಬಂದಿದೆ.

ಆಟ


...ಂದು ಮತೀಯ ಪ್ರಭುತ್ವ ರಚಿಸಲು ತನ್ನ ಪ್ರಿಯ ...ನಸನ್ನು ಸಾಕಾರಗೊಳಿಸುವಲ್ಲಿ ವಿಳಂಬ ...ಸಹನೀಯವಾಗಿದೆ. ಆದ್ದರಿಂದಲೇ ವಾಜಪೇಯಿ ...ನ್ಯೂಯಾರ್ಕ್ ಬಳಿ ಸ್ಟಾಟೆಸ್ ಐಲ್ಯಾಂಡ್‌ನಲ್ಲಿ ...ಇತ್ತೀಚೆಗೆ ಸಾಧುಗಳ ಸಭೆಯಲ್ಲಿ ತಾನೂ ಒಬ್ಬ ...ಸ್ವಯಂ ಸೇವಕ ಎಂದರು. ಅಂದರೆ ಬೇರೆ ಯಾವ ...ಆರ್.ಎಸ್.ಎಸ್. ಮುಖಂಡನಿಗಿಂತಲೂ ತಾನು

ಮಾಡುತ್ತದೆ ಎಂಬುದನ್ನು ಗಮನಿಸಬೇಕು. ಸಿಬಿಐ ಚಾರ್ಜ್‌ಶೀಟ್ ಸ್ಪಷ್ಟವಾಗಿ 49 ವ್ಯಕ್ತಿಗಳನ್ನು ಅಪಾದಿತರೆಂದು ಗುರುತಿಸಿದೆ. ಕರಸೇವಕರು, ಅವರು ಮುಖಂಡರು ಸ್ವತಃ ಒಪ್ಪಿಕೊಂಡುದರ ಆಧಾರದ ಮೇಲೆ ಈ ಚಾರ್ಜ್‌ಶೀಟ್‌ನ್ನು ಅಕ್ಟೋಬರ್ 5, 1993 ರಂದು ಸಿಬಿಐ ಹಾಕಿತ್ತು (ಬಾಕ್ಸ್ ನೋಡಿ)

1992-92 ರಂತೆ ಈಗಲೂ ಸಾರ್ವಜನಿಕ ಅಭಿಪ್ರಾಯಕ್ಕೆ ತಾನು ಏನೂ ಬೆಲೆ ಕೊಡುವುದಿಲ್ಲ ಎಂದು ಬಿಜೆಪಿ ಈಗಲೂ ತೋರಿಸುತ್ತಿದೆ. ಅದರಿಂದಾಗಿ ಸಂಸತ್ತು ಹಲವು ದಿನ ಅಸ್ತವ್ಯಸ್ತ ಗೊಂಡಿತು. ತೀವ್ರ ಒತ್ತಡದ ನಂತರವೇ ಸರಕಾರ ನಿಯಮ 184 ರಡಿ ಚರ್ಚೆಗೆ ಒಪ್ಪಿತು.

ಮಿತ್ರ ಪಕ್ಷಗಳ ಹಲವು ಮುಖಂಡರು ವಾಜಪೇಯಿ ಹೇಳಿಕೆಗಳನ್ನು ಟೀಕಿಸಿದ್ದಾರೆ. ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ವಾಜಪೇಯಿ ತಮ್ಮ ಪಕ್ಷದ ಮಂತ್ರಿಗಳ ಸಮರ್ಥನೆಯ ಪಟ್ಟು ಹಿಡಿದಿದ್ದಾರೆ. ಈ ಮಿತ್ರರು ಬಹಳಷ್ಟು ಮಂದಿ ಧರ್ಮನಿರಪೇಕ್ಷ ಪಕ್ಷಗಳು. ಅವರಲ್ಲಿ ಕೆಲವರು ಒಕ್ಕೂಟ ಸ್ವರೂಪಕ್ಕೂ ಬದ್ಧರಾದವರು.

ಇಂತಹ ಹೇಳಿಕೆಗಳು ಅವರಿಗೆ ತಂತಮ್ಮ ಪ್ರದೇಶಗಳಲ್ಲಿ ಶೋಚನೀಯ ಪರಿಸ್ಥಿತಿ ತರುತ್ತವೆ. ಆದರೆ ಧರ್ಮನಿರಪೇಕ್ಷತೆಯ ಬಗ್ಗೆಯಾಗಲೀ,



ಮಂದಿರ ಪ್ರಶ್ನೆ ಮತ್ತೆ ಎತ್ತಿದ್ದೇಕೆ?

ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಪ್ರಭಾವ ಬಹಳ ವೇಗವಾಗಿ ಇಳಿಯುತ್ತಿರುವುದು ಕಾವಿ ಮುಖಂಡತ್ವಕ್ಕೆ ಒಂದು ಆತಂಕದ ವಿಷಯವಾಗಿದೆ. ಆರ್.ಎಸ್.ಎಸ್. ಶಾಖೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆ ಶಾಖೆಗಳಲ್ಲಿ ಭಾಗವಹಿಸುತ್ತಿರುವವರ ಸಂಖ್ಯೆ ಕಮ್ಮಿಯಾಗುತ್ತಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಇದಕ್ಕೆ ಕಾರಣ ತಮ್ಮ ಕೋಮುವಾದಿ ಅಜೆಂಡಾವನ್ನು ದುರ್ಬಲಗೊಳಿಸಿದ್ದೇ ಇರಬೇಕು ಎಂದು ಈ ಮುಖಂಡರ ಭಾವನೆ. ಆದ್ದರಿಂದ ವಿವಾದಾತ್ಮಕ ಮಂದಿರ ಪ್ರಶ್ನೆಗೆ ತಾನು ಬದ್ಧ ಎಂದು ಪುನರುಚ್ಚರಿಸಿ ಆರ್.ಎಸ್.ಎಸ್. ನ ಸಿದ್ಧಾಂತಿಗಳಿಗೆ ವಾಜಪೇಯಿ ತೃಪ್ತಿ ತರಲು ಪ್ರಯತ್ನಿಸಿದ್ದಾರೆ.

ಈ ಪ್ರಶ್ನೆಯನ್ನು ಈಗ ಎತ್ತುವುದಕ್ಕೆ ಇನ್ನೊಂದು ಪ್ರಮುಖ ಕಾರಣವೂ ಇದೆ. ವಿಶ್ವಬ್ಯಾಂಕ್-ಐಎಂಎಫ್ ಬಲವಂತದಿಂದ ಅನುಸರಿಸುತ್ತಿರುವ ವಿನಾಶಕಾರಿ ಆರ್ಥಿಕ ನೀತಿಗಳು ದುಡಿಯುವ ಜನರಲ್ಲಿ ಅಸಂತೃಪ್ತಿ ಹೆಚ್ಚಿಸುತ್ತಿದೆ. ಇತ್ತೀಚಿನ ದಿನಗಳ ಮುಷ್ಕರ ಕಾರ್ಯಾಚರಣೆಗಳು, ಮತ ಪ್ರದರ್ಶನಗಳಲ್ಲಿ ಇದು ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಬೃಹತ್ ರೈತ ರ್‍ಯಾಲಿ, ಅದರ ಮೊದಲು ವಿದ್ಯಾರ್ಥಿ-ಯುವಜನ ರ್‍ಯಾಲಿ, ಕಲ್ಲಿದ್ದಲು ಕೂಲಿಕಾರರ ಮುಷ್ಕರ, ಅಂಚೆ ನೌಕರರ ಮುಷ್ಕರ, ಪೆಟ್ರೋಲಿಯಂ ಬೆಲೆಯೇರಿಕೆಗೆ ಪ್ರತಿರೋಧ, ಎನ್‌ಡಿಎ ಸರಕಾರದ ಆರ್ಥಿಕ ನೀತಿಗಳಿಂದ ಹೆಚ್ಚುತ್ತಿರುವ ಅಸಂತೃಪ್ತಿಯ ಸಂಕೇತಗಳು.

ಗುಜರಾತಿನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ತತ್ತರಿಸುವಂತಾಗಿರುವ ಘಟನೆ, ಮತ್ತಿತರ ಇತ್ತೀಚಿನ ಘಟನೆಗಳು ಬಿಜೆಪಿಯ ವಿರುದ್ಧ ಜನತೆಯ ಸಿಟ್ಟು ಏರುತ್ತಿರುವುದನ್ನು ತೋರಿಸಿದೆ. ಆದ್ದರಿಂದಲೇ ಸ್ವದೇಶಿ ಜಾಗರಣ ಮಂಚ್ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಬಗ್ಗೆ ಜೋರಾಗಿ ಮಾತನಾಡುತ್ತಿದೆ. ಅದೇ ವೇಳೆಗೆ ಆರ್.ಎಸ್.ಎಸ್. ಮತ್ತದರ ಸಂಘಟನೆಗಳು ಜನಗಳ ಗಮನವನ್ನು ಬೇರೆಡೆಗೆ ಸೆಳೆಯಲು, ಅವರ ಸಿಟ್ಟು, ಅಸಂತೃಪ್ತಿಯನ್ನು ಪರಸ್ಪರ ಕಿತ್ತಾಟಗಳತ್ತ ತಳ್ಳಲು ಸರ್ವಪ್ರಯತ್ನ ನಡೆಸಿವೆ. ವಾಜಪೇಯಿಯವರ ಇತ್ತೀಚಿನ ಪ್ರಯತ್ನ ಆರ್.ಎಸ್.ಎಸ್. ನ ಈ ಆಟದ ಸಂಕೇತ. ಒಂದೆಡೆ ಸಾಮೂಹಿಕ ಅಸಂತೃಪ್ತಿ, ಇನ್ನೊಂದೆಡೆ ಕಟ್ಟಾ ಆರ್.ಎಸ್.ಎಸ್. ಮುಖಂಡತ್ವ ವಾಜಪೇಯಿ ತನ್ನ ಮುಖವಾಡ ಕಳಚುವಂತೆ ಮಾಡಿದೆ.

...ಮ್ಮಿಯೇನಲ್ಲ ಎಂದರ್ಥ. ಈ ಸಮಯಾದ್ಯಂತ ...ವಿಹೆಚ್‌ಪಿ ಕೂಡಾ ಮಂದಿರದ ಕೆಲಸವನ್ನು ನಾಲ್ಕು ...ವರ್ಕ್‌ಶಾಪ್‌ಗಳಲ್ಲಿ ಭರದಿಂದ ನಡೆಸಿದೆ.

...ಈಗ ಮತ್ತೊಂದು ಸುಳ್ಳು

ವಾಜಪೇಯಿ ಹೇಳಿಕೆಯ ಸ್ವಲ್ಪವೇ ಸಮಯದಲ್ಲಿ ...ಆರ್.ಎಸ್‌ಎಸ್. ಮುಖ್ಯಸ್ಥ ಕೆ.ಎಸ್.ಸುದರ್ಶನ್ ...ಳಂಕಿತ ಮಂತ್ರಿಗಳ ರಕ್ಷಣೆಗೆ ಮತ್ತೊಂದು ಚತುರತೆ ...ಪ್ರದರ್ಶಿಸಿದರು. ಕರಸೇವಕರು ಅಂದು ...ಮಸೀದಿಯನ್ನು ರಕ್ಷಿಸುವ ಪ್ರಯತ್ನದಲ್ಲಿದ್ದಾಗ ಅದನ್ನು ...ಧ್ವಂಸ ಮಾಡಿದ್ದು ಒಳಗಿಟ್ಟಿದ್ದ ಬಾಂಬ್ ಎಂದು. ...ಈ ಮೂಲಕ ಆ ಡಿಸೆಂಬರ್ 1992 ರಂದು ...ಆರ್‌ಎಸ್‌ಎಸ್-ವಿಹೆಚ್‌ಪಿ-ಶಿವಸೇನೆ ಜಂಗುಳಿಯ ...ಕೃತಿಯೊಂದು ಚಟುವಟಿಕೆಯನ್ನು ಪ್ರತಿ ಹಂತದಲ್ಲೂ ...ರೆಹಿಡಿಯುತ್ತಿದ್ದ ನೂರಾರು ಟಿ.ವಿ. ಕ್ಯಾಮರಾಗಳೆಲ್ಲ ...ಳ್ಳು ಎಂದು ಹೇಳುತ್ತಿದ್ದಾರೆ.

ಈ ಕಾವಿಪಡೆಗಳ ಮುಖ್ಯಸ್ಥ ನಾಚಿಕೆಹೀನತೆಯ ...ಹ ಮಟ್ಟದವರೆಗೂ ಹೋಗಬಲ್ಲರು ಎಂಬುದು ...ಎಂದೂ ಇಷ್ಟು ಸ್ಪಷ್ಟವಾಗಿ ಸಾಬೀತಾಗಿರಲಿಲ್ಲ! ಸಿಬಿಐ ತಯಾರಿಸಿದ ವರದಿ, ಹಾಕಿದ ಚಾರ್ಜ್ ...ಶೀಟ್‌ಗಳು ಸುದರ್ಶನ್‌ಗೆ ಬೇಕಿಲ್ಲ. ಈ ಸಂಸ್ಥೆ ...ರವಾಗಿ ಪ್ರಧಾನಮಂತ್ರಿಗಳ ಅಡಿ...

ಒಕ್ಕೂಟ ತತ್ವದ ಬಗ್ಗೆಯಾಗಲೀ ಎಳ್ಳಷ್ಟೂ ಪ್ರೇಮವಿಲ್ಲದ ಬಿಜೆಪಿಯಂತಹ ಪಕ್ಷ ಆ ಬಗ್ಗೆ ಯೋಚಿಸುತ್ತದೆ ಎಂದು ನಿರೀಕ್ಷಿಸಲು ಸಾಧ್ಯವೇ?

ಎನ್‌ಡಿಎ ದ ಮಿತ್ರ ಪಕ್ಷಗಳೂ ಇತ್ತೀಚೆಗೆ ನೀಡಿದ ಜಂಟಿ ಹೇಳಿಕೆಯಲ್ಲಿ ಸಂಪೂರ್ಣ ಸಂದರ್ಭ ಸಾಧಕತನ ಪ್ರದರ್ಶಿಸಿದ್ದಾರೆ. ಅವರು ಮೈತ್ರಿಕೂಟದ ಮುಖಂಡರ ಅತ್ಯಂತ ನಗ್ನ ಕೋಮುವಾದಿ ಹೇಳಿಕೆಯನ್ನು ಮರೆಮಾಚಲು ಪ್ರಯತ್ನಿಸಿದ್ದಾರೆ. ಜಾರ್ಜ್ ಫರ್ನಾಂಡೀಸ್‌ನಂತವರು 8 ವರ್ಷಗಳ ಹಿಂದಿನ ಅವರ ಹೇಳಿಕೆಯನ್ನು ನೆನಪಿಸಿ ವಾಜಪೇಯಿಯವರ ಈ ಹೇಳಿಕೆ ಬಗ್ಗೆ ತಮಗೇನೂ ತಿಳಿಯದು ಎಂಬಂತೆ ನಟಿಸಿದ್ದಾರೆ. ಇಂತಹ ಮಿತ್ರ ಪಕ್ಷಗಳಿಗೆ ಇರುಸುಮುರುಸು ಅನಿಸಿದ್ದರೂ ಪ್ರಧಾನ ಮಂತ್ರಿಗಳ ಹೇಳಿಕೆ ದೇಶದ ಧರ್ಮನಿರಪೇಕ್ಷತೆ ಹಂದರಕ್ಕೆ ಎಂತಹ ಪೆಟ್ಟು ನೀಡಿದೆ ಎಂಬುದನ್ನು ಲಕ್ಷಿಸುತ್ತಿಲ್ಲ.

ಜನತೆಯೇ ತಡೆ

ಪ್ರಧಾನಮಂತ್ರಿ ಗ... ...ಹೇಳಿಕೆಯ ಅತ್ಯಂತ ದುರದೃ... ...ಂತ ಪರಿಣಾಮ ಗುಜರಾತ, ಉತ್ತರ ಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಕಂಡು ಬಂತು.

ಬಾಬಾ ಬುಡನ್ ಗಿರಿ:

ವಿಫಲಗೊಂಡ ಕಿತಾಪತಿ

ಭಾವೈಕ್ಯತೆಗೆ ಶತಮಾನಗಳಿಂದ ಹೆಸರಾದ ಬಾಬಾ ಬುಡನ್‌ಗಿರಿ-ದತ್ತಪೀಠದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಉರುಸ್ಸು, ದತ್ತ ಜಯಂತಿ ಬಂತೆಂದರೆ ಏನಾದರೂ ಕಿತಾಪತಿ ಹಚ್ಚಲು ಸಂಘ ಪರಿವಾರದವರು ಕಾತುರರಾಗಿ ಕಾಯುತ್ತಿರುತ್ತಾರೆ. ಈ ಸಲದ ದತ್ತ ಜಯಂತಿಯ ಸಂದರ್ಭ ಏನಾದರೂ ಕಿತಾಪತಿ ನಡೆಸುವ ಮಹಾತ್ವಾಕಾಂಕ್ಷೆ ಹೊಂದಿದ್ದ ಇಲ್ಲಿಯ ಸಂಘ ಪರಿವಾರದವರು ಅದಕ್ಕೋಸ್ಕರ ಅಬ್ಬರದ ಪ್ರಚಾರ ನಡೆಸಿದರು. ವಿಧವಿಧ ವಿಧ್ವಂಸಕ ಅಟ್ಟಹಾಸ ತೋರಿದರು.

ವಿ.ಸುಕುಮಾರ್

ಇಡೀ ರಾಜ್ಯವೇ ಆತಂಕದಿಂದ ನಿರೀಕ್ಷಿಸುತ್ತಿದ್ದ ಬಾಬಾ ಬುಡನ್‌ಗಿರಿ ದತ್ತಾತ್ರೇಯ ಪೀಠದ ದತ್ತ ಜಯಂತಿ ಸಾವಿರಾರು ಪೋಲೀಸರ ಸರ್ಪಕಾವಲಿನಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗೆ ಅವಕಾಶವಿಲ್ಲದೆ ಮುಗಿದಿದ್ದು ಚಿಕ್ಕಮಗಳೂರಿನ ಜನತೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಭಾವೈಕ್ಯತೆಗೆ ಶತಮಾನಗಳಿಂದ ಹೆಸರಾದ ಬಾಬಾ ಬುಡನ್‌ಗಿರಿ-ದತ್ತಪೀಠದಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ಉರುಸ್ಸು, ದತ್ತ ಜಯಂತಿ ಬಂತೆಂದರೆ ಏನಾದರೂ ಕಿತಾಪತಿ ಹಚ್ಚಲು ಸಂಘ ಪರಿವಾರದವರು ಕಾತುರರಾಗಿ ಕಾಯುತ್ತಿರುತ್ತಾರೆ. ಈ ಸಲದ ದತ್ತ ಜಯಂತಿಯ ಸಂದರ್ಭ ಏನಾದರೂ ಕಿತಾಪತಿ ನಡೆಸುವ ಮಹಾತ್ವಾಕಾಂಕ್ಷೆ ಹೊಂದಿದ್ದ ಇಲ್ಲಿಯ ಸಂಘ ಪರಿವಾರದವರು ಅದಕ್ಕೋಸ್ಕರ ಅಬ್ಬರದ ಪ್ರಚಾರ ನಡೆಸಿದರು. ವಿಧವಿಧ ವಿಧ್ವಂಸಕ ಅಟ್ಟಹಾಸ ತೋರಿದರು.

ಈ ಹಿಂದೆ 1992 ರಲ್ಲಿ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಮೊದಲು ಬಿಜೆಪಿ ಮತ್ತು ಸಂಘ ಪರಿವಾರದವರು ಹಲವು ವರ್ಷ ಅಲ್ಲಿ ಸಮಸ್ಯೆಗಳನ್ನು ಹುಟ್ಟು ಹಾಕಿ ನಂತರ ಇಟ್ಟಿಗೆ ಯಾತ್ರೆ, ಪಾದುಕೆಯಾತ್ರೆ, ಪಾಂಚಜನ್ಯ ಯಾತ್ರೆ, ಇತ್ಯಾದಿಗಳು ಶಿಲಾನ್ಯಾಸ ಮೊದಲಾದದುನ್ನು ನಡೆಸಿ ದೇಶದ ಉದ್ದಗಲದಲ್ಲಿ ಕೋಮು ಪ್ರಚೋದನೆ ನಡೆಸಿದ್ದುದನ್ನು ಭಾರತದ ಜನತೆ ಮರೆಯಲಾರರು.


ಈಗ ಅದೇ ತಂತ್ರವನ್ನು ಬಾಬಾಬುಡನ್‌ಗಿರಿ-ದತ್ತಪೀಠದಲ್ಲೂ ಪ್ರಾರಂಭಿಸಿದ್ದಾರೆ. **ದತ್ತಪೀಠವೊಂದನ್ನು ಗುರಿಯಾಗಿಸಿಕೊಂಡು ಕರ್ನಾಟಕದಲ್ಲೊಂದು ಅಯೋಧ್ಯೆ ನಿರ್ಮಾಣ ಮಾಡುವ ಸಂಚು ಮಾಡುತ್ತಿದ್ದಾರೆ. ಶತಮಾನಗಳಿಂದ ಬಾಬು ಬುಡನ್‌ಗಿರಿಯಲ್ಲಿರುವ ದರ್ಗಾಗಳನ್ನು ಧ್ವಂಸ ಮಾಡಿ ದತ್ತಾತ್ರೇಯ ಸ್ವಾಮಿಯ ಪ್ರತಿಷ್ಠಾಪನೆ ಮಾಡಲು ಹೊರಟಿರುವುದು ನಮ್ಮ ದೇಶದ ಜಾತ್ಯಾತೀತ ವ್ಯವಸ್ಥೆಗೆ ಒಂದು ಸವಾಲಾಗಿದೆ.** ಅದಕ್ಕೋಸ್ಕರ ಅವರು ಈಗ ಇಲ್ಲಿ ದತ್ತಮಾಲೆ, ದತ್ತ ಪಾದುಕೆ, ಪಾಂಚಜನ್ಯ ರಥ ಯಾತ್ರೆ ಆರಂಭಿಸಿದ್ದಾರೆ.

ಈ ಸಲದ ದತ್ತ ಜಯಂತಿಯ ಸಂದರ್ಭ ಹೊಸ ಒಂದು ಇತಿಹಾಸವನ್ನೇ ನಿರ್ಮಿಸುತ್ತೇವೆ ದತ್ತ ಪೀಠದ ವಿಮೋಚನೆ ಮಾಡುತ್ತೇವೆಂದು ಸಂಘ ಪರಿವಾರದ ಮುಖಂಡರುಗಳು ಯಾತ್ರೆಯ ಸಂದರ್ಭದಲ್ಲಿ ಎಲ್ಲೆಲ್ಲೂ ಅಬ್ಬರದ ಪ್ರಚಾರ ಮಾಡುತ್ತಾ ಬಂದಿತ್ತು. ಸರ್ಕಾರದ ಬಿಗಿ ಪೋಲಿಸ್ ಬಂದೋಬಸ್ತ್‌ನಿಂದಾಗಿ ಈ ಸಲ ಇದು ಹುಸಿಯಾ... ...ಯಿತು. **ಇವರ ಅಬ್ಬರದ ಪ್ರಚಾರಕ್ಕೆ ಚಿಕ್ಕಮಗಳೂರಿನ ಜನತೆ ಪ್ರತಿಕ್ರಿಯಿಸದೆ ಇದ್ದದ್ದು ಸಂಘ ಪರಿವಾರದವರಿಗೆ ಒಂದು ದೊಡ್ಡ ಸೋಲು ಎಂದೇ ಭಾವಿಸಬೇಕು.**

ನವೆಂಬರ್ 30 ರಂದು ಶೃಂಗೇರಿಯಿಂದ ಹೊರಟ ಅವರ ಪಾಂಚಜನ್ಯ ರಥಯಾತ್ರೆ ಡಿಸೆಂಬರ್ 9 ರಂದು ನಗರಕ್ಕೆ ಆಗಮಿಸಿದಾಗ ಅದನ್ನು ಸ್ವೀಕರಿಸಿ ಅವರು ನಡೆಸಿದ ಶೋಭಾ ಯಾತ್ರೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ಚಿಕ್ಕಮಗಳೂರಿನ ನಾಗರೀಕರನ್ನು ತಮ್ಮತ್ತ ಸೆಳೆಯುವಲ್ಲಿವಿಫಲರಾದರು. ಕೇವಲ ಒಂದು ಸಾವಿರಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿ ಬಜರಂಗದಳ-ವಿಶ್ವಹಿಂದು ಪರಿಷತ್‌ನ ಜನ ಶೋಭಾ ಯಾತ್ರೆಯಲ್ಲಿ ಭಾಗವಹಿಸಿದ್ದು ಅವರ ಪೈಕಿ ಚಿಕ್ಕಮಗಳೂರು ಜಿಲ್ಲೆಯವರು ಕೇವಲ ನೂರು ಇನ್ನೂರು ಮಾತ್ರ ಭಾಗವಹಿಸಿದ್ದು ಉಳಿದವರು ಬೇರೆ ಬೇರೆ ಜಿಲ್ಲೆಗಳಿಂದ ಬಂದವರಾಗಿದ್ದರು. ನಗರದೊಳಗೆ ಬಂದ ಪಾಂಚಜನ್ಯ ರಥಯಾತ್ರೆ, ಶಂಕರಮಠದಿಂದ ಶೋಭಾಯಾತ್ರೆಯೆಂಬ ಹೆಸರಿನಲ್ಲಿ ನಗರದ ಮುಖ್ಯಬೀದಿಯಲ್ಲಿ ಸಾಗಿತು. ಹಿಂದೆ ಸಶಸ್ತ್ರ ದಳದ ಪೋಲೀಸರು ಸಾಕಷ್ಟು ಬಿಗಿ ಬಂದೋಬಸ್ತ್‌ನಲ್ಲಿದ್ದರಲ್ಲದೆ ಮುಖ್ಯ ಬೀದಿಗೆ ಸಂಪರ್ಕದ ಎಲ್ಲಾ ಅಡ್ಡರಸ್ತೆಗಳನ್ನು, ಆಯಾಕಟ್ಟಿನ ಎಲ್ಲಾ ಪ್ರದೇಶಗಳ್ನು ಬಂದ್ ಮಾಡಿ ಶೀಘ್ರ ಕಾರ್ಯಾಚರಣೆ ಪಡೆ ಹಾಗೂ ಪೋಲೀಸರು ಬಿಗಿಯಾದ ಬಂದೋಬಸ್ತ್ ನಡೆಸುತಿದ್ದರು.

ಶೋಭಾ ಯಾತ್ರೆಯಲ್ಲಿ ಕೇಸರಿ ಟೋಪಿ, ಕೇಸರಿ ಶಲ್ಯ ಹೊದ್ದಿದ್ದು ಕೇಸರಿ ಧ್ವಜ ಕೈಯಲ್ಲಿ ಹಿಡಿದು ಆವೇಶಭರಿತರಾಗಿ ಗುಂಪುಗುಂಪಾಗಿ ಕುಣಿಯುತ್ತಿದ್ದ ಬಜರಂಗದಳದ ಯುವಕರು, **ಜಿಲ್ಲಾಡಳಿತ ಯಾವುದೇ ಕೋಮಿಗೆ ನೋವಾಗುವಂತಹ ಘೋಷಣೆ ಕೂಗಬಾರದೆಂದು, ಪಟಾಕಿ ಸಿಡಿಸಬಾರ ದೆಂದು ನಿರ್ದೇಶನ ನೀಡಿದ್ದರೂ ಅದನ್ನು ಕಡೆಗಣಿಸಿ ಘೋಷಣೆ ಕೂಗುವುದು, ಪಟಾಕಿ ಸಿಡಿಸುವುದನ್ನು ಪ್ರಾರಂಭಿಸಿದ್ದು, ಪೋಲೀಸರ ಶೀಘ್ರ ಮಧ್ಯಪ್ರವೇಶ ಹಾಗೂ ಎಚ್ಚರಿಕೆ ಯಿಂದ ಅವರ ಕಿಡಿಗೇಡಿತನಗಳನ್ನು ತಡೆಯಲಾಗುತ್ತಿತ್ತು.**

ಶೋಭಾ ಯಾತ್ರೆಯ ಭಾಗವಾಗಿ ಅಜಾದ್ ಪಾರ್ಕಿನಲ್ಲಿ ಸೇರಿದ್ದ 'ಧರ್ಮಸಭೆ'ಯಲ್ಲಿ ಜಿಲ್ಲೆ ...ರಾಜ್ಯದಿಂದ ಬಂದಿದ್ದ ಬಜರಂಗದಳ, ವಿಹೆಚ್‌ಪಿ ಮತ್ತು ಬಿಜೆಪಿಯ ಮುಖಂಡರು, ಬಿಜೆಪಿ ಸಂಸತ್ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಅಲ್ಲಿ ನೆರೆದಿದ್ದವರನ್ನುದ್ದೇಶಿಸಿ ಮತೀಯ **ಪ್ರಚೋದನೆಯ ಭಾಷಣ ಬಿಗಿದರಲ್ಲದೆ ಬಾಬಾ ಬುಡನ್‌ಗಿರಿ ವಿಮೋಚನೆ ತಮ್ಮ ಹಕ್ಕೆಂದು, ವಿಮೋಚನೆ ಕಾರ್ಯ ನಡೆಯುತ್ತದೆಂದು ಹೇಳಿದರಲ್ಲದೆ ಇತ್ತೀಚೆಗೆ ಕೋಮು ಸೌಹಾರ್ದ ಮಾನವ ಸರಪಳಿಯಲ್ಲಿ ಭಾಗವಹಿಸಿದವರನ್ನು ವಿಕೃತ**



ಮನಸ್ಸಿನವರೆಂದು, ಕೆಲಸವಿಲ್ಲದವರೆಂದು ಇತ್ಯಾದಿಯಾಗಿ ಸಿಕ್ಕಪಟ್ಟೆ ದೂರಿದರಲ್ಲದೆ ಎಚ್ಚರಿಕೆಯನ್ನು ಕೊಟ್ಟರು.

ಬಾಬಾ ಬುಡನ್‌ಗಿರಿ-ದತ್ತಪೀಠಕ್ಕೆ ತೆರಳುವ ಎಲ್ಲಾ ವಾಹನಗಳನ್ನು ಹಲವು ಕಡೆಗಳಲ್ಲಿ ಪೋಲೀಸರು ಶೋಧಿಸಿ ಒಂದೊಂದೇ

ಪುಟ 10ಕ್ಕೆ

ಚುಂಚನಗಿರಿ ಮಠದ ಆಡಳಿತದಲ್ಲಿ ಅನ್ಯಾಯ

'ಸರ್ವಜನ ಸುಖಿನೋಬವಂತು' ಎಂದು ಎಲ್ಲವನ್ನು ತ್ಯಾಗ ಮಾಡಿದ್ದೇವೆ ಎಂದು ಹೇಳುವ ಸ್ವಾಮೀಜಿಯವರು ನಡೆಸುವ ಆದಿಚುಂಚನಗಿರಿ ಮೆಡಿಕಲ್ ಕಾಲೇಜು ಆಸ್ಪತ್ರೆ ಮಠಕ್ಕೆ ತಮ್ಮ ಜಮೀನನ್ನು ದಾನ ಮಾಡಿ ಕೆಲಸಕ್ಕೆ ಸೇರಿದ ಕಾರ್ಮಿಕರು ಕೇಳಿದ್ದು ಸರ್ಕಾರ ನಿಗದಿಗೊಳಿಸಿರುವ ಕನಿಷ್ಟ ಕೂಲಿ. ಉದ್ಯೋಗ ಭದ್ರತೆ, ಬದಲಿಗೆ ಆಡಳಿತ ಮಂಡಳಿ ನೀಡಿದ್ದು ಕಾರ್ಮಿಕರ ಮುಖಂಡರ ಸಸ್ಪೆಂಡ್, ಕೆಲಸ ನಿರಾಕರಣೆ ಸುಳ್ಳು ಪೋಲೀಸ್ ಕೇಸು...... ಕಳೆದ ಸುಮಾರು 90 ದಿವಸಗಳ ಮುಷ್ಕರ ನಿರತ ಆದಿಚುಂಚನಗಿರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ನೌಕರರ ಹೋರಾಟಕ್ಕೆ ಹೈಟೆಕ್ ಮುಖ್ಯಮಂತ್ರಿ ಕೃಷ್ಣ ಸರ್ಕಾರ ನ್ಯಾಯ ಒದಗಿಸದೆ ಸುಮ್ಮನಿರುವುದು ಏಕೆ? ಕಾರ್ಮಿಕ ಸಚಿವರು ಏನಾದರು? ಸ್ಥಳೀಯ ಚುನಾಯಿತ ಶಾಸಕರ ಕಣ್ಣಿಗೆ ಇದು ಕಾಣುತ್ತಿಲ್ಲವೆ? ವಿಚಾರಗಳ ವಿವರ ಈ ಲೇಖನ.

ಆಗಸ್ಟ್ 3, 2000 ಸಮಯ ಮಧ್ಯಾಹ್ನ ಸುಮಾರು 4 ಗಂಟೆಗೆ ಮಂಗಳೂರು-ಬೆಂಗಳೂರು ಹೈವೇ ರಸ್ತೆಯ ಬೆಳ್ಳೂರುಕ್ರಾಸ್ ಸುತ್ತಲು ಕಲ್ಲು ಬಂಡೆಯ ನಡುವೆ ಸುಮಾರು 300 - 350 ಜನ ನೌಕರರು ಒಂದೆಡೆ ಸೇರಿದ್ದಾರೆ. ಅವರು ತಮ್ಮ ಸಂಕಷ್ಟಗಳ ಬಗ್ಗೆ ಮಾತಾಡಲು. ದೇಶವು ಸ್ವಾತಂತ್ರ್ಯ ಪಡೆದ ಆಗಸ್ಟ್ ತಿಂಗಳಲ್ಲೇ ಕದ್ದು ಸಭೆ ಸೇರಿರುವ ಸ್ಥಿತಿ! ಕಾಂ. ವಿ.ಜೆ.ಕೆ.ನಾಯರ್, ಮೋಹನ್ ಕುಮಾರ್, ಅಲ್ಲಾಬಕಾಷ್, ಕೋದಂಡರಾಮ್, ಮುಜಿಬ್ ಇತರರು ಆ ಸಭೆಯಲ್ಲಿ ಇದ್ದರು. ಸಭೆ ನಡೆಯುತ್ತಿರುವಾಗಲೇ ಸದ್ದು ಗದ್ದಲು ಮಾಡುತ್ತಾ ಆಕಾಶದಲ್ಲಿ ಹೆಲಿಕಾಪ್ಟರ್ ಬಂದಿತು. ನೌಕರರ ಮನಸ್ಸುಗಳಲ್ಲಿ ಒಂದು ರೀತಿಯ ದುಗುಡ. ನಾವು ಯಾರೂ ವಿಐಪಿಗಳು ಹೋಗುತ್ತಿದ್ದಾರೆಂದು ಕೊಂಡೆವು. ನಮ್ಮ ನೌಕರರಿಂದಲೇ ತಿಳಿಯಿತು ಇದು ಆದಿಚುಂಚನಗಿರಿ ಮಠಾಧೀಶ ಶ್ರೀ ಬಾಲಗಂಗಾಧರನಾಥ ಸ್ವಾಮಿಯವರು ಎಂದು.

ಸ್ವಾಮೀಜಿಗೆ ಆಗಲೇ ಆಸ್ಪತ್ರೆಯ ಸಿಬ್ಬಂದಿ ಕನಿಷ್ಟ ಕೂಲಿ, ಕೆಲಸದ ಭದ್ರತೆ, ಇತರೆ ವಿಚಾರಗಳಲ್ಲಿ ಕಾನೂನು ರೀತಿ ಸೌಲಭ್ಯ ಪಡೆಯಲು ಸಂಘಟಿತರಾಗುತ್ತಿರುವ ಬಗ್ಗೆ ಬಗಾವತ್‌ನ ವಾಸನೆ ಹತ್ತಿದೆ. ಮಠಕ್ಕೆ ಮರಳಿದ ಅವರು ತಕ್ಷಣ ನಿರ್ದೇಶಕಿ ಕಾಂತಾಳ ಕಚೇರಿಗೆ ಫೋನಾಯಿಸಿದರು. ಏನು ನೌಕರರೆಲ್ಲ ಗುಡ್ಡದ ಮಧ್ಯದಲ್ಲಿ ಸೇರಿದ್ದಾರೆ? ಕಾಂತ ಕಚೇರಿಯಲ್ಲೆ ಇಲ್ಲ ಅಲ್ಲೆ ಇದ್ದ ನೌಕರ ಉತ್ತರಿಸಿದ್ದಾನೆ. ಸ್ವಾಮಿ ನೌಕರರು ಚೀಟಿ ನಡೆಸಲು ಒಂದು ಕಡೆ ಸೇರಿದ್ದಾರೆ ಎಂದು ಹೀಗೆ ಆರಂಭವಾದುದು ಅಲ್ಲಿಯ ಸಂಘದ ಚಟುವಟಿಕೆ.

ಸೈಯದ್ ಮುಜೀಬ್

ನಂತರದಲ್ಲಿ ಸ್ವಾಮೀಜಿ ಸಂಘ ಕಟ್ಟಲು ಯತ್ನಿಸುತ್ತಿರುವ ಮುಖಂಡರನ್ನು ಕರೆದು ನೀವು ಸಂಘ ಕಟ್ಟಬೇಡಿ ಎಂದು, ಅವರು ಕಮ್ಯುನಿಸ್ಟರು ಅವರ ಮಾತು ಕೇಳಬೇಡಿ. ಕೇರಳದ ಕಾಟ್ಪಾಡಿಗಳ ಮಾತು ನಂಬಬೇಡಿ. ನೀವು ಸಂಘ ಕಟ್ಟಿದರೆ ಪರಿಣಾಮ ಸರಿ ಇರುವುದಿಲ್ಲ ಎಂದು ಬೆದರಿಸಿದರು. ಆದರೆ

> **ಎಸ್.ಪಿ.ಎತ್ತಂಗಡಿ ಏಕೆ?**
>
> ಮಂಡ್ಯ ಜಿಲ್ಲೆಯ ಪೋಲೀಸ್ ವರಿಷ್ಠಾಧಿಕಾರಿಯಾಗಿದ್ದ ಶ್ರೀ ಚರಣ ರೆಡ್ಡಿ ಅವರು ಆಡಳಿತ ಮಂಡಳಿಯ ಪ್ರಭಾವದಿಂದಾಗಿ ಮಂಡ್ಯ ಜಿಲ್ಲೆಯಿಂದ ಎತ್ತಂಗಡಿ ಮಾಡಿಸಲಾಗಿದೆ ಎಂದು ಎಲ್ಲೆಡೆ ಗುಸು ಗುಸು. ಇದು ಏಕೆ ಎಂದು ಹೈಟೆಕ್ ಕೃಷ್ಣ ಹೇಳುವರೆ?
>
> ಬೆಳ್ಳೂರು ಕ್ರಾಸ್ ಪೋಲೀಸ್ ಠಾಣೆ ಎಸ್.ಐ. ಅನ್ನೂ ಸಹ ಎತ್ತಂಗಡಿ ಮಾಡಿಸಲು ಆಡಳಿತ ಮಂಡಳಿ ವಿಫಲ ಪ್ರಯತ್ನ ನಡೆಸಿದಾಗ ಸುತ್ತಮುತ್ತಲಿನ 5.6 ಹಳ್ಳಿಯ ಸಾವಿರಾರು ಜನ ಪ್ರತಿಭಟಿಸಿದ್ದಾರೆ. ತಮ್ಮ ... ಇಂದೆ ಪೋಲೀಸ್ ಅನ್ನು ಅಲ್ಲಿಗೆ ಕರಲು ಪ್ರಯತ್ನ ನಡೆದದ ... ರೈತರು ಮಾತನಾಡುತ್ತಿದ್ದಾರೆ. ಹೋರಾಟ ಮುರಿಯಲು ಪೋಲೀಸ್ ಬಳಸಲು ಆಡಳಿತ ಮಂಡಳಿ ಉದ್ದೇಶಿಸಿದೆ ಎಂದು ಕಾರ್ಮಿಕರು ದೂರುತ್ತಿದ್ದಾರೆ.

ನೌಕರರು ಅವರ ಗೊಡ್ಡು ಬೆದರಿಕೆಗೆ ಹೆದರಲಿಲ್ಲ. ಈ ಹಿಂದೆ ಮಠಕ್ಕೆ ದಾನ ಕೊಟ್ಟು ಬೆಳೆಸಿದ ರೈತರ ಮಕ್ಕಳು ಈ ನೌಕರರು. ಬೆಳ್ಳೂರು ಕ್ರಾಸ್ ಬಳಿ ಬಾಲಗಂಗಾಧರ ನಗರದಲ್ಲಿ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜು ... ತಮ್ಮ ಜಮೀನನು ನೌಕರಿಯನ್ನು ಪಡೆದು ಈ ಪ್ರದೇಶದ ಅಸುಪಾಸಿನ ಬೆಳ್ಳೂರು ಕ್ರಾಸ್, ನೆಲ್ಲಿಕೆರೆ, ಚುಂಚನಹಳ್ಳಿ, ಅಗಚಿ ಹಳ್ಳಿ, ಬೊಮ್ಮನ ಹಳ್ಳಿ, ಚಾಮಲಾಪುರ, ಜವರನ ಹಳ್ಳಿ, ಗೋವಿಂದಘಟ್ಟ ಗ್ರಾಮಗಳ ರೈತರ ಮಕ್ಕಳು



ಬಾಲಗಂಗಾಧರನಾಥ ಸ್ವಾಮೀಜಿ

ಆಸ್ಪತ್ರೆಯಲ್ಲಿನ ವಾರ್ಡ್‌ಬಾಯ್ಸ್, ಸ್ವೀಪರ್, ಜವಾನ, ಗುಮಾಸ್ತರಾಗಿ ಸೇರಿಕೊಂಡರು.

ಹಸನಾಗದ ಬದುಕು - ನೌಕರರೆಲ್ಲ ಮಠದ ಸೇವಕರು!

ಜಮೀನು ಕೊಟ್ಟು ನೌಕರಿ ಗಿಟ್ಟಿಸಿದ ನೌಕರರು ದಿನದ 10 ರಂದ 12 ಗಂಟೆಗಳ ಕಾಲ ದುಡಿದರು. ದಕ್ಕುತ್ತಿದ್ದ ಸಂಬಳ ಮಾತ್ರ 500 ರಿಂದ 800 ಮಾತ್ರ. ಸರ್ಕಾರದ ಕನಿಷ್ಟ ಕೂಲಿ ಕಾಯ್ದೆ ಅಡಿ ನೌಕರರಿಗೆ ನೀಡಬೇಕಾದ ಕೂಲಿ ಕೇಳಲು ನೌಕರರು ಸಂಘಟಿತರಾಗ ತೊಡಗಿದರು. ಈ ಹಿಂದೆಯೇ ಕುಖ್ಯಾತಿ ಪಡೆದ ಡಾ. ಎಸ್.ಕಾಂತಾ ನಿರ್ದೇಶಕಿಯಾಗಿ ಆಸ್ಪತ್ರೆಗೆ ಬಂದ ಮೇಲಂತು ನೌಕರರ ಮೇಲಿನ ದಬ್ಬಾಳಿಕೆಗಳು ತೀವ್ರರೂಪ ಪಡೆಯತೊಡಗಿತು. 5 ನಿಮಿಷಗಳು ತಡವಾದರೂ ಒಂದು ಮಾರ್ಕ್. ಮೂರು ಮಾರ್ಕ್‌ಗಳೆಂದರೆ ಒಂದು ದಿನದ ಸಂಬಳ ಕಡಿತ. ಮನಸ್ಸೋ ಇಚ್ಛೆ ನೌಕರರ ಮೇಲೆ ಇವರ ದಬ್ಬಾಳಿಕೆ ನಡೆಯುತ್ತಿತ್ತು. ಎಸ್.ಎಫ್.ಐ. ಸಂಗಾತಿ ತಮ್ಮ ತಾಯಿ ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋದಾಗ ನೌಕರರ ನೋವುಗಳ ಕಂಡು ಸಿಐಟಿಯು ಸಂಪರ್ಕಕ್ಕೆ ಬಂದು ಪ್ರಾರಂಭವಾದ ಸಂಘವಿದು.

ಹೀಗೆ ಸಂಘಟಿತರಾಗುತ್ತಾ ನೌಕರರ ಮುಖಂಡರು ಕನಿಷ್ಟ ಕೂಲಿ ಪಡೆಯಲು ಸಂಘಟನೆ ಬಲಿಷ್ಟಗೊಳಿಸತೊಡಗಿದರು. 2-3 ಸಭೆಗಳು ನಡೆದವು. ಕನಿಷ್ಟ ಕೂಲಿ ಕೊಡಬೇಕು ಎಂಬುದು ವರ್ಗ ಸಂಘದ ಬೇಡಿಕೆ. ಆದರೆ ಕನಿಷ್ಟ ಕೂಲಿ ಕೇಳಿದ್ದಕ್ಕೆ ಆಡಳಿತ ವರ್ಗ ನೀಡಿದ್ದು ಸಂಘದ 7 ಜನ ಮುಖಂಡರ ಅಕ್ರಮ ವರ್ಗಾವಣೆ ಮಾಡಿರುವುದು. ಉಪಕಾರ್ಮಿಕ ಆಯುಕ್ತರಲ್ಲಿ ಸಂಘವು ನೌಕರರಿಗೆ ಕನಿಷ್ಟವೇತನ ನೀಡುತ್ತಿಲ್ಲವೆಂದು ದೂರಿತ್ತು. ವಿವಾದ ಎತ್ತಿದಾಗ ಆಡಳಿತ ಮಂಡಳಿಯವರ ವಕೀಲರು ನೌಕರರನ್ನು ಇವರು ಕಾರ್ಮಿಕರಲ್ಲ ಮಠದ ಸೇವಕರು ಹಾಗಾಗಿ ಕಾರ್ಮಿಕ ಕಾನೂನುಗಳು ಇವರಿಗೆ ಅನ್ವಯಿಸುವುದಿಲ್ಲ ಎಂದು ವಾದಿಸಿದ್ದಾರೆ. ಪ್ರತಿವರ್ಷ ಲಕ್ಷಾಂತರ ರೂ.ಗಳ ಲಾಭಗಳಿಸುವ ಮೆಡಿಕಲ್ ಕಾಲೇಜು ವಿದ್ಯಾದೇವತೆ ಶಾರದೆಯ ಮಾರಾಟದಲ್ಲಿ ತೊಡಗಿರುವ ಆಡಳಿತ ವರ್ಗ ತುಂಡುಬಟ್ಟೆಗೂ ಸಾಲದ ನೌಕರರ ವೇತನ ಹೇಗಿದೆ 'ಸರ್ವೇಜನ ಸುಖಿನೋಭವಂತು!'

ಹೋರಾಟದ ಕಣದಲ್ಲಿ ಧೀರ ನೌಕರರು - ಹಾರಿದ ಕೆಂಪು ಪತಾಕೆ

7 ಜನ ನೌಕರರ ಅಕ್ರಮ ವರ್ಗಾವಣೆ ವಿರೋಧಿಸಿ ನೌಕರರು 7.9.2000 ರಂದು ಆಸ್ಪತ್ರೆಯ ... ಅವರಿಗೆ ಬೆಂಬಲಿಸಿ ಎಲ್ಲಾ ನೌಕರರು 2 ಗಂಟೆಗಳ ಕಾಲ ಸಾಂಕೇತಿಕ ಮುಷ್ಕರ ನಡೆಸುವಂತೆ ತೀರ್ಮಾನಿಸಿ ಅದರಂತೆ ನಡೆದಿದ್ದಾರೆ. ಆದರೆ ಆಡಳಿತ ಮಂಡಳಿ ಸಾಂಕೇತಿಕವಾಗಿ ಮುಷ್ಕರ ಮುಗಿಸಿ ಕರ್ತವ್ಯಕ್ಕೆ ಹಾಜರಾದ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಎಲ್ಲಾ ನೌಕರರ ಅನಿರ್ದಿಷ್ಟ ಮುಷ್ಕರಕ್ಕೆ ಮುಂದಾಗುವಂತೆ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಅಂದಿನಿಂದಲೇ ನೌಕರರು ಆಸ್ಪತ್ರೆಯ ಎದುರು ಕೆಲಸಕ್ಕೆ ತೆಗೆದುಕೊಳ್ಳುವಂತೆ ಹಾಗೂ ಅಕ್ರಮ ವರ್ಗಾವಣೆ, ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ಅನಿರ್ದಿಷ್ಟ ಮುಷ್ಕರ ಆರಂಭಿಸಿ ದ್ದಾರೆ. ಕಾರ್ಮಿಕ ಆಯುಕ್ತರ ಮಧ್ಯ ಪ್ರವೇಶದಿಂದಾಗಿ 25.9.2000 ದಂದು ಮುಷ್ಕರವನ್ನು ಸ್ಥಗಿತ ಗೊಳಿಸಿ ಕೆಲಸಕ್ಕೆ ಹೋಗುವಂತೆ ಸಂಘವು ತೀರ್ಮಾನಿಸಿತು. ನೌಕರರು ಮುಷ್ಕರವನ್ನು ಅಂತ್ಯಗೊಳಿಸಿ 26.9.2000 ದಂದು ಕೆಲಸಕ್ಕೆ ಹಾಜರಾದಾಗಲೂ ಅವರು ತಮ್ಮ ಕರ್ತವ್ಯಗಳಿಗೆ ಹಾಜರಾಗಲು ಅವಕಾಶವನ್ನು

> **'ಧರ್ಮದ ಹೆಸರಲಿ ದೇಶದ ತುಂಬ ಸಾವಿರ ಸಾವಿರ ಸಾವುಗಳು ಮೆರೆಯುವ ಮಠಗಳ ಪೀಠದ ಕೆಳಗೆ ನರಳುವ ಅಸಂಖ್ಯ ನೋವುಗಳು**
>
> - ಬರಗೂರು ರಾಮಚಂದ್ರಪ್ಪ

> **ಅಕ್ಕಿ, ತೆಂಗು ನೀಡಿ ಶುಭ ಹಾರೈಸಿದ ರೈತಾಪಿ ವರ್ಗ**
>
> **ಕಳೆದ 100 ದಿನಗಳಿಂದ ಹೋರಾಟ ನಿರತರಾಗಲು ಕಾರ್ಮಿಕರಿಗೆ ಸ್ಥಳೀಯ ರೈತಾಪಿ ವರ್ಗದ ಬೆಂಬಲ ಸ್ಮರಣೀಯವಾದುದು. ಈ ಹಿಂದಿನಿಂದಲೂ ಹೋರಾಟದಲ್ಲಿರುವ ಕಾರ್ಮಿಕ ಟೆಂಟ್ ಬಳಿ ಸುತ್ತಮುತ್ತಲ ಹಳ್ಳಿಯ ರೈತರು ಅಕ್ಕಿ, ತೆಂಗಿನ ಕಾಯಿ ತಂದು ಬೆಂಬಲ ನೀಡಿದ ರೈತರು ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಶುಭ ಹಾರೈಸುತ್ತಿದ್ದರು. ರೈತ-ಕಾರ್ಮಿಕರ ಸಕ್ಯತೆ ಸ್ಫೂರ್ತಿದಾಯಕವಾದುದು.**

ಆಡಳಿತ ಮಂಡಳಿ ನೀಡಿಲ್ಲ. ಆ ಮೂಲಕ ಅದು ಮತ್ತೆ ತನ್ನ ಹಠಮಾರಿತನವನ್ನು ಪ್ರದರ್ಶಿಸಿದೆ.

ತದನಂತರ ಆಡಳಿತ ವರ್ಗವು ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ಪೋಲೀಸ್ ವರಿಷ್ಠಾಧಿಕಾರಿಗಳು ಒಳಗೊಂಡ ಸಮಿತಿ ಒಂದನ್ನು ನೇಮಿಸಿದೆ. ಆ ಸಮಿತಿಯು ನೌಕರರಿಗೆ 23.10.2000 ದಂದು ಕೆಲಸಕ್ಕೆ ಹೋಗುವಂತೆ ಸೂಚಿಸಿದೆ. ನೌಕರರು ಕೆಲಸಕ್ಕೆ ಹೋದರೆ ಮತ್ತೆ ಆಡಳಿತಮಂಡಳಿಯು ನೌಕರರು ಕೆಲಸ ಮಾಡದಂತ ತಡೆದಿದೆ. ಅಲ್ಲದೆ ಪ್ರತಿ ನೌಕರರು ವೈಯಕ್ತಿಕವಾಗಿ ಕನಿಷ್ಟ ವೇತನದ ಬಾಕಿಯನ್ನು ಪಾವತಿಸುವಂತೆ ಹಾಕಿರುವ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯುವ ಹಾಗು ಸಂಘವನ್ನು ಬಿಟ್ಟು ಬರುವಂತೆ ಒತ್ತಡ ಹೇರುವುದರ ಮೂಲಕ ಯಾರೊಬ್ಬರೂ ಕೆಲಸಕ್ಕೆ ಬರದಂತೆ ಮಾಡಿದ್ದಾರೆ. ಅಲ್ಲದೆ ಯಾವುದೇ ಮುನ್ಸೂಚನೆ, ವಿಚಾರಣೆ ನಡೆಸದೆ ಮತ್ತೆ 38 ಮಂದಿ ನೌಕರರನ್ನು ಕೆಲಸದಿಂದ ಅಮಾನತ್ತು ಗೊಳಿಸಿದ್ದಾರೆ. ಈ ಮಧ್ಯೆ ನೌಕರರನ್ನು ಮಾತುಕತೆಗೆಂದು ತಮ್ಮ ಅನುಯಾಯಿಗಳ ಮೂಲಕ ಕರೆಸಿ, ಮಾತುಕತೆಗೆ ಬಂದ ಮುಖಂಡರು ನನ್ನ ಮೇಲೆ ಬಾಂಬ್ ಹಾಕಲು ಬಂದಿದ್ದಾರೆಂದು ಸುಳ್ಳು ಪೋಲೀಸ್ ಕೇಸ್ ದಾಖಲಿಸಲು ಯತ್ನಿಸಿದೆ. ಕೇಸ್ ದಾಖಲಿಸಿ, ಕ್ರಮ ವಹಿಸಲು ನಿರಾಕರಿಸಿದ ಇನ್ಸ್‌ಪೆಕ್ಟರರನ್ನು ಎತ್ತಂಗಡಿ ಮಾಡಿಸಿಬಿಟ್ಟರು.

ಕಣ್ಣಿದ್ದು ಕಾಣದ ಹೈಟೆಕ್ ಕೃಷ್ಣ ಸರ್ಕಾರ

ಇಷ್ಟೆಲ್ಲಾ ನಡೆಯುತ್ತಿರುವಾಗಲೇ ತಮ್ಮ ಸ್ವಂತ ಜಿಲ್ಲೆ ಮಂಡ್ಯದಲ್ಲಿ ಕೆಲವು ದಿನಗಳ ಹಿಂದೆಯಷ್ಟೆ ಹಂಗರಹಳ್ಳಿ ಅಮಾನವೀಯ ಜೀತ ಪದ್ಧತಿಯ ಪ್ರಕರಣ ಜನರ ಮನದಿಂದ ಮರೆಯುವ ಮೊದಲೇ ಪಾಳೆಗಾರಿ, ಅಮಾನವೀಯ ದಬ್ಬಾಳಿಕೆಯಿಂದ ಕೂಡಿದ ಚುಂಚನಗಿರಿ ಆಸ್ಪತ್ರೆಯ ನೌಕರರ ಹೋರಾಟ 90 ನೇ ದಿನಕ್ಕೆ ಕಾಲಿಟ್ಟಿದೆ. ಹೈಟೆಕ್ ಮುಖ್ಯಂತ್ರಿ ಕೃಷ್ಣ ಅವರಿಗೆ ನೌಕರರ ಗೋಳು ತಿಳಿಯದೇ? ತಿಳಿದರೂ ಅವರು ಏನೂ ಮಾಡದ ಅಸಹಾಯಕರೇ? ಕೃಷ್ಣ ಮನೆ ಮುಂದೆಯೂ ಧರಣಿ ನಡೆಸಿದರೂ ಚಕಾರ ಎತ್ತಿಲ್ಲ. ಚರ್ಚೆಗೆ ಇಳಿದರೂ ಬಾಯಿಯನ್ನು ಮುಖ್ಯಮಂತ್ರಿ ತೆರೆಯಲಿಲ್ಲ. ಬದಲಾಗಿ ನನ್ನ ಮನೆಯ ಮುಂದೆ ಏಕೆ? ಕಬ್ಬನ್ ಪಾರ್ಕ್, ಇನ್ನೆಲ್ಲಿಗೋ ಹೋಗಿ? ಎಂದು ಕಿಡಿ ನುಡಿದಿದ್ದಾರೆ.

ರಾಜ್ಯದಲ್ಲಿ ಕಾನೂನುಗಳಿಗೆ, ಆಡಳಿತಕ್ಕೆ ಗೌರವ ಇದೆಯಾದರೆ ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರೇ. ಕೃಷ್ಣ ಸರ್ಕಾರ ಈ ಕೂಡಲೇ ಮಧ್ಯ ಪ್ರವೇಶಿಸಬೇಡವೇ? ಆಡಳಿತ ಮಂಡಳಿಯ ಅನ್‌ಫೇರ್ ಲೇಬರ್ ಪ್ರಾಕ್ಟೀಸ್‌ನ್ನು ಅಂತ್ಯಗೊಳಿಸಿ ಹೋರಾಟ ನಿರತ ನೌಕರರಿಗೆ ಮಧ್ಯಂತರ ಪರಿಹಾರ ನೀಡಲು ಮುಂದಾಗುವ ಮೂಲಕ ಎಲ್ಲರಿಗೂ ನ್ಯಾಯ-ಕಾನೂನು ಒಂದೇ ಎಂಬುದನ್ನು ಸಾಬೀತು ಪಡಿಸುವರೇ?



...ಮುಂದೆ ನೌಕರರ ಧರಣಿ

ರಾಜ್ ಬಿಡುಗಡೆ ಮತ್ತು ನಂತರ.....

ಕನ್ನಡದ ಮೇರು ನಟ ಡಾ. ರಾಜ್‌ಕುಮಾರ್ ಅವರು ಬಿಡುಗಡೆಯಾದ ನಂತರದ ಬೆಳವಣಿಗೆಗಳನ್ನು ಗಮನಿಸಿದರೆ ಹಲವು ಗುಮಾನಿಗಳು ಬರುತ್ತವೆ. ರಾಜಕುಮಾರರ ಬಿಡಗಡೆಯೊಂದೇ ನಮ್ಮ ಆದ್ಯತೆಯೆಂದು ಹೇಳಿದ ಸರ್ಕಾರ ಅವರನ್ನು ಬಿಡುಗಡೆ ಮಾಡಲು ವಿಚ್ಛಿದ್ರಕಾರಿ, ಪ್ರತ್ಯೇಕತಾವಾದಿ ಮತ್ತು ಉಗ್ರಗಾಮಿ ಸಂಘಟನೆಗಳೊಂದಿಗೆ ಸಂಬಂಧವಿರುವ ಎಲ್ಲರನ್ನು ಉಪಯೋಗಿಸಿಕೊಂಡಿದ್ದು ಎಷ್ಟು ಆತಂಕಕಾರಿ ಎಂದು ಆ ಸಂದರ್ಭದಲ್ಲಿ ಯಾರೂ ಯೋಚಿಸುವ ಗೋಜಿಗೆ ಹೋಗಲಿಲ್ಲ. ದೇಶ, ರಾಜ್ಯ ಏನಾದರೂ ಚಿಂತೆಯಿಲ್ಲ ರಾಜ್ ಬಿಡುಗಡೆಯಾದರೆ ಸಾಕು ಎಂಬ ಗುಂಗಿನಲ್ಲಿ ಹಲವಾರು ರಾಷ್ಟ್ರವಿರೋಧಿ ಮತ್ತು ರಾಜ್ಯವಿರೋಧಿ ಶಕ್ತಿಗಳಿಗೆ ರಹದಾರಿಯನ್ನು ನಮ್ಮ ರಾಜ್ಯದಲ್ಲಿ ಕೊಡಲಾಗಿದೆಯೇ?


ನವೆಂಬರ್ 26 ರಂದು ರಾಜಕುಮಾರ್ ಅವರ ಬಿಡುಗಡೆಯಲ್ಲಿ ಪ್ರಮುಖ ಪಾತ್ರವಹಿಸಿದ ತಮಿಳು ರಾಷ್ಟ್ರವಾದಿ ನಾಯಕ ನೆಡುಮಾರನ್ ಅವರು ಮೈಸೂರಿಗೆ ಬಂದಾಗ ಅವರಿಗೆ ಸಿಕ್ಕ ಸ್ವಾಗತ ಮತ್ತು ಪ್ರಚಾರಗಳನ್ನು ಗಮನಿಸಿದರೆ ನಾವು ಎಲ್ಲಿ ಹೋಗುತ್ತಿದ್ದೇವೆ, ಇಲ್ಲಿನ ಸರ್ಕಾರಕ್ಕೆ ಏನಾದರೂ ಕಣ್ಣು ಕಿವಿಗಳಿವೆಯೋ, ಇದ್ದರೂ ಕಿವುಡರಾಗಿ ಮೂಕರಾಗಿದ್ದಾರೆಯೇ? ಎಂಬ ದಟ್ಟವಾದ ಗುಮಾನಿ ಬರುತ್ತದೆ.

ಆತ ಮೈಸೂರಿಗೆ ಬರುವ ದಾರಿಯಲ್ಲಿ ಕೊಳ್ಳೆಗಾಲದಲ್ಲಿ ಆತನಿಗೆ ಏರ್ಪಡಿಸಿದ್ದ ಸ್ವಾಗತ ಸಮಾರಂಭವನ್ನು ಗಮನಿಸಿದರೆ ನಾವು ಎಷ್ಟು ಅಧೋಗತಿಗೆ ಹೋಗುತ್ತಿದ್ದೇವೆ ಎಂಬುದು ತಿಳಿಯುತ್ತದೆ.

ಮೈಸೂರಿನಲ್ಲಿ ಟಾಡಾ ಬಂಧಿಗಳಾಗಿದ್ದ 51 ಜನರನ್ನು ಭೇಟಿ ಮಾಡಿದ್ದು ಮತ್ತು ಆತ ಮೈಸೂರಿನಲ್ಲಿ ಈ ಸರ್ಕಾರದ ಬಗ್ಗೆ ಮಾಡಿದ ಟೀಕೆಗಳು ಮತ್ತು ಬೆದರಿಕೆಗಳನ್ನು ನೋಡಿದರೆ ಸರ್ಕಾರ ಇಷ್ಟೊಂದು ಮೌನ ಯಾಕೆ ವಹಿಸಿದೆ ಎಂಬ ಪ್ರಶ್ನೆ ಹುಟ್ಟುತ್ತದೆ. ಮೊದಲಿಗೆ ಇವನಿಗೆ ಟಾಡಾ ಬಂಧಿಗಳನ್ನು ಭೇಟಿ ಮಾಡಲು ಅಧಿಕಾರ ಕೊಟ್ಟವರ್‍ಯಾರು? ಸರ್ಕಾರ ಈ ಭೇಟಿಗೆ ಅನುಮತಿ ಕೊಟ್ಟಿದ್ದು ತಪ್ಪು. ಭಾರತದ ಪ್ರಜೆಯಾಗಿ ನೆಡುಮಾರನ್ ಈ ದೇಶದಲ್ಲಿ ಎಲ್ಲಿ ಬೇಕಾದರೂ ಹೋಗುವ ಹಕ್ಕಿದೆ ಆದರೆ ಗಂಭೀರ ರೀತಿಯಾದಂತಹ ಆರೋಪಗಳನ್ನು ಮತ್ತು ರಾಜ್ಯದ ಹಿತಕ್ಕೆ ಧಕ್ಕೆ ಉಂಟಾಗುವ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆಂಬ ಆರೋಪದ ಮೇಲೆ ಟಾಡಾ ಕಾಯ್ದೆ ಅನ್ವಯ ಬಂಧಿತರಾಗಿರುವವರನ್ನು ನಮ್ಮ ರಾಜ್ಯದ ಜೈಲಿನಲ್ಲಿ ಬಂದು ಭೇಟಿಯಾಗಿ ತಮಿಳರಿಗೆ ಕರ್ನಾಟಕದಿಂದ ಅನ್ಯಾಯ ಆಗಿದೆ ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾನೆ. ವರನಟ ರಾಜಕುಮಾರ್‌ರ ಬಿಡುಗಡೆಯಲ್ಲಿ ಪ್ರಮುಖ ಪಾತ್ರವಹಿಸಿರುವ ವರನ್ನು ತನಿಖೆಗೆ ಒಳಪಡಿಸಬೇಕೆಂಬ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ನಿಮ್ಮನ್ನು ಸಂಪರ್ಕಿಸಿದೆಯೇ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ 'ತನಿಖೆಗೆಂದು ಅವರು ನನ್ನ ಬಳಿ ಬರಲಿ ನೋಡೋಣ' ಎಂಬ ಬೆದರಿಕೆಯ ಮಾತನ್ನೂ ಕೂಡ ಕಿಡಿಕಾರಿದ್ದಾನೆ. ಆದರೆ ಸರ್ಕಾರ ಇದರ ಬಗ್ಗೆ ಚಕಾರವೆತ್ತಲಿಲ್ಲ ಮತ್ತು ಇದು ಭಯವೋ, ಮೌನವೋ ಅಥವಾ ಸರಕಾರದ ದಿವಾಳಿಕೋರ ನೀತಿಗಳೋ ತಿಳಿಯದು. ಇದಕ್ಕಿಂತ ಗಂಭೀರವಾದ ವಿಷಯ 26 ನವೆಂಬರ್ ಪತ್ರಿಕೆಗಳಲ್ಲಿ ವರದಿಯಾದ ಕನ್ನಡ ಚಲನಚಿತ್ರ ಕ್ರಿಯಾ ಸಮಿತಿಯು ನೆಡುಮಾರನ್‌ಗೆ ಸನ್ಮಾನ ಮಾಡುತ್ತದೆ ಎಂಬ ಸುದ್ದಿ. ಇದರ ಬಗ್ಗೆ ಸರ್ಕಾರದ ಪ್ರತಿಕ್ರಿಯ ತಕ್ಷಣ ಬರಲಿಲ್ಲ. ಇದರ ಅರ್ಥವೇನು? ಈ ರಾಜ್ಯದಲ್ಲಿ ಯಾರು ಏನು ಬೇಕಾದರೂ ಮಾಡಿಕೊಳ್ಳಬಹುದೆ? ನೆಡುಮಾರನ್‌ರನ್ನು ಸನ್ಮಾನ ಮಾಡುವ ಈ ಜನ ನಾಳೆ ಡಾ. ರಾಜ್ ಅವರನ್ನು ಜೀವಂತ ಬಿಟ್ಟಿದ್ದಾನೆ, ಅಣ್ಣಾವ್ರನ್ನು ಚೆನ್ನಾಗಿ ನೋಡಿಕೊಂಡಿದ್ದಾನೆ ಎಂದು ವೀರಪನ್‌ನ್ನು ಸನ್ಮಾನ ಮಾಡಲು ಮುಂದಾಗುವುದಿಲ್ಲ ಎಂದು ಹೇಗೆ ಹೇಳುವುದು? ಯಾಕೆಂದರೆ ರಾಜಕುಮಾರ್ ಬಂಧನದ ಸಂದರ್ಭದಲ್ಲಿ ಅವನ ಬಗ್ಗೆ ಹೊರಬಂದ ಮಾತುಗಳು ಮತ್ತು ಆತನ

ಜಿ.ವಿ.ಶ್ರೀರಾಮರೆಡ್ಡಿ

ಮುಂದೆ ಈ ಜನರೆಲ್ಲಾ ದೈನೇಸಿಗಳಾಗಿದ್ದನ್ನು ನೋಡಿದರೆ ಇವರಿಗೆಲ್ಲಾ ರಾಜ್ಯ ಮತ್ತು ದೇಶದ ಹಿತಕ್ಕಿಂತ ಮುಖ್ಯವಾದ ವುಗಳು ಬೇರೆ ಏನೇನೋ ಇದೆ ಎಂದೆನ್ನಿಸುತ್ತೆ.



ನೆಡುಮಾರನ್ ಮೈಸೂರಿನಲ್ಲಿ ಬಂಧನದಲ್ಲಿರುವ ಟಾಡಾ ಬಂಧಿಗಳನ್ನು ಭೇಟಿ ಮಾಡಿ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿರು ವುದಾಗಿ ಪ್ರಕಟಿಸಿದ್ದಾನೆ. ಇದಕ್ಕೂ ಸರ್ಕಾರ ನಿರುತ್ತರ. ಕಾರಣವೇನು? ಅಂದರೆ ಸರ್ಕಾರವು ಟಾಡಾ ಬಂಧಿ ಗಳನ್ನು ಬಿಡಿಸಲು ಪ್ರಯತ್ನ ಮಾಡಿ ಸುಪ್ರೀಂ ಕೋರ್ಟ್ ನಿಂದ ಛೀಮಾರಿ ಹಾಕಿಸಿ ಕೊಂಡಿದೆ. ಈಗ ನೆಡುಮಾರನ್ ಟಾಡಾ ಬಂಧಿಗಳನ್ನು ಬಿಡುಗಡೆ ಮಾಡಿಸಲು ಪ್ರಯತ್ನ ಮಾಡುತ್ತಾನೆಂದರೆ ಸರ್ಕಾರ ಮತ್ತು ನೆಡುಮಾರನ್ ಮಧ್ಯೆ ಇದರ ಬಗ್ಗೆ ಒಪ್ಪಂದ ಏರ್ಪಟ್ಟಿದೆಯೇ? ಇದಕ್ಕೆ ಪುರಾವೆಯಾಗಿ ಟಾಡಾ ಬಂಧಿಗಳ ಶೀಘ್ರ ವಿಚಾರಣೆಗೆ ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡಿರುವುದುನ್ನು ನೆಡುಮಾರನ್ ಸ್ವಾಗತ ಮಾಡಿದ್ದಾನೆ.

ಕೊಳತ್ತೂರು ಸಮಾವೇಶ: ವೀರಪ್ಪನ್ ವಿರುದ್ಧ ಕಾರ್ಯಾಚರಣೆ ಹೆಸರಿನಲ್ಲಿ ದಮನಕ್ಕೆ ಒಳಗಾಗಿರುವವರ ಸಮಸ್ಯೆಗಳನ್ನು ಚರ್ಚಿಸುವ ಹೆಸರಿನಲ್ಲಿ ಸೇಲಂ ಜಿಲ್ಲೆಯ ಕೊಳತ್ತೂರಿನಲ್ಲಿ ನಡೆದ ಸಮಾವೇಶ ಮತ್ತು ಅದರಲ್ಲಿ ಎಲ್‌ಟಿಟಿಇ ಸ್ನೇಹಿತರಾಗಿರುವ ನೆಡುಮಾರನ್ ಮತ್ತು ಅವರ ಸಂಗಡಿಗರು ಮಾಡಿರುವ ಭಾಷಣಗಳ ವೈಖರಿಯನ್ನು ನೋಡಿದರೆ ಕರ್ನಾಟಕದ ವಿರುದ್ಧ ತಮಿಳರನ್ನು ಎತ್ತಿ ಕಟ್ಟುವ ಮತ್ತು ಕರ್ನಾಟಕದ ಬಗ್ಗೆ ದ್ವೇಷ ಮತ್ತು ಅಸೂಯೆಯನ್ನು ಬೆಳೆಸುವ ಪ್ರಯತ್ನ ಅಲ್ಲಿ ನಡೆದಿದೆ. ಒಂದು ಪತ್ರಿಕೆಯಂತೂ ಕರ್ನಾಟಕದ ವಿರುದ್ಧ ತಮಿಳು ಸಂಘಟನೆಗಳ ದಂಗೆಯೆಂದೇ ವರದಿ ಮಾಡಿದೆ. ವೀರಪ್ಪನ್ ವಿರುದ್ಧ ಕಾರ್ಯಾಚರಣೆಯಲ್ಲಿ ನೊಂದವರನ್ನು ಸಂಘಟಿಸಿದ್ದು ಅವರು ನೆಡುಮಾರನ್ ಬಗ್ಗೆ ಅಭಿಮಾನ ಪ್ರಕಟಿಸಿದ್ದು ಇವೆಲ್ಲವು ಏನನ್ನು ಸೂಚಿಸುತ್ತವೆ? ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ನೊಂದವರ ಬಗ್ಗೆ ವಿಚಾರಣೆ ನಡೆಸಲು ಈಗಾಗಲೇ ಕರ್ನಾಟಕ ಸರ್ಕಾರ ಜಸ್ಟೀಸ್ ಸದಾಶಿವ ಆಯೋಗವನ್ನು ರಚನೆ

ಪುಟ 11 ಕ್ಕೆ

ಕರ್ನಾಟಕದಲ್ಲಿ ಕಳೆದವಾರ........

ಪುಟ 3 ರಿಂದ

ಪಾರದರ್ಶಕತೆಯಿಂದ ಆಯ್ಕೆ ಮಾಡುವುದು, ಸ್ವಜನಪಕ್ಷಪಾತ ತೊಲಗುವಿಕೆ, ಕೀಳು ರಾಜಕೀಯ ಈ ಅಂಶಗಳನ್ನು ಜನರ ಹಿತಗಳ ಆಧಾರದಲ್ಲಿ ಸರಿಪಡಿಸಬೇಕು.

ಉದಾರೀಕರಣ ಆರಾಧಕರಾಗಿರುವ ಸರ್ಕಾರ ಈಗೀಗಲಂತೂ ವಿಶ್ವಬ್ಯಾಂಕ್ ಮುಂತಾದ ಎಗ್ಗಿಲ್ಲದೇ ಎತ್ತುತ್ತಿರುವ ಸಾಲಕ್ಕೆ ಕೊಡುವ ಕಾರಣಗಳಲ್ಲೊಂದು ವಸತಿ ಸಮಸ್ಯೆ ಪರಿಹಾರ. ಹಾಗಾದರೆ ಅದನ್ನೂ ಒಳಗೊಂಡ ಸರ್ಕಾರದ ಹಣ ಎಲ್ಲಿಗೆ ಹೋಗುತ್ತದೆ. ಏನಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇವರು ತಂದ ಸಾಲಕ್ಕೆ ಬಡ್ಡಿ ತೆತ್ತು ಜನ ಸಾಯಬೇಕು ಎಂಬುದು ವಿಧಿ ನಿಯಮವಲ್ಲ.

ಬೊಂಡಾ ಮೇಳ ವಂಚನೆಯ ಉತ್ಸವ

ಪೇಜಾವರ ಮಠಾಧೀಶರು 'ಬೊಂಡಾ' ಮೇಳ ಉದ್ಘಾಟಿಸಿದ್ದಾರೆ. ಧರ್ಮಸ್ಥಳದ ಹೆಗ್ಗಡೆಯವರು ಅವನ್ನು ಖರೀದಿಸಿದ್ದಾರೆ. ರಾಮಕೃಷ್ಣರಿಗೂ ಭೂತ ಕೋಲಾಗಳಿಗೂ ಪ್ರಿಯವಾಗಿರುವ ಈ 'ಬೊಂಡಾ'ಕ್ಕೆ ಸಮನಾಗಿರುವ ಯಾವ ಪೇಯಗಳೂ ಇಲ್ಲವೆಂಬಂತೆ ಕೊಂಡಾಡಿದ್ದಾರೆ. ನಿರೀಕ್ಷೆಗೂ ಮೀರಿ ಬೊಂಡಾ ಮಾರಾಟ ಆಗಿದೆಯೆಂಬುದು ಕೇವಲ ಸುದ್ದಿ ಇರಬಹುದು.

ದೋಸೆ ಮೇಳ, ಜಿಲೇಬಿ ಮೇಳ ನೋಡಿ ಸಾಲಿಗೆ ಅಡಿಸಿದವರಿಗೆ ಬೋಂಡಾ ಮೇಳ ತಪ್ಪಿಹೋಯಿತೇ ಎಂದು ಕೊರಗದಿರಿ. ಇದು ತೆಂಗಿನಕಾಯಿ ಎಳನೀರಿಗೆ ದ.ಕನ್ನಡ-ಉಡುಪಿ-ಕಾರವಾರದ ಕಡೆ ಕರೆಯುವ ಹೆಸರು ಬೊಂಡಾ. ನಮ್ಮ ಬೋಂಡಕ್ಕೂ ಈ ಬೊಂಡಾಕ್ಕೂ ಇರುವ ಸ್ನೇಹ ಎಂದರೆ 'ಸ್ವದೇಶಿ' ಎಂಬುದು ಮೇಳದ ವಕ್ತಾರರ ಅಂಬೋಣ. ಇರಲಿ, ತೆಂಗಿನ ಬೆಲೆ ವಿಪರೀತವಾಗಿ ಕುಸಿದ ಸಮ್ಮುಖದಲ್ಲಿ ರೈತರನ್ನು ಉಳಿಸುವ ಒಂದೇ ಉಪಾಯ ಇಂತಹ 'ಸ್ವದೇಶಿ' ಬೊಂಡಾ ಪೇಯ ಎಂಬುದು ಸಂಘಟಕರು ಸೂಚಿಸುವ ಪರ್ಯಾಯಹಾದಿ. ಇದನ್ನು ಸಂಘಟಿಸಿದವರು ಬೇರಾರೂ ಅಲ್ಲ... ಸ್ವತಃ ಬಿಜೆಪಿ, ಸಂಘಪರಿವಾರದವರೇ! ಕೇಂದ್ರ ಸರ್ಕಾರದ ಆಮದು - ರಫ್ತು ನೀತಿಯಿಂದಾಗಿ ಲಂಕಾ, ಮಲೇಶಿಯಾದಿಂದ ತೆಂಗು ಪರ್ವತದಂತೆ ರಾಶಿ ರಾಶಿ ಭಾರತಕ್ಕೆ ಬಂದು ಬಿದ್ದಿದೆ. ಇದನ್ನು 'ಯಾಮಾರಿಸಲು' ಇದೇ ಮುಖಂಡರು ಹಿಂದೆ ವಾಜಪೇಯಿ ಮೇಲೆ ಭರವಸೆ ಇಡಲು, ಉಪದೇಶಿಸಿದ್ದರು. ಹೀಗೆ ಕಾಲಹರಣದಲ್ಲಿ ತೊಡಗಿ ಏನೂ ಆಗದೆ ರೈತರು ಪ್ರತಿಭಟನೆಯ ಹಾದಿ ಹಿಡಿಯುತ್ತಿರುವಾಗ ರೈತರ ಹಾದಿ ತಪ್ಪಿಸುವ ಇನ್ನೊಂದು ಪ್ರಹಸನ ಇದು. ಬಾಬ್ರಿ ಮಸೀದಿಯಿಂದ ಹಿಡಿದು ಲೇಖಕರ ಕೈಕಾಲು ಮುರಿಸುವವರೆಗೂ ಕಂಟ್ರಾಕ್ಟ್ ಹಿಡಿದ, ಈಗ ಬೀದಿಗೂ ಬಂದು ಸದಾ ಶುಭಾಶೀರ್ವಾದ ನೀಡುತ್ತಿರುವ ಸ್ವಾಮೀಜಿಯವರ ಅವರ ಅ'ಭಯ' ಹಸ್ತ ಬೇಕೆ. ರಾಜಕಾರಣ ದಾರಿ ತಪ್ಪಿದಾಗ ಧರ್ಮ ಅದರ ಉಳಿವಿಗೆ ಬರಬೇಕು ಎಂದು ಅಪ್ಪಣೆ ಕೊಡಿಸುತ್ತಿದ್ದ ಇವರ ಹೆಜ್ಜೆಗಳ ಈಗಿನ ಅರ್ಥವೇನು?

ಇಲ್ಲೇ ಸಿಗುವ ತೆಂಗಿನ ನೀರನ್ನು ರೂ. 5 ರಂತೆ ಎಲ್ಲರೂ ಕುಡಿದರೆ ಸಮಸ್ಯೆ ಪರಿಹಾರವಾಯಿತಲ್ಲ ಎಂಬ ಆಕರ್ಷಕ ವಾದ ಬೇರೆ. ಆದರೆ ಇಲ್ಲಿ ದೇಶದಲ್ಲಿ ಉತ್ಪಾದಿಸುವ ಎಲ್ಲಾ ಎಳೆನೀರನ್ನು ಎಲ್ಲರೂ ಕುಡಿಯಲು ಸಾಧ್ಯವೆ(?) ಕೋಟಿ ಕೋಟಿ ಜನಕ್ಕೆ ನೀರೂ ಸಿಗದ ಸ್ಥಿತಿ ಇರುವಾಗ ಅಡಿಗೆಗೆ, ಎಣ್ಣೆಗೆ ತೆಂಗು ಬೇಡವೇ? ಅದನ್ನು ಬೇಕಾದರೆ ವಿದೇಶದಿಂದಲೇ ಬರಲಿ ಎನ್ನುತ್ತಾರೆ. ವಿದೇಶಿ ನೆಂಟರ ಮೇಲೆ ಎಲ್ಲಿಲ್ಲದ ಪ್ರೀತಿ. ಸ್ವದೇಶಿ ಮತದಾರಲಕ್ಕಿಯ ಮೇಲೆ ಆಸೆ, ಹೇಗೆ ಹೊಂದಾಣಿಕೆ ಆಗುತ್ತದೆ. ಇಂತಹ ಬೊಂಡಾ ಮೇಳೆ ವಂಚನೆಯ ಉತ್ಸವ ಅಷ್ಟೆ.

ಮತಾಂಧತೆಯ ಹಲವು ಮುಖಗಳು

ವೀರಶೈವ ಹಿಂದು ಅಥವಾ ಸ್ವತಂತ್ರ ಧರ್ಮವೋ ಎಂಬ ಬಗ್ಗೆ ಮತ್ತೆ ವಾದ ವಿವಾದಗಳು ಬೀದಿಗೂ ಇಳಿದಿವೆ. ವೀರಶೈವ ಜಾತಿಯಲ್ಲಿ ಹುಟ್ಟಿದವರಿಗೆ ಇದಕ್ಕಿಂತ ಬೇರೆ ವಿಷಯಗಳೇ ಇಲ್ಲವೆಂಬಂತೆ ಬಿಂಬಿಸುವುದರಲ್ಲಿ ಅವರದೇ ಆದ ಹಿತಾಸಕ್ತಿಗಳು ಇರಬಹುದು. ಇದರಿಂದಾಗುವ ಮಹಾಸಾಧನೆ ಏನೆಂಬುದು ಅವರವರಿಗೇ ಗೊತ್ತು! ಒಬ್ಬೊಬ್ಬರದೂ ಒಂದೊಂದು ಹಿಡನ್ ಅಜೆಂಡಾ! ಇರಬಹುದು. ಇತ್ತ ಚೆಡ್ಡಿಗಳೂ ನಾಚುವಂತೆ ಹಿಂದೂ ಧರ್ಮವೆಂದು ಸಾಬೀತುಪಡಿಸಲು ಸಂಶೋಧಕರಾದ ಡಾ. ಚಿದಾನಂದ ಮೂರ್ತಿಗಳೂ ಅತ್ತ ಪ್ರತ್ಯೇಕ ಧರ್ಮವೆಂದು ಕರೆಯಲು ಕುಖ್ಯಾತ ಶಿಕ್ಷಣ ಉದ್ಯಮಿ ಭೀಮಣ್ಣ ಖಂಡ್ರೆ, ಮಾಜಿ ಸಚಿವ ವಿಶ್ವನಾಥ ಕಟ್ಟಿ ಮುದ್ನಾಳ್ ಮುಂತಾದ ವೀರಶೈವ ಮಹಾಸಭೆಯವರು, ಕೆಲವು ಮಠಾಧೀಶರು ಜನಗಣತಿ ಬಂದಾಗಲೇ ಇವೆಲ್ಲಾ ಗರಿಗೆದರಿ ಕೊಳ್ಳುತ್ತವೆ ಎಂಬುದು ವಿಶೇಷ.

ಈ ವಾದ ವಿವಾದಗಳು ಎಷ್ಟು ಬೇಕಾದರೂ ನಡೆಸಿಕೊಳ್ಳಲಿ. ಆದರೆ ತಮ್ಮ ವಾದಕ್ಕೆ ಭಿನ್ನ ವಾದ ಮಂಡಿಸಿದವರ ಮೇಲೆ ದ್ವೇಷದಿಂದ ಹರಿಹಾಯುತ್ತಿದ್ದಾರೆ. ಈಗ ಆತಂಕದ ವಿಚಾರವೆಂದರೆ ವೀರಶೈವ ಮಹಾಸಭೆಯವರು ಮುದ್ನಾಳರು ಡಾ. ಚಿ.ಮೂ. ಹಾಗೂ ಖ್ಯಾತ ಕವಿ ಜಿ.ಎಸ್. ಶಿವರುದ್ರಪ್ಪನವರ ಮೇಲೆ ಧಾರ್ಮಿಕ ಬಹಿಷ್ಕಾರ ಹಾಕುವುದಾಗಿ ಬೆದರಿಸಿದೆ. ಇದು ಖಂಡನೀಯ.

ಯಾವ ಕಾಯಕ ಜೀವಿಗಳು, ದಲಿತರು, ದುರ್ಬಲರು, ತಮ್ಮ ಬದುಕು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣಮಾಡಿದ, ದಬ್ಬಾಳಿಕೆ, ಅಸಮಾನತೆ ಸುಲಿಗೆಯ ವೈದಿಕ ವ್ಯವಸ್ಥೆಯ ವಿರುದ್ಧ ಬಂಡೆದ್ದು ವೀರಶೈವ ಚಳುವಳಿಯಾಗಿ 12 ನೇ ಶತಮಾನದ ಸುತ್ತಮುತ್ತ ಒಡಮೂಡಿತೋ, ಅಂತಹ ಧರ್ಮದ ಪ್ರತಿನಿಧಿಗಳು ಎಂದು ಬಸವಣ್ಣನವರ ಫೋಟೋ ಹಾಕಿ ಬೋರ್ಡ್ ಬರೆಸಿಕೊಳ್ಳುತ್ತಿರುವ ಈ ಧರ್ಮದ ವಕ್ತಾರರು ಮಾಡುತ್ತಿರುವುದೇನು? ಇವರಿಗೆ ಬಹಿಷ್ಕಾರ ಹಾಕಲು ಏನು ಹಕ್ಕಿದೆ?

ತಾವು 'ಧಾರ್ಮಿಕ ಅಲ್ಪಸಂಖ್ಯಾತರು' ಎಂದು ಸಂವಿಧಾನ ಕೊಡಮಾಡಿದ ಸವಲತ್ತುಗಳನ್ನು ಹೊಡೆಯಲು ಬಯಸುವ ಖಂಡ್ರೆಯಂಥವರು ಈ ದೇಶದ ಪ್ರಜೆಯ ಅಭಿವ್ಯಕ್ತಿ ಸ್ವಾತಂತ್ರ್ಯ ಎತ್ತಿ ಹಿಡಿಯುವ ಕಾನೂನು, ಸಂವಿಧಾನದ ಮೂಲಭೂತ ಹಕ್ಕುಗಳನ್ನು ಧಿಕ್ಕರಿಸುವುದೇಕೆ? ವೀರಶೈವ ಧರ್ಮದ ಸ್ವಯಂ ಗುತ್ತಿಗೆ ಹಿಡಿದವರಂತೆ ಮಾತನಾಡುವ ಇವರ ವಾದಗಳಲ್ಲಿ ಅಡಗಿರುವುದು ಮತಾಂಧತೆ, ಮತೀಯ ಫ್ಯಾಸಿಸ್ಟ್ ಮನೋಭಾವದ ವಿಕೃತತೆ. ಇಂತಹುಗಳ ಎದುರು ತೋರಬೇಕಾದುದು ಪುನರ್ವಿಮರ್ಶೆಯ ಮನವಿಯಲ್ಲ. ಛಲವಾಗಿ ಇವೆಲ್ಲವುಗಳನ್ನು ಧಿಕ್ಕರಿಸಿ ನಿಲ್ಲುವ ನಿಜ ಬಂಡಾಯ.

ಮಡಿಕೇರಿಯಲ್ಲಿ ಮತಾಂಧರ ದಾಂಧಲೆ

ಭಾರತದ ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಧರ್ಮಾಂಧರ, ಕೋಮುವಾದಿಗಳ ಅಟ್ಟಹಾಸ ಮೇರೆ ಮೀರುತ್ತಿದೆ. ಮಸೀದಿ, ಚರ್ಚುಗಳ ಮೇಲೆ ಧಾಳಿಗಳು ಅವ್ಯಾಹತವಾಗಿ ನಡೆಯುತ್ತಿದೆ. ಅಲ್ಪಸಂಖ್ಯಾತರು ಸದಾ ಭಯ, ಆತಂಕಗಳಲ್ಲಿಯೇ ಬದುಕುತ್ತಿದ್ದಾರೆ. ಇವು ನೇರವಾಗಿ ನಡೆಯುವ ಒಂದು ರೀತಿಯ ಧಾಳಿಯಾದರೆ, ದೇಶದ ಜಾತ್ಯಾತೀತ, ಸಂವಿಧಾನದ ಪರವಾಗಿ ಮತ್ತು ಮನುಷ್ಯ ವಿರೋಧಿ ಮೂಲಭೂತವಾದದ ವಿರುದ್ಧ ಮಾತನಾಡುವ ಎಲ್ಲರ ಮೇಲೆ ದೌರ್ಜನ್ಯ ನಡೆಸುತ್ತಿರುವುದು ಮತ್ತೊಂದು ರೀತಿಯ ಧಾಳಿಯಾಗಿದೆ. ಕಳೆದ ವರ್ಷ ಬೆಂಗಳೂರು ಬಳಿಯ ಆನೇಕಲ್‌ನಲ್ಲಿ 'ವಿವೇಕ'(ವಿಚಾರ ವೇದಿಕೆ ಕರ್ನಾಟಕ) ಸಂಘಟಿಸಿದ ಬೀದಿ ನಾಟಕ ತಂಡದ ಮೇಲೆ ಆಕ್ರಮಣ ನಡೆಸಿ ನಟರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ಗಾಯಗಳು ನಮ್ಮ ಮನಸ್ಸಿನಲ್ಲಿ ಇನ್ನೂ ಹಸಿ ಹಸಿಯಾಗಿಯೇ ಇದೆ. ಬೆನ್ನಲ್ಲಿಯೇ ಕಳೆದ ಭಾನುವಾರ ಅಂದರೆ ಡಿಸೆಂಬರ್ 10 ರಂದು ಮಡಿಕೇರಿಯಲ್ಲಿ 'ಬಹುವಚನ ಸಂಘಟನೆ' ಆಯೋಜಿಸಿದ್ದ 'ಕೋಮುವಾದದ ಹಲವು ಮುಖಗಳು' ಎಂಬ ವಿಚಾರ ಸಂಕಿರಣ-ಸಂವಾದ ಕಾರ್ಯಕ್ರಮವನ್ನೇ ನಡೆಯಲು ಬಿಡದ ಘಟನೆ ನಡೆದಿದೆ.

ಕೋಮುವಾದದ ಹಲವು ಮುಖಗಳು' ಸಂವಾದ ಮಡಿಕೇರಿಯ ಹಳೆಯ ವಿಧಾನ ಸಭಾಂಗಣದಲ್ಲಿ ಡಿ. 10 ರಂದು ಬೆಳಿಗ್ಗೆ 10 ರಿಂದ ನಡೆಯಲಿತ್ತು. ಹಿಂದೂ ಮೂಲಭೂತವಾದ ಕುರಿತು ಉಡುಪಿಯ ಕೆ.ರಾಜಶೇಖರ್, ಕೆ.ಫಣಿರಾಜ್, ಇಸ್ಲಾಂ ಮೂಲಭೂತವಾದದ ಕುರಿತು ಹಂಪೆಯ ಡಾ. ರಹಮತ್ ತರೀಕೆರೆಯವರು ಆಗಮಿಸಿದ್ದರು. ಎ.ಕೆ.ಸುಬ್ಬಯ್ಯನವರನ್ನು ಆಹ್ವಾನಿಸಲಾಗಿತ್ತು. ಕಾರ್ಯಕ್ರಮ ಪ್ರಾರಂಭವಾಗುವ ಮುನ್ನವೇ ಜಿಲ್ಲಾ ಬಿಜೆಪಿ ಅಧ್ಯಕ್ಷ ಕೆ.ಜಿ.ಬೋಪಯ್ಯ ನಗರಸಭಾ ಸದಸ್ಯರು ಮತ್ತಿತರರು ಸಂಘ ಪರಿವಾರದ ಸುಮಾರು 50 ಜನರನ್ನೊಳಗೊಂಡು ಸಭಾಂಗಣಕ್ಕೆ ನುಗ್ಗಿ ದಾಂಧಲೆ ನಡೆಸಿದರು. ಎರಡು ಟೇಪ್‌ರೇಕಾರ್ಡುರುಗಳನ್ನು ಪುಡಿ ಪುಡಿ ಮಾಡಿದರು. ಬಹುವಚನದ ಸಂಚಾಲಕರಲ್ಲೊಬ್ಬರಾದ ಪಟ್ಟಾಬಿರಾಮ ಸೋಮಯಾಜಿಯವರನ್ನು ಎಳೆದಾಡಿ, ಅವಾಚ್ಯ ಶಬ್ದಗಳಿಂದ ಬೈದಾಡಿದರು. ಆರಂಭದಲ್ಲಿ ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಪರಿಸ್ಥಿತಿ ನಿಯಂತ್ರಿಸಿದರಾದರೂ ಸ್ಥಳದಲ್ಲಿದ್ದ ಬೆರಳೆಣಿಕೆಯ ಸಂಖ್ಯೆಯ ಪೋಲೀಸರಿಂದ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಆ ಹೊತ್ತಿನಲ್ಲಿ ಸ್ಥಳಕ್ಕೆ ಬಂದ ವೃತ್ತ ನಿರೀಕ್ಷಕ ಕೆ.ಎನ್.ಮಾದಯ್ಯನವರು ಗಲಭೆಕೋರರ ಮೇಲೆ ಕ್ರಮ ಕೈಗೊಳ್ಳುವ ಬದಲು 'ಬಹುವಚನ' ಸಂಸ್ಥೆ - ನೊಂದಾಯಿತ ಸಂಸ್ಥೆಯೇ ಅಲ್ಲವೇ ಎಂಬ ಹೊಸ ಗೊಂದಲ ಸೃಷ್ಟಿಸಿ ಸೋಮಯಾಜಿಯವರನ್ನೇ ಎಳೆದು ಅಲ್ಲಿಯೇ ವಿಚಾರಣೆಗೆ ಗುರಿಪಡಿಸಿದ್ದು 'ಖಾಕಿ-ಖಾವಿ'ಯ ಅನ್ಯೋನ್ಯತೆಯನ್ನು ಸಾಬೀತು ಪಡಿಸಿತು. ಗಲಭೆಕೋರರಿಗೆ ಇದು ಕೋತಿಗಳಿಗೆ ಕಳ್ಳು ಕುಡಿಸಿದಂತಾಗಿ ಇನ್ನಷ್ಟು ದಾಂಧಲೆ ನಡೆಸಿ ಬಹುವಚನ ಬ್ಯಾನರ್‌ನ್ನು ಹರಿದು ಚಿಂದಿ ಮಾಡಿ ತುಳಿದು ಹಾಕಿತು. ಅಷ್ಟು ಹೊತ್ತಿಗೆ ಸ್ಥಳಕ್ಕಾಗಮಿಸಿದ ಡಿವೈಎಸ್‌ಪಿ ರಾಜೇಂದ್ರ ಪ್ರಸಾದ್‌ರವರೂ ದಾಂಧಲೆಕೋರರನ್ನು ವಶಕ್ಕೆ ತೆಗೆದುಕೊಳ್ಳುವ ಬದಲು ಸೋಮಯಾಜಿಯವರನ್ನೇ ವಿಚಾರಣೆಗೆ ಒಳಪಡಿಸಿದರು. ಹಾಗೆ ಡಿವೈಎಫ್‌ಐನ ಪೀಟರ್ ಲೋಬೋ, ವಿದ್ಯಾಧರ್, ಪ್ರಜಾವೇದಿಕೆಯ ಗೌರವ ಅಧ್ಯಕ್ಷರಾದ ದೇವಿಪ್ರಸಾದ್‌ರವರ ಮೇಲೂ ಹರಿಹಾಯ್ದರು.

ಈ ಕಾರ್ಯಕ್ರಮವನ್ನು ಪರವಾನಗಿಯನ್ನು ಪಡೆದೇ ಸರಕಾರದ ಸಭಾಂಗಣವೊಂದರಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಪ್ರಾರಂಭದಲ್ಲಿಯೇ ಕಾನೂನು-ಸುವ್ಯವಸ್ಥೆ ಪಾಲಕರು(ಪೋಲೀಸರು) ಸಭಾಂಗಣದಲ್ಲಿ ಹಾಜರಿದ್ದುದೇ ಅದಕ್ಕೆ ಸಾಕ್ಷಿ. ಇಂತಹ ಗಲಭೆ ನಡೆಯಬಹುದೆಂದು ಪೋಲೀಸರಿಗೂ ತಿಳಿಸಿ ರಕ್ಷಣೆ ಕೋರಲಾಗಿತ್ತು.

ಈ ಮೇಲಿನ ಘಟನೆ ನಮಗೆ ಮತ್ತೊಮ್ಮೆ ಸಂಘ ಪರಿವಾರದ ವಿಕಟಾಟ್ಟಹಾಸಗಳು ಇತಿಹಾಸಗಳನ್ನು ನೆನಪಿಸುತ್ತವೆ. ಎಂ.ಎಫ್.ಹುಸೇನರ ಚಿತ್ರಕೃತಿಯ ಧ್ವಂಸ, ಬಾಬ್ರಿ ಮಸೀದಿಯ ನಾಶ, ವಾಟರ್ ಚಿತ್ರ ತಂಡದ ಮೇಲೆ ಧಾಳಿ, ಚಿತ್ರ ನಿರ್ಮಾಣಕ್ಕೆ ಅಡ್ಡಿ, ಆನೇಕಲ್ ದೌರ್ಜನ್ಯ, ಉಡುಪಿಯಲ್ಲಿ ಬಜರಂಗಿಗಳ ಹಾವಳಿ, ನನ್‌ಗಳ ಮೇಲೆ ಅತ್ಯಾಚಾರ, ಚರ್ಚ್‌ಗಳಿಗೆ ಬೆಂಕಿ; ಗ್ರಹಾಂ ಸ್ಟೈನ್ ಮತ್ತು ಮುಗ್ಧ ಮಕ್ಕಳ ಸಜೀವ ದಹನ ಹೀಗೆ ನೆನಪುಗಳ ಸುರುಳಿ ಬಿಚ್ಚತೊಡಗುತ್ತವೆ. ಇವೆಲ್ಲ ನಮಗೆ ಏನು ಸೂಚನೆ ಕೊಡುತ್ತಿವೆ. ಭಾರತವೂ 'ತಾಲಿಬಾನ್' ಆಗುತ್ತಿದೆ, ಅಧರ್ವರ್ಣ ರಾಜ್ಯವಾಳುತ್ತಿದೆ.ರಕ್ತ ಬೀಜಾಸುರರು ಬೆಳೆಯುತ್ತಿದ್ದಾರೆ. ತಾವು ಕೋಮುವಾದಿಗಳಲ್ಲವೆಂದು ಹೇಳಿಕೊಳ್ಳುವ ಈ ಜನರಿಗೆ ಕೋಮುವಾದದ ಬಗ್ಗೆ ಮಾತನಾಡಿದರೇಕೆ ಅಸಹನೆ? ಇವರೇಕೆ ಕುಂಬಳಕಾಯಿ ಕಳ್ಳ...... ರ ಹಾಗೆ ವರ್ತಿಸಬೇಕು. ಅಸಹನೆಯ ಸಂಸ್ಕೃತಿಯ ಹರಿಕಾರರಾದ ಈ ಮನುವಾದಿ ಫ್ಯಾಸಿಸ್ಟ್ ತಳಿಗಳಿಗೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆ ಇಲ್ಲ ಎಂಬುದು ಎಂದೋ ಸಾಬೀತಾಗಿದೆ. ಹಿಂಸೆಯನ್ನು ಪ್ರತಿಪಾದಿಸುವ ಈ ಜನ ಸತ್ಯಕ್ಕೆ ಅಂಜುತ್ತಾರೆ. ಸತ್ಯವನ್ನು ಮರೆಮಾಚಲು ಎಂತಹ ಹೇಯಕೃತ್ಯಕ್ಕೂ ಇಳಿಯಬಲ್ಲರು ಎಂಬುದನ್ನು ಅವರ ಕುಚರಿತ್ರೆಗಳು ಸಾರಿ ಹೇಳುತ್ತವೆ. ಆದರೆ ಎಲ್ಲ ದರ್ಮದ ಬಹುಸಂಖ್ಯಾತರ ಜನ ಧರ್ಮಾಂದಿತರಲ್ಲ. ಕೋಮುವಾದಿಗಳಲ್ಲ. ಸ್ವಾತಂತ್ರ್ಯ ಪ್ರಿಯರು, ಸಹನಾಶೀಲರು. ಆದರೆ ಈ ಸಹನೆ 'ಅಸಹನೆಯ ಸಂಸ್ಕೃತಿಯ ವಕ್ತಾರರನ್ನು ಸಹಿಸಲು ಬಳಕೆಯಾಗಬೇಕಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ ಅಪಾಯದಲ್ಲಿದೆ. ಸಂವಿಧಾನ ಗಂಡಾಂತರದಲ್ಲಿದೆ. ಈಗಲೂ ಕಾಲ ಮಿಂಚಿಲ್ಲ. ಮೌನ ಮುರಿಯಬೇಕು. ಮಾತು ಗಟ್ಟಿಯಾಗಬೇಕು. ಜನಾಂದೋಲನ ರೂಪುಗೊಳ್ಳಬೇಕು.

ಈ ಘಟನೆಯನ್ನು ಖಂಡಿಸಿ ಮೈಸೂರಿನಲ್ಲಿ ಪ್ರಗತಿಪರ ಬುದ್ಧಿಜೀವಿಗಳು ಪ್ರತಿಭಟನೆ ಮಾಡಿದ್ದಾರೆ. ಸಂಘ ಪರಿವಾರದ ಕೃತ್ಯವನ್ನು ಸಿಪಿಐ(ಎಂ) ಕೊಡಗು ಪ್ರಾದೇಶಿಕ ಸಮಿತಿ, ರಾಜ್ಯ ಸಮಿತಿಗಳು, ಎಸ್‌ಎಫ್‌ಐ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಗಳು ಖಂಡಿಸಿವೆ.

ಇದೇ 30 ರಂದು ಮಡಿಕೇರಿಯಲ್ಲಿ ವಿಚಾರಸಂಕಿರಣ ನಡೆಸಲು ನಿರ್ಧರಿಸಲಾಗಿದೆ.

ವಿಮಲಾ

............ವಿಫಲಗೊಂಡ ಕಿತಾಪತಿ

ಪುಟ 7 ರಿಂದ

ವಾಹನಗಳನ್ನು ಬಿಡುತ್ತಿದ್ದರು ಮತ್ತು ಗುಹೆಯ ಬಳಿಯಲ್ಲೂ ಕೂಡ ಒಬ್ಬೊಬ್ಬರೇ ಒಳಗೆ ಹೋಗಿ ಬರುವಂತೆ ವ್ಯವಸ್ಥೆ ಮಾಡಿದ್ದಲ್ಲದೆ ಎಲ್ಲಾ ಸಮಾಧಿಗಳಿಗೆ ಸೂಕ್ತ ರಕ್ಷಣೆ ಒದಗಿಸಿದ್ದರು. ಹಿಂದಿನ ವರ್ಷದಂತೆ ವಿಹೆಚ್‌ಪಿಯವರ ಶ್ರೀರಾಮ ಭಜನೆ ಇರಲಿಲ್ಲ, ಗುಹೆಯ ಹೊರಗಿನ ಆವರಣದಲ್ಲಿ ಭಟ್ಟರಿಂದ ಹೋಮಾದಿ ಕಾರ್ಯಕ್ರಮಗಳು ನಡೆದವು. ಮೊದಲೇ ಮುನ್ನೆಚ್ಚರಿಕೆ ಕ್ರಮವಾಗಿ ಮುಸ್ಲಿಂರ ಅಂಗಡಿ-ಹೋಟೆಲ್‌ಗಳನ್ನು ಮುಚ್ಚಿಸಿ, ಅವರ ಹಸಿರು ಧ್ವಜಗಳನ್ನು ಸಂಪೂರ್ಣವಾಗಿ ತೆಗೆಸಿದ್ದರಿಂದ ಅವುಗಳನ್ನು ನಾಶಪಡಿಸುವ ಉದ್ಧಟತನ ಪ್ರದರ್ಶಿಸಲು ವಿಹೆಚ್‌ಪಿ-ಭಜರಂಗದಳದವರಿಗೆ ಅವಕಾಶ ಇಲ್ಲದಂತಾಯಿತು.

ದತ್ತ ಜಯಂತಿಗೆ 50 ಸಾವಿರ ಭಕ್ತಾದಿಗಳು ರಾಜ್ಯದ ಹಾಗೂ ದೇಶದ ಇನ್ನಿತರ ಭಾಗಗಳಿಂದ ಬಂದು ಸೇರುತ್ತಾರೆ ಎಂದು ಸಂಘ ಪರಿವಾರದವರು ಘೋಷಿಸಿತ್ತಿದ್ದರು, ಜಿಲ್ಲಾಡಳಿತ ಸುಮಾರು 25 ಸಾವಿರ ಮಂದಿ ಭಾಗವಹಿಸಬಹುದೆಂದು ಲೆಕ್ಕಾಚಾರಾ ಹಾಕಿ ಅದಕ್ಕೆ ಬೇಕಾದ ಸಿದ್ಧತೆ ನಡೆಸಿದ್ದರು. **ಆದರೆ ಇವರಿಬ್ಬರ ಲೆಕ್ಕಾಚಾರವು ಹುಸಿಯಾಗಿ ಕೇವಲ ಕೆಲವು ಸಾವಿರ ಮಂದಿ ಮಾತ್ರ ದತ್ತ ಜಯಂತಿಯಲ್ಲಿ ಭಾಗವಹಿಸಿದ್ದುದು ಜನತೆಯ ನಿರಾಸಕ್ತಿಯನ್ನು ತೋರಿಸುತ್ತದೆ. ಮಹಾರಾಷ್ಟ್ರದಿಂದ ಬಂದ ಕೆಲವು ಶಿವಸೈನಿಕರ ವರ್ತನೆ ಫ್ಯಾಸಿಸ್ಟ್ ರೀತಿಯಲ್ಲಿ ವರ್ತಿಸುತ್ತಿದ್ದರು.**

ನವೆಂಬರ್ 9 ರಂದು ದತ್ತಪೀಠಕ್ಕೆ ಭೇಟಿಕೊಟ್ಟಿದ್ದ ಬಜರಂಗದಳದ ಸಂಸ್ಥಾಪಕ ಅಧ್ಯಕ್ಷ ಹಾಗೂಅಯೋಧ್ಯೆಯಿಂದ ಆಯ್ಕೆಯಾಗಿರುವ ಸಂಸತ್ ಸದಸ್ಯ **ವಿನಯ ಕಟಿಯಾರ್ ಬಹಳ ಪ್ರಚೋದನಕಾರಿ ಪತ್ರಿಕಾ ಹೇಳಿಕೆಗಳನ್ನು ನೀಡಿರುವುದಲ್ಲದೆ ದತ್ತಪೀಠ ವಿಮೋಚನೆಗಾಗಿ ಮುಂದಿನ ವರ್ಷ ಒಂದು ಲಕ್ಷ ಜನರನ್ನು ರಾಷ್ಟ್ರದಾದ್ಯಂತದಿಂದ ಇಲ್ಲಿಗೆ ಬರುವಂತೆ ಮಾಡವುದರೊಂದಿಗೆ ದತ್ತಪೀಠದ ಮುಕ್ತಿಯ ಅಖಾಡಕ್ಕೆ ಸಾದುಸಂತರು ಬಂದಿಳಿಯಲಿದ್ದಾರೆ ಎಂದು ಹೇಳಿದ್ದಾರೆ.** ಬಜರಂಗದಳದವರಿಗೆ ಕಾರ್ಯಕ್ರಮವೇನಾದರೂ ಇದೆಯೇ ಎಂದು ಪತ್ರಕರ್ತರು ಕೇಳಿದ್ದಕ್ಕೆ 'ಹಾಗೇನು ಕಾರ್ಯಕ್ರಮಗಳು ಬಜರಂಗದಳಕ್ಕೆ ಇಲ್ಲ. ಆದರೆ ಆಯಾಯ ಸಂದರ್ಭ ನೋಡಿ ಕೂಡಲೇ ಕಾರ್ಯಕ್ರಮವನ್ನು ಬಜರಂಗ ದಳ ರೂಪಿಸುತ್ತದೆಎಂದರು. ಹಿಂದು ಧರ್ಮ ಅಂಜನೆಯನ ಬಾಲವಿದ್ದಂತೆ ಅದಕ್ಕೆ ಯಾರಾದರೂ ಬೆಂಕಿ ಇಟ್ಟರೆ, ಲಂಕೆಯನ್ನು ಸುಟ್ಟಂತೆ ಬೆಂಕಿಯಿಟ್ಟವರನ್ನು ಸುಡುತ್ತದೆ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ದತ್ತಪೀಠದಿಂದ ಹಿಂದಿರುಗುತ್ತಿದ್ದ ಕೆಲವು ಸಂಘ ಪರಿವಾರದವರು ವಾಹನದೊಳಗೆ ಕುಳಿತು ಚಿಕ್ಕಮಗಳೂರಿನ ನಗರದೊಳಗೆ ಪ್ರಚೋದನಕಾರಿ ಘೋಷಣೆ ಕೂಗುತ್ತಿದ್ದವರು ಪೋಲೀಸರ ಲಾಠಿ ರುಚಿ ಅನುಭವಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾದ ಸಣ್ಣಪುಟ್ಟ ಘಟನೆ ಬಿಟ್ಟರೆ ಹೆಚ್ಚಿನ ಪ್ರಮಾಣದ ಯಾವುದೇ ಅನಾಹುತ ನಡೆಯಲಿಲ್ಲ.

ರಾಜ್ಯ ಸರಕಾರ ಹಾಗೂ ಜಿಲ್ಲಾಡಳಿತ ದತ್ತ ಜಯಂತಿಯ ಸಂದರ್ಭ ಯಾವುದೇ ಅಹಿತಕರ ಘಟನೆ ನಡೆಯದಂತೆ ಮಾಡಲು ತೆಗೆದುಕೊಂಡ ಬಿಗಿ ಪೋಲೀಸ್ ಬಂದೋಬಸ್ತ್ ಕಾರ್ಯಕ್ರಮ ಪ್ರಶಂಸಾರ್ಹ. ಆದರೆ ಕೋಮುವಾದಿ ಸಂಘ ಪರಿವಾರದವರ ಶೋಭಾ ಯಾತ್ರೆಯನ್ನು ಜಿಲ್ಲಾಡಳಿತ ಸ್ವಾಗತಿಸಿದ್ದು, ಬಾಬಾ ಬುಡನ್‌ಗಿರಿ-ದತ್ತಪೀಠದ ಆಡಳಿತಕ್ಕೆ ನಿರ್ವಹಣಾ ಸಮಿತಿಯನ್ನು ರಚಿಸಿದ್ದರೂ ಈ ನಿರ್ವಹಣಾ ಸಮಿತಿಯ ಮೇಲ್ವಿಚಾರಣೆ ಹಾಗೂ ನಿರ್ದೇಶನದಂತೆ ದತ್ತಜಯಂತಿಯನ್ನು ನಡೆಸದೆ ಸಂಘ ಪರಿವಾರದವರೊಡನೆ ಸೇರಿ ಸಂಘ ಪರಿವಾರದವರು ಹಾಕಿಕೊಂಡ ಪೂಜಾದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನ್ನು ಹಾಗೂ ಕಾನೂನು ಮತ್ತು ಸಂಸದೀಯ ಸಚಿವರು ಹಾಗೂ ಜಿಲ್ಲಾ ಮಂತ್ರಿಗಳೂ ಆಗಿರುವ ಡಿ.ಬಿ.ಚಂದ್ರೇಗೌಡರು ದತ್ತಪೀಠದಲ್ಲಿ ನಡೆದ ಸಂಘ ಪರಿವಾರದವರ ಗಣಹೋಮದಲ್ಲಿ ಭಾಗವಹಿಸಿ, ಸಂಕಲ್ಪ ನೀಡಿದ್ದ ಔಚಿತ್ಯವನ್ನು ಪ್ರಶ್ನಿಸಿ ಹಾಗೂ ಖಂಡಿಸಿ ಮಾನ್ಯಸಚಿವರು ಸಂಘ ಪರಿವಾರದ ಕೋಮುವಾದಕ್ಕೆ ತಲೆಬಾಗಿದ್ದಾರೆ. ಅವರು ತಮ್ಮ ಕರ್ತವ್ಯವನ್ನು ನಿರ್ಲಕ್ಷಿಸಿದ್ದಾರೆ, ಆದ್ದರಿಂದ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕೆಂದು ವಿವಿಧ ಜಾತ್ಯಾತೀತ ರಾಜಕೀಯ ಪಕ್ಷಗಳ ಹಾಗೂ ಸಂಘಟನೆಗಳನ್ನೊಳಗೊಂಡ ಶ್ರೀ ಗುರುದತ್ತಾತ್ರೇಯ ಬಾಬಾ ಬುಡನ್‌ಗಿರಿ ಸ್ವಾಮಿ ದರ್ಗಾದ ಸೌಹಾರ್ದ ಸಮಿತಿಯವರು ಪತ್ರಕರ್ತರ ಸಭೆ ನಡೆಸಿದ್ದಾರೆ.

ದತ್ತ ಜಯಂತಿ ಈ ಸಲ ಶಾಂತಿಯುತವಾಗಿ ನಡೆದಿದ್ದರೂ, ಕೋಮುವಾದಿ ಸಂಘಟನೆಗಳು ಸುಮ್ಮನೆ ಕೂರುವವರಲ್ಲ. ಸದ್ಯಕ್ಕೆ ನಿಲ್ಲುವಂತಹದು ಅಲ್ಲ. ಅವರು ಈ ದೇಶದ ವಿವಿಧ ಧರ್ಮಗಳ, ವಿವಿಧ ಸಂಸ್ಕೃತಿಗಳ ಪರಿಸರವನ್ನು ನಾಶ ಮಾಡಿ ತಮ್ಮ ವಿಕೃತ ಕಲ್ಪನೆಯ ಹಿಂದು ರಾಷ್ಟ್ರವನ್ನು ಕಟ್ಟಬೇಕು, ಹಿಂದೂಗಳಲ್ಲದ ಇತರೆ ಎಲ್ಲಾ ಧರ್ಮೀಯರು, ಅಲ್ಪಸಂಖ್ಯಾತರು ದೇಶ ಬಿಟ್ಟು ತೊಲಗಬೇಕು. ಇಲ್ಲವೇ ಹಿಂದೂ ರಾಷ್ಟ್ರದಲ್ಲಿ ಎರಡನೇ ದರ್ಜೆಯ ಪ್ರಜೆಗಳಾಗಿ ಬದುಕಬೇಕು ಎಂಬ ಕರಾಳ ಧೋರಣೆಯುಳ್ಳವರಾಗಿದ್ದಾರೆ. ಆದ್ದರಿಂದ ಸಂಘ ಪರಿವಾರದವರು ಕುತಂತ್ರವನ್ನು ಬಯಲಿಗೆಳೆಯಲು ಎಲ್ಲಾ ಜಾತ್ಯಾತೀತ ಶಕ್ತಿಗಳು, ವ್ಯಕ್ತಿಗಳು ಒಂದಾಗಿ ನಿರಂತರ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ ಎಂಬುದು ವಾಸ್ತವಿಕ

> **ಬಜರಂಗಿ ಫರ್ಮಾನು**
>
> ಭಜರಂಗ ದಳದ ರಾಜ್ಯ ಮುಖಂಡ ಪ್ರಮೋದ್ ಮುತಾಲಿಕ್ ಪತ್ರಿಕೆಗಳಲ್ಲಿ ಬಾಬ ಬುಡನ್‌ಗಿರಿಯೆಂದು ಉಲ್ಲೇಖಿಸುವುದನ್ನು ಪ್ರಶ್ನಿಸಿ ಮತ್ತೆ ಹಾಗೇನಾದರೂ ಬರೆದರೆ 'ಆಕ್ಷನ್' ತೆಗೆದುಕೊಳ್ಳುವ ಬೆದರಿಕೆ ಹಾಕಿದ್ದು, ಚಿಕ್ಕಮಗಳೂರಿನ ಪತ್ರಕರ್ತರ ಸಂಘ ಮುತಾಲಿಕ್‌ನ ಹೇಳಿಕೆಯನ್ನು ಕಟುವಾಗಿ ಖಂಡಿಸಿ, ಹಿಂದಿನಂತೆ ತಾವು ತಮ್ಮ ಪತ್ರಿಕೆಗಳಲ್ಲಿ ಬಾಬಾ ಬುಡನ್‌ಗಿರಿ-ದತ್ತಾತ್ರೇಯ ಪೀಠವೆಂದು ಪ್ರಸ್ತಾಪಿಸಿ ಬರೆಯುತ್ತಿರುವುದು ಮತ್ತೊಂದು ಬೆಳವಣಿಗೆ.

ನಿಲ್ಲದ ಬಿಜೆಪಿ ದುಷ್ಟ ಆಟ

ಪುಟ 7 ರಿಂದ

ಅಲ್ಲಿನ **ಹಿಂದೂ ಮೂಲಭೂತವಾದಿಗಳು ಪ್ರಧಾನಮಂತ್ರಿಗಳ ಹೇಳಿಕೆ ತಮ್ಮ ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡಿದೆ ಎಂದು ಭಾವಿಸಿದ್ದಾರೆ. ಕೋಮು ವಾತಾವರಣ ವನ್ನು ಹೊಲಸೆಬ್ಬಿಸುವಲ್ಲಿ ಸಂಘ ಪರಿವಾರಕ್ಕೆ ಹೇಸಿಕೆಯೆನಿಸುವುದಿಲ್ಲ ಎಂದು ಎಲ್ಲರಿಗೂ ಗೊತ್ತು.** ಆದರೆ ಎನ್‌ಡಿಎ ಮಿತ್ರ ಪಕ್ಷಗಳೂ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಪ್ರಚಾರ, ದೈಹಿಕ ಹಲ್ಲೆಗಳು ನಡೆಯುವಂತಹ ಸ್ಥಿತಿ ಉಂಟು ಮಾಡುವಲ್ಲಿ ಭಾಗಿಗಳಾಗುತ್ತಿದ್ದಾರೆ ಎಂಬುದು ಆಶ್ಚರ್ಯಕರ ಸಂಗತಿ.

ವಾಜಪೇಯಿ, ಅಡ್ವಾಣಿ ಮತ್ತು ಕಂಪನಿಗೆ ಆರ್‌ಎಸ್‌ಎಸ್‌ಗೆ ಏನು ಬೇಕು ಎಂಬುದೇ ಮುಖ್ಯ. ಆರ್.ಎಸ್.ಎಸ್. ಕಾರ್ಯಕರ್ತರು ತಮ್ಮ ಸಂಘಟನೆ ಬಿಜೆಪಿಯನ್ನು ಕೈ ಬಿಟ್ಟು ಇನ್ನೊಂದು ರಾಜಕೀಯ ಪಕ್ಷ ರಚಿಸಬೇಕು ಎನ್ನುತ್ತಿದ್ದಾರಂತೆ. ಆರ್.ಎಸ್.ಎಸ್. ಶಾಖೆಗಳಲ್ಲಿ ಹಾಜರಾತಿ ಇಳಿಯುತ್ತಿದೆಯಂತೆ. ಕರ್ನಾಟಕದಿಂದ 'ಟೈಂಸ್ ಆಫ್ ಇಂಡಿಯಾ' ವರದಿಯೊಂದು ಹೀಗಂದಿದೆ. ಅಂದರೆ ಮೂಲತಃ ಧರ್ಮನಿರಪೇಕ್ಷವಾದ ಜನತೆಯನ್ನು ಬಹುಕಾಲ ತಪ್ಪುದಾರಿಗೆಳೆಯಲು ಸಾಧ್ಯವಿಲ್ಲ. **ಆರ್.ಎಸ್.ಎಸ್. ತನ್ನ ಪರಂಪರೆಗೆ ಅನುಗುಣವಾಗಿ 1981-92 ರಲ್ಲಿ ಮಾಡಿದಂತೆ ಇನ್ನಷ್ಟು ವಿಕಟ ಕೋಮುವಾದಿ ಭಾವೋದ್ವೇಗ ಹರಡಿ ಈ ಸನ್ನಿವೇಶವನ್ನು ಮತ್ತೆ ಬದಲಿಸ ಬಹುದು ಎಂದು ನಂಬಿದೆ. ಆದ್ದರಿಂದಲೇ ಅವರಿಗೆ ಮೈತ್ರಿ ಕೂಟದ ಭಾಗೀದಾರರ ಪರಿವೆಯಿಲ್ಲ, ಬಿಜೆಪಿಯ ಮಿತ್ರರ ಪರಿಸ್ಥಿತಿಯ ಬಗ್ಗೆ ಆತಂಕವಿಲ್ಲ.**

ಆದರೂ ಈ ಹಿಂದೆ ಹಲವು ಸಂದರ್ಭಗಳು ನಮ್ಮ ದೇಶದ ಜನತೆ ತಾವೆಷ್ಟು ಧರ್ಮನಿರಪೇಕ್ಷ ಎಂದು ತೋರಿಸಿಕೊಟ್ಟಿದ್ದಾರೆ. ಮಹಾತ್ಮ ಗಾಂಧಿಯವರ ಹತ್ಯೆಯಾದ ಕೂಡಲೇ ಅಥವಾ 1992 ರಲ್ಲಿ ದೇಶದ ಭವಿಷ್ಯಕ್ಕೆ ಧರ್ಮನಿರಪೇಕ್ಷತೆಯ ಮೌಲ್ಯವನ್ನು ತಾವೆಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇವೆ ಎಂದು ತೋರಿಸಿಕೊಟ್ಟಿದ್ದಾರೆ. **ಭಾರತದಲ್ಲಿ ಒಂದು ಮತೀಯ ಪ್ರಭುತ್ವ ಸ್ಥಾಪಿಸುವ ಆರ್.ಎಸ್.ಎಸ್. ಗುರಿಯಾಗಿ ಅಡ್ಡಿಯಾಗಿ ನಿಂತಿರುವುದು ಇದೇ ಅಂಶ.**

ಇತಿಹಾಸದ ಪುಟಗಳಿಂದ

ಚಾರ್ಲಿ ಚಾಪ್ಲಿನ್

ಬಡತನದ ಬೇಗೆಯಲ್ಲಿ ಅರಳಿದ ಮಹಾ ಪ್ರತಿಭೆ

ಶಾಲೆಯಲ್ಲಿ ಶಿಕ್ಷಣದ ಜೊತೆಗೆ ತನ್ನ ಮಗ ಪ್ರಸಿದ್ಧ ನಟನಾಗಬೇಕೆಂಬ ಮಹದಾಸೆಯಿಂದ ಚಾಪ್ಲಿನ್ ತಾಯಿ ಗೀತನಾಟಕದಲ್ಲಿನ ಅವನ ಪಾತ್ರಕ್ಕೆ ಅಗತ್ಯ ತರಬೇತಿಯನ್ನು ನೀಡತೊಡಗಿದಳು. ಈ ಮೊದಲ ಗುರುವಿನಿಂದ ಪಾಠ ಕಲಿತ ಚಾಪ್ಲಿನ್ ಮುಂದೆ ಅನಿವಾರ್ಯವಾಗಿ ಡ್ಯಾನ್ಸರ್ ಟ್ರೂಪ್ ಸೇರಿದ. ಹಲವು ದುರಂತಗಳನ್ನು [illegible], ಅನುಭವಿಸಿದ. ಆಗಾಗಲೇ ರೂಢಿಗೊಂಡಿದ್ದ ಓದಿನ ಗೀಳು ಆತನನ್ನು ಇನ್ನೂ ಆಳವಾಗಿ, ಜಗತ್ತಿನ [illegible] ಮೇರು ಕೃತಿಗಳ ಅಧ್ಯಯನ ಮಾಡಲು ದೂಡಿತು. ಹೀಗೆ ಹೊಸ ಹೊಸ ಜ್ಞಾನದ ಸಂಪನ್ಮೂಲಗಳನ್ನು ರೂ[illegible]ಸಿಕೊಂಡು, ಅಪಾರ ಓದಿನಿಂದ ಅಗಾಧ ಜ್ಞಾನವನ್ನು ಪಡೆದ. ಅಲ್ಲದೇ ಸೂತ್ರಬದ್ಧ ಇತಿಹಾಸಕಾರ ವಾ[illegible]ಲ್ಡೋ, ಫ್ರ್ಯಾಂಕ್, ಖ್ಯಾತ ನಾಟಕಕಾರ ಜಾರ್ಜ್ ಬರ್ನಾಂಡ್ ಶಾ, ಅರ್ಥ ಶಾಸ್ತ್ರಜ್ಞ ಮೆನಾರ್ಡ್ ಕೇ[illegible]ಸ್, ಬ್ರಿಟನ್ ಪ್ರಧಾನಿ ಚರ್ಚಿಲ್, ಕವಿ ವೇಲ್ಸ್‌ರಂಥಹ ಮೇಧಾವಿಗಳೊಂದಿಗೆ ಚರ್ಚಿಸುವ, ನಿರ್ಭಯವಾಗಿ ಅಭಿಪ್ರಾಯ ಹಂಚಿಕೊಳ್ಳುವ ಈ ಒಡನಾಟ ಎತ್ತರಕ್ಕೇರುವಂತೆ ಮಾಡಿತು. ಹಲವು ಟೀಕೆಗಳಿದ್ದರು ಗಾಂಧೀಜಿಯುವರನ್ನು ಭೇಟಿ ಮಾಡುವ ಮೂಲಕ ಭಾರತದ ಜನರ ಸ್ವಾತಂತ್ರ್ಯ ಹೋರಾಟವನ್ನು ಸಮರ್ಥಿಸಿದ. ಪಂಚತಾರಾ ಹೋಟೆಲುಗಳಲ್ಲಿದ್ದರೂ 'ಕೊಳಗೇರಿ' ವಿಶ್ವವಿದ್ಯಾಲಯುದಲ್ಲಿಯೇ ಆತನ ನೆಲೆ. ಓದು, ಒಡನಾಟ, ಬದುಕಿನ ಕ್ರೂರತೆಗಳಿಂದ ಹೊಸ ಎತ್ತರಕ್ಕೆ ಏರಿದ ಚಾಪ್ಲಿನ್ ಕುರಿತ ಹಲವು ಅಂಶಗಳು ಇಲ್ಲಿವೆ.



ಶಾಲೆಗೆ ಹೋಗುತ್ತಿದ್ದ ಚಾಪ್ಲಿನ್‌ಗೆ ಇತಿಹಾಸ, ಸಾಹಿತ್ಯ, ವಿಜ್ಞಾನದಂಥ ವಿಷಯಗಳ ಬಗ್ಗೆ ಅಪಾರ ಆಸಕ್ತಿ ಇತ್ತು. ಆದರೆ ಉಳಿದ ವಿಷಯಗಳು ಅವನಿಗೆ ತಲೆ ನೋವಾಗಿದ್ದವು. ಅಂಕಗಣಿತದ ಬಗೆಗಂತೂ ಅವನಿಗೆ ಆಸಕ್ತಿಯೇ ಇರಲಿಲ್ಲ. ಹನ್ನಾ ಮಗನ ಒದ್ದಾಟ, ಗೋಳಾಟವನ್ನು ಗಮನಿಸುತ್ತಿದ್ದಳು. ಆಕೆಗೆ ತನ್ನ ಮುದ್ದುಮಗ ಪ್ರಸಿದ್ಧ ನಟನಾಗಬೇಕೆಂಬ ಆಸೆ ಇತ್ತು. ಅದಕ್ಕಾಗಿ ಆಕೆ ಯೋಚಿಸುತ್ತಿದ್ದಳು. ಅದಕ್ಕಾಗಿ ಪ್ರಯತ್ನಿಸುತ್ತಿದ್ದಳು. ಇದಕ್ಕೆ ಪೂರಕವಾಗಿ ಶಾಳೆಯಲ್ಲಿ ಮಕ್ಕಳಿಂದ ಸಿಂಡ್ರೆಲಾ ಎಂಬ ಗೀತ ನಾಟಕವನ್ನು ಆಡಿಸಲು ನಿರ್ಧರಿಸಿದರು. ಇದಕ್ಕೆ ಬಾಲಕ ಚಾಪ್ಲಿನ್ ನನ್ನೂ ಆಯ್ಕೆ ಮಾಡದೆ ಇರಲಿಲ್ಲ. ಅದೆಂದರೆ ಸಿಂಡ್ರೆಲ್ಲಾಳ ಕುರೂಪಿ ಸಹೋದರಿಯರ ಪಾತ್ರಗಳ [illegible] ಒಂದು. ಹನ್ನಾ ಮಗನಿಗೆ ತಮ್ಮ ಮನೆಯಲ್ಲಿಯೇ [illegible] ಪಾತ್ರದ ಔಚಿತ್ಯದ ಬಗ್ಗೆ, ಅಭಿನಯದ ಬಗ್ಗೆ ಹೇಳಿಕೊಡುತ್ತಿದ್ದಳು. ಚಾಪ್ಲಿನ್ ತುಂಬಾ ಶ್ರದ್ಧೆಯಿಂದ ಕಲಿಯುತ್ತಿದ್ದ. ಸಿಂಡ್ರೆಲ್ಲಾ ಪಾತ್ರಕ್ಕೆ ಆಯ್ಕೆಯಾಗಿದ್ದ ಹುಡುಗಿಯ ಸೌಂದರ್ಯಕ್ಕೆ ಅವನು ಆ ವಯಸ್ಸಿನಲ್ಲಿ ಮಾರು ಹೋಗಿದ್ದ. ಆಕೆ ವಯಸ್ಸಿನಲ್ಲೂ ಅಂತಸ್ತಿನಲ್ಲೂ ಹಿರಿಯಳಿದ್ದಳು; ಅವನದು ಕೇವಲ ಒನ್‌ವೇ ಲವ್ ಆಗಿತ್ತು. ಅದನ್ನು ವ್ಯಕ್ತಪಡಿಸುವುದು ಅವನಿಂದ ಸಾಧ್ಯವಾಗಲಿಲ್ಲ. ಮುಂದೆ ಅವನು ಹೆತ್ತವರ ಸಲಹೆಯಂತೆ ತಾತ್ಕಾಲಿಕವಾಗಿ ಬಿಟ್ಟು ಚಾಕ್‌ಸನ್ ಎಂಬಾತ ನಡೆಸುತ್ತಿದ್ದ 'ಎಯ್ಟ್ ಲ್ಯಾಂಕ್‌ಷೈರ್ ಲ್ಯಾಡ್ಸ್' ಎಂಬ ಕ್ಲಾಗ್ ಡ್ಯಾನ್ಸರ್ಸ್ ಟ್ರೂಪ್ ಸೇರಬೇಕಾಗಿ ಬಂತು.

ಈ ಎಲ್ಲಾ ದುರಂತಗಳು ಚಾಪ್ಲಿನ್‌ನ ಎಳೆಯ ಮನಸ್ಸಿನ ಮೇಲೆ ಅಘಾತನವನ್ನುಂಟು ಮಾಡಿದ್ದವು. ತಾನೋದುತ್ತಿದ್ದ ಡಿಕನ್ಸ್ ಕಾದಂಬರಿಗಳಲ್ಲಿ ನಡೆದ ಘಟನೆಗಳನ್ನು ವಾಸ್ತವದ ಘಟನೆಗಳೊಂದಿಗೆ ಹೋಲಿಸಿ ನೋಡುತ್ತಿದ್ದ. 'ಆಲಿವರ್ ಟ್ವಿಸ್ಟ್' ಕಾದಂಬರಿಯನ್ನು ಚಾಪ್ಲಿನ್ ತುಂಬ ಮೆಚ್ಚಿಕೊಂಡಿದ್ದ. ಕಾದಂಬರಿಗಳಲ್ಲಿನ ಪಾತ್ರಗಳನ್ನು ಅನುಕರಿಸಿ ಅಭಿನಯಿಸಲು ಪ್ರಯತ್ನಿಸುತ್ತಿದ್ದ.

ಎಂದಿನಂತೆ ಬಿಡುವಿನ ಸಮಯದಲ್ಲಿ ಗುಜರಿ ಪುಸ್ತಕ ಮಳಿಗೆಗಳಲ್ಲಿ ಎಡತಾಕಿ ಉತ್ತಮ ಗುಣ ಮಟ್ಟದ ಪುಸ್ತಕಗಳನ್ನು ಖರೀದಿಸಿ ಏಕಾಗ್ರತೆಯಿಂದ ಅಭ್ಯಾಸ ಮಾಡುತ್ತಿದ್ದ. ರಾಬರ್ಟ್ ಇಂಗರ್ ಸಾಲ್‌ನ Essays and lectures ಎಂಬ ಕೃತಿಯಿಂದ ಚಾಪ್ಲಿನ್ ಪ್ರಭಾವಿಗೊಂಡ. ಇಂಗರ್ ಸೋಲ್‌ನ ನಿರೀಶ್ವರವಾದ ಅವನಲ್ಲಿ ಆಧುನಿಕತೆಯನ್ನು ಜಾಗೃತಗೊಳಿಸಿತು. ಹಾಗೆಯೆ ಚಾಪ್ಲಿನ್‌ನಲ್ಲಿ ಹೊಸ ಎಚ್ಚರವನ್ನು ಸೃಷ್ಟಿಸಿದ ಎಮರ್ಸನ್ Self reliance ಕುರಿತು ಬರೆದಿದ್ದ ಲೇಖನ. **ಚಾಪ್ಲಿನ್‌ನ ಜ್ಞಾನದಾಹ ಮತ್ತು ಪುಸ್ತಕ ಪ್ರೀತಿ ಎಷ್ಟಿತ್ತೆಂದರೆ ಅವನು** The World as will ands idea ಎಂಬ ಮಹತ್ ಕೃತಿಯ ಮೂರು ಸಂಪುಟಗಳನ್ನು ಖರೀದಿಸಿ, ಬಿಡುವು ಸಿಕ್ಕಾಗಲೆಲ್ಲ ಓದುತ್ತಲೇ ಇರುತ್ತಿದ್ದ. ಚಾಪ್ಲಿನ್ ಮೇಲೆ ಪ್ರಭಾವ ಬೀರಿದ ಮತ್ತೊಂದುಕೃತಿ ಎಂದರೆ ವಾಲ್ಟ್ ವಿಟ್ಮನ್‌ರ leaves and grass. ಹಾಗೆಯೇ ಚಾಪ್ಲಿನ್ ಉತ್ತಮ ಲೇಖಕರ ಪರಿಚಯ ಮಾಡಿಕೊಳ್ಳಲು ಸದಾ ಪ್ರಯತ್ನಿಸುತ್ತಿದ್ದ. ನಾಟಕದ ಮೂಲ ಉದ್ದೇಶ ಪ್ರೇಕ್ಷಕ ನಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದು ಎಂಬ ಅರಿವಿದ್ದ ಅವನು ಹೊಟ್ಟೆ ಪಾಡಿಗಾಗಿ ಕೀಳು ಮನರಂಜನೆ ನೀಡಿ ಪ್ರೇಕ್ಷಕರನ್ನು ರಂಜಿಸುವುದು ಅನಿವಾರ್ಯವಾಗಿತ್ತು. ಅದರ ನಡುನಡುವೆ ಅವನು ಅಭಿನಯದಲ್ಲಿ, ಸಂಭಾಷಣೆಯಲ್ಲಿ, ನಾಟಕದ ಕೃತಿಯಲ್ಲಿ ತಕ್ಕಮಟ್ಟಿಗೆ ಸದಭಿರುಚಿಯ ಅಂಶಗಳನ್ನು ಅಳವಡಿಸುವ ಪ್ರಯತ್ನ ಮಾಡುತ್ತಿದ್ದ.

ಚಾರ್ಲಿಚಾಪ್ಲಿನ್‌ಗೆ ತನ್ನಲ್ಲಿ ಹೊಸಹೊಸ ವಿಷಯಗಳ ಯಥೇಚ್ಛ ಸಂಪನ್ಮೂಲ ಇರುವುದರ ಅರಿವಿತ್ತು. ಅದಕ್ಕೆಲ್ಲ ಸೆನ್ನೆಟ್ ಕೈ ಬಿಚ್ಚಿ ಸಹಕಾರ ನೀಡುತ್ತಿದ್ದ. ಚಾಪ್ಲಿನ್ ಸೆನ್ನೆಟ್‌ಗೆ ಸದಾ ಕೃತಜ್ಞನಾಗಿರಬೇಕು. ಯಾಕೆಂದರೆ, **"ನಮ್ಮಗೆ ಯಾವುದೇ ಒಂದು ನಿರ್ದಿಷ್ಟವಾದ ಚಿತ್ರಕಥೆ ಎಂಬುದಿರುವುದಿಲ್ಲ. ಕೇವಲ ಒಂದು ಪುಟ್ಟ ಕಲ್ಪನೆ ಮಾತ್ರ ಇರುತ್ತದೆ. ಅದರ ಸುತ್ತ ಏನಿದ್ದರೂ ನಾವು ನಮ್ಮ ಪ್ರತಿಭೆಯಿಂದ ಹೊಸ ಹೊಸ ದೃಶ್ಯಗಳನ್ನು ಸೃಷ್ಟಿಸಿ ಚಿತ್ರ ಮಾಡಬೇಕು"**

ಇದು ಚಾಪ್ಲಿನ್ ತಾನು ಕೀಸ್ಟೋನ್ ಕಂಪನಿಗೆ ಕಾಲಿರಿಸಿದ ಹೊಸತರದಲ್ಲಿ ಸೆನ್ನೆಟ್ ಹೇಳಿದ ಮಾತುಗಳು. ಸಾವಿರ ಪುಸ್ತಗಳ ಜ್ಞಾನ ಆ ಒಂದೆರಡು ಮಾತುಗಳಲ್ಲಿ ಅಡಗಿತ್ತು.

ಚಾಪ್ಲಿನ್ ಗ್ರೀನ್‌ವಿಚ್‌ಗೆ ಹೋಗಿ ಅಲ್ಲಿ ಗೆಳೆಯನೋರ್ವನ ಮನೆಯಲ್ಲಿ ತಂಗಿದ. ಅಲ್ಲಿ ಅವನು ಶ್ರಮಜೀವಿಗಳು, ಸಾಮಾನ್ಯ ಜನರ ಅಪಾರ ಜ್ಞಾನ ಕಂಡು ಮೂಕವಿಸ್ಮಿತನಾದ. ನೀಗ್ರೊ ಟ್ರಕ್ ಡ್ರೈವರೊಬ್ಬ ರೋಗಟ್‌ನ ಥಿಸಾರ್ಸ್ ಎಂಬ ಕೃತಿ ಬಗ್ಗೆ ನಿರರ್ಗಳವಾಗಿ ಮಾತಾಡುತ್ತಿದ್ದರೆ ಅಲೆಗ್ಸಾಂಡ್ರಿಯಾ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನೋರ್ವ ಕಾರ್ಲ್‌ಮಾರ್ಕ್ಸ್ ಬಗ್ಗೆ, ವಿಲ್ಲಿಯಂ ಬ್ಲೇಕನ ಕೃತಿಗಳ ಬಗ್ಗೆ ಅದ್ಭುತವಾಗಿ ಚರ್ಚಿಸಬಲ್ಲವನಾಗಿದ್ದ. ಇನ್ನೊಬ್ಬ ಸಾಮಾನ್ಯ ಲ್ಯಾಟಿನ್ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದ. ಚಾಪ್ಲಿನ್ ಅಲ್ಲಿ ಸಾಕಷ್ಟು ಮಂದಿ ಪ್ರಸಿದ್ಧ ಲೇಖಕರ ಪರಿಚಯ ಮಾಡಿಕೊಂಡ. ಅವರೊಂದಿಗೆ ಸರಿಸಮವಾಗಿ ಚರ್ಚೆಯಲ್ಲಿ ಭಾಗವಹಿಸಿದ. ಪ್ರಸಿದ್ಧ ಲೇಖಕ, ಇತಿಹಾಸಜ್ಞ ವಾಲ್ಡೋ ಫ್ರಾಂಕ್, ದಿ ವಾಸಸ್ ಪತ್ರಿಕೆಯ ಸಂಪಾದಕ ಮ್ಯಾಕ್ಸ್ ಈಸ್ಟ್‌ಮನ್, ಕವಿ ಹ್ಯಾರ್ಟ್ ಕ್ರೇನ್; ಪ್ರಸಿದ್ಧ ನ್ಯಾಯವಾದಿ ಫೀಲ್ಡ್ ಮ್ಯಾಲೋನ್, ಮತ್ತವನ ಪತ್ನಿ ಮಾರ್ಗರೇಟ್ ಫಾಸ್ಟರ್ ಮುಂತಾದವರೊಂದಿಗೆ ಅನುಭವ ವಿನಿಮಯ ಮಾಡಿಕೊಂಡ.

ಪ್ರಸಿದ್ಧ ನಾಟಕಕಾರ ಯುಜೀನ್ ಓ ನೀಲ್‌ನ ಎಂಪರರ್ ಜೋನ್ಸ್ ಎಂಬ ಪ್ರಸಿದ್ಧ ನಾಟಕದ ರಿಹರ್ಸಲ್ ನಡೆಯುತ್ತಿದ್ದ ಕಡೆ ಹೋಗಿ ಚರ್ಚೆಯಲ್ಲಿ ಭಾಗವಹಿಸಿದ.

ಚಾಪ್ಲಿನ್ ಪಂಚತಾರಾ ಹೋಟೆಲ್ ಗಳಲ್ಲಿದ್ದರೂ ಕೊಳಚೇಗೇರಿಗಳ ಕಡೆ ನೋಡುತ್ತಿದ್ದ. ಯಾವ ವಿಶ್ವವಿದ್ಯಾಲಯಗಳಿಂದ ಕಲಿಯಲಾರದ ಎಷ್ಟೋ ಪಾಠಗಳನ್ನು ಕಲಿಸಿರುವ, ಕಲಿಸುತ್ತಿರುವ ಕೊಳಚೆಗೇರಿ ಗಳಿಂದ ತಾನೆಂದೂ ದೂರ ಸರಿಯುವ ಪ್ರಯತ್ನ ಮಾಡಲಿಲ್ಲ. ತಾನು ನಿರ್ಗತಿಕ ಸ್ಥಿತಿಯಲ್ಲಿದ್ದಾಗಲೇ ಬಂಡವಾಳಶಾಹಿಯ ಹೊಸ ಹೊಸ ಮುಖಗಳ ಪರಿಚಯವಾದದ್ದು, ತಾನು ಎಲ್ಲರಂತೆ ಬಾಲ್ಯದಲ್ಲಿ ಸುಖವಾಗಿದ್ದರೆ ತನ್ನೊಳಗೆ ಚಾರ್ಲಿ ಮೂಡುತ್ತಿರಲಿಲ್ಲ, ತಾನು ಎಲ್ಲರಂತೆ ಒಬ್ಬನಾಗಿರುತ್ತಿದ್ದೆ. ತಾನು ದಾರಿದ್ರ್ಯವನ್ನು ಗಾಢವಾಗಿ ಅನುಭವಿಸಿದ್ದರಿಂದಾಗಿಯೇ ಚಾರ್ಲಿಯಂಥ ವಿಶಿಷ್ಟ ಪಾತ್ರವನ್ನು ಮಾಯಾದರ್ಪಣದಲ್ಲಿ ಅಭಿವ್ಯಕ್ತಿಸಲು ಸಾಧ್ಯವಾಯಿತು. ತಾನು ಸಾಮಾನ್ಯರ ಪೈಕಿ ಸಾಮಾನ್ಯ ಎಂದು ಭಾವಿಸಿದ್ದರಿಂದಾಗಿಯೇ ಚಾಪ್ಲಿನ್ ಕಳ್ಳಮಾರ್ಗದಿಂದ ಹೊರಟು ಅನಾಮಧೇಯನಂತೆ ಲಂಡನ್ನಿನ ಕೊಂಪೆಗಳಲ್ಲಿ ಸುತ್ತಾಡಿದ. ಆನಂದಿಸಿದ. **ಎತ್ತರ ತಲುಪಿದ್ದಾಗ ಕೆಳಗೆ ನೋಡುವ ಕೆಳಗಿದ್ದಾಗ ಎತ್ತರದ ಕಡೆ ನೋಡುವ ಮಹಾತ್ವಾಕಾಂಕ್ಷಿಯಾದ ಚಾಪ್ಲಿನ್ ಕೊಳಚೆಗೇರಿ ಗಳಲ್ಲಿ ವಾಸಿಸುತ್ತಿದ್ದವರೊಂದಿಗೆ ಸಂಭಾಷಿಸುವಷ್ಟೇ ಸಲೀಸಾಗಿ ಗ್ಯಾರಿಕ್ ಕ್ಲಬ್‌ಗಳಂಥ ಪ್ರತಿಷ್ಠಿತ ಸ್ಥಳಗಳಲ್ಲಿ ಜೇವ್ಸ್ ಬ್ಯಾರಕಿ, ಇ.ವಿ. ಲುಕಾಸ್, ವಾಲ್ಟರ್ ಹ್ಯಾಕೆಟ್, ಜಾರ್ಜ್ ಫ್ರಾಂಪ್ಟನ್, ಬಾನ್‌ಕಾಷ್ಟ ಮುಂತಾದ ಗಣ್ಯರೊಂದಿಗೆ ಅಪ್ರತಿಮ ಬುದ್ಧಿಜೀವಿಯಂತೆ, ಕಲಾವಿದನಂತೆ, ವಿಚಾರವಾದಿಯಂತೆ ಸಂಭಾಷಿಸಬಲ್ಲವನಾಗಿದ್ದ.** ಬರ್ನಾಡ್ ಷಾ, ಹೆಚ್.ಜೆ.ವೆಲ್ಸ್‌ರಂಥ ಪ್ರಸಿದ್ಧ ಲೇಖಕರೊಂದಿಗೆ ಉಭಯ ಕುಶಲೋಪರಿಯಾಗಿ ಅನುಭವಗಳ ವಿನಿಮಯ ಮಾಡಿಕೊಂಡ.

ಹೆಚ್.ಜಿ.ವೆಲ್ಸ್‌ರಂತೆಯೇ ಖ್ಯಾತ ನಾಟಕಕಾರ ಜಾರ್ಜ್ ಬರ್ನಾಡ್ ಶಾ ಮತ್ತವನ ರಕ್ತ ಸಂಬಂಧಿಗಳಾದ ಜಾನ್ ಮೇನಾರ್ಡ್ ಕೇನ್ಸ್, ಲಾಯ್ಡ್ ಜಾರ್ಜ್ ಮುಂತಾದವರು. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಮೇನಾರ್ಡ್ ಕೇನ್ಸ್‌ರೊಂದಿಗೆ ಪ್ರಥಮ ಮಹಾಯುದ್ಧನಂತರದ ಜಾಗತಿಕ ಆರ್ಥಿಕ ವ್ಯವಸ್ಥೆ ಕುರಿತು ಚಾಪ್ಲಿನ್ ಚರ್ಚಿಸಿದ. ಬರ್ನಾಡ್ ಷಾ ಚಾಪ್ಲಿನ್‌ನ್ನು ಮನೆಗೆ ಕರೆದೊಯ್ದು ತನ್ನ ಅಮೂಲ್ಯ ಗ್ರಂಥಾಲಯ ತೋರಿಸಿದ. ಷಾನ ದಿ ಅಪ್ಲೆಕಾರ್ಟ್ ನಾಟಕದ ಬಗ್ಗೆ ವಿಮರ್ಶಕರ ನಿರ್ಲಕ್ಷ್ಯಧೋರಣೆ ಕುರಿತು ಶ್ರೀಮತಿ ಷಾ ಖಾರವಾಗಿ ಮಾತಾಡಿದಳು. ಷಾ ನ ಕುಟುಂಬದ ಅನಧಿಕೃತ ಸದಸ್ಯನಂತಿದ್ದ ಚಾಪ್ಲಿನ್ ಅವರೊಂದಿಗೆ ಬ್ರಿಟನ್ ರಂಗಭೂಮಿ ಕುರಿತು ಚರ್ಚಿಸಿದ.

ಚಾಪ್ಲಿನ್ ಮತ್ತು ವೆಲ್ಸ್ ಎರಡು ಜ್ಞಾನವಾಹಿನಿಗಳ ಸಂಗಮದಂತಾಗಿ ಗಂಟೆ ಗಟ್ಟಲೆ ಬೇಸರವಿಲ್ಲದೆ ಚರ್ಚಿಸುತ್ತಿದ್ದರು. ಪರಸ್ಪರ ಜ್ಞಾನ ದಾಹವನ್ನು ತಣಿಸಿಕೊಳ್ಳುತ್ತಿದ್ದರು. ಚಾಪ್ಲಿನ್‌ಗೆ ಬಂಕಿಂಗ್ ಹ್ಯಾಂ ಅರಮನೆ ಒಂದು ತೂಕವಾದರೆ, ಜಾರ್ಜ್, ವೆಲ್ಸ್‌ರಂಥ ಅಪರೂಪದ ಲೇಖಕರು, ಚಿಂತಕರು ಇನ್ನೊಂದು ತೂಕ. ಅವನು ಹೆಚ್ಚಿನ ಸಮಯವನ್ನು ಲೇಖಕರೊಂದಿಗೆ ಕಳೆಯಲು ಬಯಸುತ್ತಿದ್ದ.

ಸಮುದ್ರಕ್ಕಂಟಿಕೊಂಡಂತಿರುವ ಮನೆಯನ್ನು ಬಾಡಿಗೆ ಪಡೆದು ಉಳಿದುಬಿಟ್ಟರೆಂದರೆ ಮುಗಿಯಿತು. ದಿನಗಳು ಓಡಿದ್ದೇ ತಿಳಿಯುತ್ತಿರಲಿಲ್ಲ. ಟೆನ್ನಿಸ್ ಆಡಿ ಸಾಕಾದ ಮೇಲೆ ಬಗೆ ಬಗೆಯ ತರುಲತೆಗಳ ನಡುವೆ ಮೈಲುಗಟ್ಟಲೆ ಕಥೆ ಕುರಿತು ಚರ್ಚಿಸುತ್ತ ನಡೆಯುವುದು ಸುಸಂಪನ್ನ ಗ್ರಂಥಾಲಯ ಹೊಕ್ಕು ಕಥೆ ಕಾದಂಬರಿ ಇತಿಹಾಸಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುತ್ತಾ ಕೂಡ್ರುವದು.ಚಾಪ್ಲಿನ್‌ಗೆ ಮಪಾಸ್‌ನ ಕಥೆಗಳೆಂದರೆ ಪಂಚಪ್ರಾಣ. ಗ್ರಂಥಾಲಯ ಸಾಕೆನಿಸಿದಾಗ ಗೆಳೆಯರೊಡನೆ ಸೇರಿ ಜರ್ಮನ್ ಬಗೆ, ನಾಜಿ ಪಕ್ಷದ ವೈಖರಿ ಬಗ್ಗೆ ಚರ್ಚಿಸುವುದು, ಗೊತ್ತಿಲ್ಲದ ವಿಷಯ ತಿಳಿದುಕೊಳ್ಳುವದು. ಯಾವ ಲೇಖಕನಿಗೂ ಕಡಿಮೆ ಇಲ್ಲದಷ್ಟು ಸಾಹಿತ್ಯಾಭ್ಯಾಸ ಮಾಡಿದ್ದ ಚಾಪ್ಲಿನ್‌ನೊಂದಿಗೆ ಸಾಹಿತ್ರಿಕವಾಗಿ ಹರಟಲು ಲೇಖಕರೂ ಇಚ್ಛಿಸುತ್ತಿದ್ದರು.

ರಾಜ್ ಬಿಡುಗಡೆ ನಂತರ...........

ಪುಟ 9 ರಿಂದ

ಮಾಡಿದ್ದರೂ ಇನ್ನೊಂದು ಆಯೋಗವನ್ನು ರಚನೆ ಮಾಡಬೇಕೆಂಬ ಬೇಡಿಕೆ ಏನನ್ನು ತೋರಿಸುತ್ತದೆ? ಕೊಳತ್ತೂರು ಸಮಾವೇಶದಲ್ಲಿ ಮಾಡಿದ ಭಾಷಣಗಳು ದೇಶದ ಐಕ್ಯತೆ ಮತ್ತು ಎರಡು ರಾಜ್ಯಗಳ ಉತ್ತಮ ಸಂಬಂಧಕ್ಕೆ ಧಕ್ಕೆಯಾಗುತ್ತ ದೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಅದೇ [illegible]ಯಲ್ಲಿ ಈಗ ಮತ್ತೆ ವೀರಪ್ಪನ್ ವಿರುದ್ಧದ [illegible]ರ್ಯಾಚರಣೆಯ ಹೆಸರಿನಲ್ಲಿ ಹಳ್ಳಿಗರ ಮೇಲೆ [illegible] ಮತ್ತು ದೌರ್ಜನ್ಯಗಳು ಪ್ರಾರಂಭವಾದರೆ [illegible] ದೊಡ್ಡ ದಂಗೆ ಮತ್ತು ದಂಡಯಾತ್ರೆಗಳು [illegible]ಗುತ್ತವೆಂದು ಕರ್ನಾಟಕಕ್ಕೆ ಎಚ್ಚರಿಕೆಯನ್ನು [illegible].

ಇದೇ ಸಭೆಯಲ್ಲಿ ಎಲ್‌ಟಿಟಿಇ ನಾಯಕ ಪ್ರಭಾಕರನ್‌ರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಅದಕ್ಕೆ ಸಂಬಂಧಪಟ್ಟಂತಹ ಸಾಹಿತ್ಯವನ್ನು ಹಂಚಲಾಯ್ತು. ಇಷ್ಟೆಲ್ಲಾ ನಡೆಯುತ್ತಿದ್ದರೂ ಕರ್ನಾಟಕ ಸರ್ಕಾರವಾಗಲೀ, ತಮಿಳುನಾಡು ಸರ್ಕಾವಾಗಲೀ ತುಟಿಪಿಟಿಕ್ ಎನ್ನುತ್ತಿಲ್ಲ. ಕಾರಣವೇನು? ಈ ಎಲ್ಲಾ ಚಟುವಟಿಕೆ ಗಳಿಗೆ ಇವರ ಸಮ್ಮತಿ ಇದೆ ಎಂದು ಅರ್ಥವೇ?

ಇದು ರಾಜಕುಮಾರ್ ಬಿಡುಗಡೆಯ ಒಪ್ಪಂದದ ಭಾಗವೇ? ವೀರಪ್ಪನ್‌ನನ್ನು ಹಿಡಿಯಲು ಹೊಸದಾಗಿ ಸಾಂಗ್ಲೀಯಾನ ನೇತೃತ್ವದಲ್ಲಿ [illegible]ಪಡೆಯನ್ನು ನೇಮಕ ಮಾಡಿದ ಮೇಲೆ ಈ ಎಲ್ಲಾ ಬೆಳವಣಿಗೆಗಳು ಅಂದರೆ ನೆಡುಮಾರನ್ ಮೈಸೂರು ಭೇಟಿ, ಕೊಳತ್ತೂರು ಸಮಾವೇಶ ನಡೆಯುತ್ತಿದೆ. ಅಂದರೆ ಅರ್ಥವೇನು? ಎಂಬುದನ್ನು ಕರ್ನಾಟಕ ಸರ್ಕಾರ ಮತ್ತು ತಮಿಳುನಾಡು ಸರ್ಕಾರಗಳು ತಿಳಿಯಲಾರದ ಸ್ಥಿತಿಗೆ ಬಂದಿದೆಯೇ? ಅಥವಾ ತಿಳಿದು ತಮ್ಮ ರಾಜಕೀಯ ಒತ್ತಡಗಳಿಗೆ ಮತ್ತು ಅಧಿಕಾರದ ಆಸೆಗಳಿಗೆ ರಾಷ್ಟ್ರದ ಮತ್ತು ರಾಜ್ಯಗಳ ಹಿತಾಸಕ್ತಿಗಳನ್ನು ಬಲಿ ತೆಗೆದುಕೊಳ್ಳುವುದಕ್ಕೆ ಸನ್ನದ್ದರಾಗಿದ್ದಾರೆಯೋ? ಈ ವಿಚ್ಛಿದ್ರಕಾರಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ರಾಷ್ಟ್ರದ ಮತ್ತು ರಾಜ್ಯದ ಏಕತೆ ಮತ್ತು ಐಕ್ಯತೆಯನ್ನು ಬಹಿರಂಗವಾಗಿ ಅಲ್ಲಗಳೆಯುತ್ತಿದ್ದಾರೆ. ಇತ್ತ ದೆಹಲಿಯಲ್ಲಿ ವೀರಪ್ಪನ್ ಬಂಧನದ ಬಗ್ಗೆ ಪ್ರಧಾನ ಮಂತ್ರಿ ಮತ್ತು ಗೃಹ ಮಂತ್ರಿಗಳನ್ನು ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಮುಖ್ಯಮಂತ್ರಿ ಕೃಷ್ಣಾರವರು ನಮ್ಮ ಅರಣ್ಯಗಳನ್ನು ಅಪರಾಧಿ ಶಕ್ತಿಗಳಿಂದ ದೂರಗೊಳಿಸುವುದೇ ನನ್ನ ಮುಖ್ಯ ಉದ್ದೇಶವೆಂದು ಹೇಳಿದ್ದಾರೆ. ಶ್ರೀ ಕೃಷ್ಣಾ ಅವರ ದೃಷ್ಟಿಯಲ್ಲಿ ವೀರಪ್ಪನ್ ಸಮಸ್ಯೆ ಇನ್ನೂ ಒಂದು ಕಾನೂನಿನ ಪ್ರಶ್ನೆಯೆಂದೇ ಭಾವಿಸಿದ್ದಂತಿದೆ. ವೀರಪ್ಪನ್ ಪ್ರಶ್ನೆ ಈಗ ಬರೀ ಕಾನೂನು ಪ್ರಶ್ನೆಯಾಗಿ ಉಳಿದಿಲ್ಲ. ವೀರಪ್ಪನ್ ಜೊತೆ ಇರುವವರು ಈಗ ತಮಿಳು ರಾಷ್ಟ್ರವಾದಿಗಳು. ತಮಿಳು ಉಗ್ರಗಾಮಿಗಳು, ಎಲ್‌ಟಿಟಿಇ ಪರವಾಗಿ ರುವವರು. ಅಂದರೆ ಇದೊಂದು ಗಂಭೀರವಾದ ರಾಷ್ಟ್ರದ ಐಕ್ಯತೆಯ ಪ್ರಶ್ನೆ ಮತ್ತು ರಾಜ್ಯದ ಭಾವೈಕ್ಯತೆಯ ಪ್ರಶ್ನೆ. ಇಂತಹ ಸಂದರ್ಭದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ಮಟ್ಟಹಾಕಬೇಕು. ○

ಐತಿಹಾಸಿಕ ಅಭಿನಂದನಾ ಸಮಾರಂಭದಲ್ಲಿ ಜ್ಯೋತಿಬಸ

ಡಿಸೆಂಬರ್ 13, ಪ.ಬಂಗಾಳದ ದುಡಿಯುವ ಜನರಿಗೆ ಅಪೂರ್ವದಿನ. ಸತತ 24 ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ದೀರ್ಘ ಆಳ್ವಿಕೆ ನಡೆಸಿ ದುಡಿಯುವ ಜನರ ಮನಗೆದ್ದ ನೆಚ್ಚಿನ ಜನನಾಯಕ 'ಜ್ಯೋತಿ ದಾ'ರವರಿಗೆ ಅಂದು ಅಭಿನಂದನಾ ದಿನ.

ಕಲ್ಕತ್ತೆಯ ಯುವ ಭಾರತಿ ಕ್ರೀಡಾಂಗಣದಲ್ಲಿ ಅಭಿನಂದನಾ ಸಮಾರಂಭ. ಯುವ ಭಾರತಿ ಕ್ರೀಡಾಂಗಣದ ಸುತ್ತಲ ಬಾಗಿಲುಗಳನ್ನು ತೆರೆದು ಕೊಂಡು ಸಾಗರೋಪಾದಿಯಲ್ಲಿ ಧುಮ್ಮುಕ್ಕಿದ ಜನತೆ. ಎಲ್ಲಿ ನೋಡಿದರು ಜನಸಾಗರ. ಬಸ್ಸುಗಳಲ್ಲಿ, ವ್ಯಾನುಗಳಲ್ಲಿ, ಆಟೋ; ಟ್ರ್ಯಾಮುಗಳಲ್ಲಿ ಜನ ಬಂದು ಸೇರುತ್ತಿದ್ದ ದೃಶ್ಯ ಎಂತಹವರಲ್ಲೂ ರೋಮಾಂಚನ ವುಂಟು ಮಾಡುತ್ತಿತ್ತು. ಕ್ರೀಡಾಂಗಣ ತುಂಬಿ ತುಳುಕುತ್ತಿತ್ತು. ಕಾರ್ಯಕ್ರಮ ಮುಗಿಯುವ ತನಕ ಜನ ಬಂದು ಸೇರುತ್ತಲೇ ಇದ್ದರು. ತಮ್ಮ ನೆಚ್ಚಿನ ನಾಯಕನನ್ನು ನೋಡುವ, ಅಭಿನಂದಿಸುವ ಹಂಬಲದಿಂದ ಯುವ ಜನರಂತೆ ವಯೋವೃದ್ಧರೂ ಕ್ರೀಡಾಂಗಣಕ್ಕೆ ಓಡುತ್ತಿದ್ದರು. ಕರ್ನಾಟಕದಿಂದ ಜನಾರೋಗ್ಯ ಕಾರ್ಯಕ್ರಮದ ಸಲುವಾಗಿ ಕಲ್ಕತ್ತೆಗೆ ಹೋದ ನಮ್ಮ ಜೊತೆಯಲ್ಲಿ ಹಲವಾರು ಸಂಘ-ಸಂಸ್ಥೆಗಳ ಜನ ಬಂದಿದ್ದರು. ಅವರಲ್ಲೊಬ್ಬರು "ಅಬ್ಬಾ! ಇಷ್ಟೊಂದು ಜನರನ್ನು ಸೇರಿಸಲು ಎಷ್ಟು ಹಣ ಖರ್ಚಾಗಿರ ಬಹುದು. ತಲೆಗೆ ಐವತ್ತೆಂದರೂ ಎಷ್ಟಾಯಿತು?" ಎಂದು ಉದ್ಗರಿಸಿದರು. ಅಂದು ನಮ್ಮ ಜೊತೆಗಿದ್ದ, ಕಲ್ಕತ್ತೆಯಲ್ಲಿ ವಾಸವಾಗಿರುವ ಕನ್ನಡಿಗರೊಬ್ಬರು ಕೂಡಲೇ ಪ್ರತಿಕ್ರಿಯಿಸಿದರು "ಇವರು ಹಣ ಕೊಟ್ಟು ಕರೆತಂದ ಜನರಲ್ಲ. ಪಕ್ಷದ ಕಾರ್ಯಕ್ರಮಕ್ಕೆ ಭಾಗವಹಿ ಸಲು, ಜ್ಯೋತಿಬಸುರನ್ನು ನೋಡಲು ಕಾತರದಿಂದ ಬಂದಿರುವ ಜನತೆ. ಇವರಿಗೆ ಯಾರೂ ಹಣ ಕೊಟ್ಟಿಲ್ಲ, ಸ್ವಯಂ ಸ್ಫೂರ್ತಿಯಿಂದ ಸ್ವಂತ ಹಣ ಖರ್ಚು ಮಾಡಿ ಭಾಗ ವಹಿಸಿದ್ದಾರೆ. ಇದು ಪ.ಬಂಗಾಳದ ದುಡಿಯುವ ಜನರ ಪರಂಪರೆ" ಎಂದರು.

ದೇಶದ ಉದ್ದಗಲಕ್ಕೂ ಜನಮನ್ನಣೆ ಗಳಿಸಿದ 'ಜನನಾಯಕನನ್ನು' ಅಭಿನಂದನಾ ಸಮಾರಂಭದಲ್ಲಿ ನೋಡಲು ನಮಗೂ ಅವಕಾಶ ಸಿಕ್ಕಿತ್ತು. ಮಾತ್ರವಲ್ಲ ರಾಜಕಾರಣಿಯೊಬ್ಬರನ್ನು ಅಭಿನಂದಿಸಲು ಸೇರಿದ್ದ ಲಕ್ಷೋಪಾದಿ ಜನರನ್ನು ನೋಡುವ ಅವಕಾಶವೂ ಸಿಕ್ಕಿತ್ತು. (ನೆಚ್ಚಿನ ನಟನನ್ನು ಕಾಣಲು ನೂರಾರು ಸಂಖ್ಯೆಯಲ್ಲಿ ನೆರೆಯುವ ಜನರನ್ನು ಕಂಡು ಅದೇ ಅದ್ಭುತ ಎಂದು ಭಾವಿಸುತ್ತಿದ್ದ ನಮ್ಮ ಕರ್ನಾಟಕದ ತಂಡಕ್ಕೆ ಇಂಥ ಕಾರ್ಯಕ್ರಮ ನೋಡಿ ಹೇಗಾಗಿರಬೇಕು) ಕಾರ್ಯಕ್ರಮ ಮುಗಿಸಿ ವೃದ್ಧೆಯರಿಬ್ಬರು ಅಳುತ್ತಾ ಸೆರಗಿನಂಚಿನಿಂದ ಒಂದೇಸಮನೆ ಕಣ್ಣೊರೆಸುತ್ತಾ ಹೊರಗೆ ನಡೆದಿದ್ದರು. 24 ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿದ್ದು ಇಂತಹ ಭಾವನಾತ್ಮಕ ಸಂಬಂಧಗಳ ಆಧಾರದಲ್ಲಿ ಜನತೆಯ ಪ್ರೀತಿ-ವಿಶ್ವಾಸದಲ್ಲಿ ಎಂದು ಎಲ್ಲರಿಗೂ ತಿಳಿದಿರುವ ವಿಷಯವೇ. ಆದರೆ ಇಂತಹ ಪ್ರೀತಿ, ವಿಶ್ವಾಸ ಗಳಿಸುವಲ್ಲಿ ಪಕ್ಷದ ಮುಖಂಡರ ಪಾತ್ರ ಎಷ್ಟು ಕಾಲದ್ದಿರಬಹುದು ಎಷ್ಟಿರಬಹುದು ಲೆಕ್ಕ ಹಾಕಲು ಬರುವುದೇ?

"ಜ್ಯೋತಿಬಸು ಆಡಳಿತ ನಡೆಸಿದ್ದು 24 ವರ್ಷಗಳು ಮಾತ್ರ. ಆದರೆ ಮುಂದಿನ ದಿನಗಳ 24 ಗಂಟೆಗಳೂ ದುಡಿಯುವ ಸ್ಫೂರ್ತಿಯನ್ನು ತುಂಬಲಾಗಿದೆ" ಎಂದು ಬರೆದುಕೊಂಡಿದ್ದ ಬ್ಯಾನರ್ ನೋಡಿದಾಗ ಪಕ್ಷದ ದುಡಿಮೆ ಬಿಡುವಿಲ್ಲದ್ದು ಎಂದು ಯಾರಿಗೆ ತಾನೆ ಅರ್ಥವಾಗದು.

ಜ್ಯೋತಿಬಸುರವರ ವ್ಯಕ್ತಿತ್ವದ ಕುರಿತು, ಅಂತಹ ವ್ಯಕ್ತಿತ್ವವನ್ನು ರೂಪುಗೊಳಿಸಿದ ಪಕ್ಷದ ಕುರಿತು ಜನತೆಯ ಭಾಷೆಯಲ್ಲಿ ಎಷ್ಟೊಂದು ಬ್ಯಾನರುಗಳು. ಜನತೆಯೊಂದಿಗೆ ಕಟ್ಟಿದ ಸೇತುವೆಯಿಂದ ಧುಮುಕುವುದಾದರೂ ಹೇಗೆ? ಜ್ಯೋತಿಬಸು ನಿವೃತ್ತಿ, ಜ್ಯೋತಿ ಬಸು ರಾಜಕೀಯದಿಂದ ನಿರ್ಗಮನ ಮುಂತಾಗಿ ಬಂಡವಾಳಶಾಹಿ ಪತ್ರಿಕೆಗಳು ಕೋಟಿ ಸಲ ಬಾಯಿ ಬಡಿದರು, ಜ್ಯೋತಿಬಸು ಮತ್ತೆ ಮತ್ತೆ ಹೇಳಿದ್ದು ಮುಖ್ಯಮಂತ್ರಿ ಸ್ಥಾನದಿಂದ ಮಾತ್ರ ನಿವೃತ್ತಿ. ಜ್ಯೋತಿ ದಾದಾ ಜನತೆಯೊಂದಿಗೆ ಬೆಸೆದ ಸೇತು. ಯಾರಿಂದಲೂ ಕೆಡವಲಾರದ್ದೆಂದು ಅಂದಿನ ಕಾರ್ಯಕ್ರಮ, ಆ ಜನ, ಆ ಕೆಂಪು ಬಾವುಟಗಳು, ಬ್ಯಾನರುಗಳು ಕೂಗಿ ಕೂಗಿ ಹೇಳುತ್ತಿದ್ದವು.

ಅಭಿನಂದಿಸಲು ಸೇರಿದ್ದ ರಾಷ್ಟ್ರೀಯ ನಾಯಕರು

ಕ್ರೀಡಾಂಗಣದ ನಡುವಿಗೆ ನಿರ್ಮಿಸಲಾಗಿದ್ದ ವಿಶಾಲ ವೇದಿಕೆಯಲ್ಲಿ ರಾಷ್ಟ್ರದ ಹಾಗೂ ಪ್ರಜಾಸತ್ತಾತ್ಮಕ ರಾಜಕೀಯ ನಾಯಕರುಗಳು ಆಣಿನೆರೆದಿದ್ದರು. ಜ್ಯೋತಿ ಬಸುರವರನ್ನು ಅಭಿನಂದಿ



ವೇದಿಕೆಯಲ್ಲಿ ವಿ.ಪಿ.ಸಿಂಗ್, ಜ್ಯೋತಿಬಸು ಮತ್ತು ಬಾಂಗ್ಲಾದೇಶದ ವಿದೇಶಾಂಗ ಸಚಿವ ಅಬ್ದುಲ್ ಸಮಾಜ್ ಅಜಾದ್

ಸುವ ಸಮಾರಂಭ ತೃತೀಯ ರಂಗಕ್ಕೆ ಚಾಲನೆ ನೀಡುವ ಸಮಾರಂಭವೂ ಆಗಿ ಮಾರ್ಪಟ್ಟಿತು.

ಮಾಜಿ ಪ್ರಧಾನಮಂತ್ರಿಗಳಾದ ವಿ.ಪಿ.ಸಿಂಗ್, ಹೆಚ್.ಡಿ.ದೇವೇಗೌಡ, ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್, ಸಿಪಿಐನ ಪ್ರ.ಕಾರ್ಯದರ್ಶಿ ಎ.ಬಿ.ಬರ್ಧನ್, ಬಾಂಗ್ಲಾದೇಶದ ವಿದೇಶಾಂಗ ಸಚಿವರಾದ ಅಬ್ದುಲ್ ಸಮಾದ್ ಅಜಾದ್, ಆರ್‌ಜೆಡಿ ಮುಖಂಡರಾದ

ಮೂರನೇ ಪರ್ಯಾಯದತ್ತ ಒತ್ತು

ಲಲ್ಲೂ ಪ್ರಸಾದ್ ಯಾದವ್, ಬಿಹಾರದ ಮುಖ್ಯಮಂತ್ರಿ ರಾಬ್ಡಿದೇವಿ, ಪ.ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ, ತ್ರಿಪುರಾದ ಮಾಹಿತಿ ಸಚಿವರಾದ ಅನಿಲ್ ಸರ್ಕಾರ್, ಅಸ್ಸಾಂನ ಪಂಚಾಯತಿ ಸಚಿವರಾದ ಸೈಯದ್-ಉಲ್-ಅಲವತ್ ಚೌಧುರಿ, ಪ.ಬಂಗಾಳದ ಎಡರಂಗದ ಅಧ್ಯಕ್ಷರು, ಸಮಾರಂಭದ ಅಧ್ಯಕ್ಷರೂ ಆದ ಶೈಲೇನ್ ದಾಸ್ ಗುಪ್ತಾ, ಸಿಪಿಎಂನ ಸಂಸತ್ ಸದಸ್ಯ ಮಹಮ್ಮದ್ ಸಲೀಂ ಸಮಾಜವಾದಿ ಪಕ್ಷದ ಮುಖಂಡು ಮುಂತಾದವರು ವೇದಿಕೆಯಲ್ಲಿದ್ದರು.

ಮೂರನೇ ಪರ್ಯಾಯದತ್ತ ಹೊರಳಿದ ಎಲ್ಲರ ಮಾತು

ಸಮಾರಂಭವನ್ನುದ್ದೇಶಿಸಿ ಮಾತನಾಡಿದ ವಿ.ಪಿ.ಸಿಂಗ್‌ರವರು ರಾಷ್ಟ್ರೀಯ ಮಟ್ಟದ ತೃತೀಯ ರಂಗದ ಸರ್ಕಾರ, ಜಾತ್ಯಾತೀತ - ಪ್ರಜಾಸತ್ತಾತ್ಮಕ ಶಕ್ತಿಗಳನ್ನು ದೇಶಾದ್ಯಂತ ಒಟ್ಟುಗೂಡಿಸಲು ಪ್ರಯತ್ನ ನಡೆದಿದೆ. ಈ ನಿಟ್ಟಿನಲ್ಲಿ ಐಕ್ಯತೆಯ ಪ್ರಜ್ಞೆಯನ್ನು ಮೂಡಿಸುವ ಪ್ರಾಮಾಣಿಕ ಕೆಲಸ ಮಾಡಿದೆಯೆಂದರಲ್ಲದೆ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಆರ್ಥಿಕ, ಹಣಕಾಸು ನೀತಿಗಳನ್ನು ತೀವ್ರವಾಗಿ ಖಂಡಿಸಿದರು. ಬಿಜೆಪಿ, ತನ್ನ ಮುಖ್ಯ ಗುರಿಯಂತೆ ಕೋಮುಗಳ ಆಧಾರದಲ್ಲಿ ದೇಶದ ಜನರನ್ನು ವಿಭಜಿಸಲು ಯಾವಾಗಲೂ ಕಾರ್ಯ ಪ್ರವೃತ್ತವಾಗಿರುತ್ತದೆ ಎಂದು ಎಚ್ಚರಿಸಿದ ಅವರು ಅಯೋಧ್ಯೆ ವಿವಾದದ ಕುರಿತು ಪ್ರಧಾನಿ ವಾಜಪೇಯಿಯವರ ಇತ್ತೀಚಿನ ಹೇಳಿಕೆಗಳು ಅವರ 'ಕೋಮುವಾದಿ ಆಧುನಿಕ ಮುಖವಾಡ'ವನ್ನು ಕಳಚಿಟ್ಟಂತಾಗಿದೆ ಎಂದರು.

ಸುರ್ಜಿತ್‌ರವರು ಪ್ರಸ್ತುತ ದೇಶದ ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳ ಕಡೆಗೆ ಗಮನ ಸೆಳೆದದ್ದು ಮಾತ್ರವಲ್ಲದೆ ಬಿಜೆಪಿ ನೇತೃತ್ವದ ಸರ್ಕಾರ ವಿದೇಶಿ ಸಾಮ್ರಾಜ್ಯಶಾಹಿಗಳಿಗೆ ದೇಶವನ್ನು ಮಾರಲು ತಯಾರಿರುವ ಕುರಿತು ವಿವರಿಸಿದರು. ಜೊತೆಗೆ ರಾಜಕೀಯದಲ್ಲಿ ಮತೀಯ ಅಂಶಗಳು ಬೆರೆಸಿ ದೇಶದ ಐಕ್ಯತೆ ಸಮಗ್ರತೆಗೆ ಆಘಾತ ಉಂಟು ಮಾಡಲು ಹಿಂಜರಿಯುವುದಿಲ್ಲವೆಂದು ತಿಳಿಸಿದರು. ಕೇವಲ ಎಡ ಪಕ್ಷಗಳಿಂದ ಮಾತ್ರ ಈ ಹೆಚ್ಚುತ್ತಿರುವ ದಾಳಿ-ಆಘಾತಗಳನ್ನು ಎದುರಿಸುವಲ್ಲಿ ಸಾಧ್ಯವಿಲ್ಲದಿರುವುದರಿಂದ ಒಂದು ಮೂರನೇ ರಂಗವನ್ನು ಕಟ್ಟಿ ಬೆಳೆಸುವ ಪ್ರಾಮಾಣಿಕ ಪ್ರಯತ್ನ ಈಗ ಅತ್ಯಗತ್ಯವಾಗಿದೆಯೆಂದರು.

ಜ್ಯೋತಿ ಬಸು ಮಾತನಾಡಿ, ಕೇಂದ್ರದಲ್ಲಿ ಕೋಮುವಾದಿ ಬಿಜೆಪಿ ನೇತೃತ್ವದ ಸರ್ಕಾರ ತನ್ನ ಧೋರಣೆಗಳನ್ನು ಜಾರಿ ಮಾಡುತ್ತಿದೆ. ಇದು ವ್ಯರ್ಥ ಮಾಡುವ ಸಮಯವಲ್ಲ. ಬಿಜೆಪಿಯನ್ನು ಕೆಳಗಿಳಿಸಲು ಅವರ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ರಾಷ್ಟ್ರಮಟ್ಟದಲ್ಲಿ ಬಲಪಡಿಸಬೇಕು. ಇದೊಂದೇ ಈಗಿನ ಮಾರ್ಗವೆಂದರು.

ತೃತೀಯ ರಂಗವು ಪರ್ಯಾಯ ಕಾರ್ಯಕ್ರಮಗಳ ರಂಗ ಮಾತ್ರವಾಗಿರದೆ, ಬಿಜೆಪಿ ನೇತೃತ್ವದ ಜನವಿರೋಧಿ ನೀತಿಗಳ ವಿರುದ್ಧ ದೇಶವ್ಯಾಪಿ ಜನ ಚಳುವಳಿಯನ್ನು ಮುನ್ನಡೆಸುವ ರಂಗವೂ ಆಗಬೇಕಿದೆ ಎಂದರು ಬಸು.

ನಾಚಿಕೆಗೆಟ್ಟು ಸಾಮ್ರಾಜ್ಯಶಾಹಿಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವ ಸ್ಥಳೀ... ಏಜೆಂಟರುಗಳ, ಕೋಮು ಶಕ್ತಿಗಳ ವಿರುದ್ಧ ತ... ಬದುಕಿರುವವರೆಗೆ ಹೋರಾಡುವ ಘೋ... ಯೊಂದಿಗೆ ಬಸು ತಮ್ಮ ಭಾಷಣವನ್ನು ಮುಕ... ಗೊಳಿಸಿದರು.

ಬಾಂಗ್ಲಾದೇಶದ ವಿದೇಶಾಂಗ ಸಚಿವರು ಗಂ... ನದಿ ನೀರು ಹಂಚಿಕೆ ಒಪ್ಪಂದ ಉತ್ತರ ಬಾಂ... ಜನ್ ಬಿಗಾ ಕಾರಿಡಾರ್ ಇತ್ಯರ್ಥವನ್ನು ... ಯಶಸ್ವಿಗೊಳಿಸಿದ ಬಗ್ಗೆ ಹಾಗೂ ಕಲ್ಕತ್ತಾ-ಢಾಕಾ ನಡುವೆ ಬಸ್ ಸಂಪರ್ಕವೇರ್ಪಡಿಸಿದ ...ಗ್ಗೆ ಸ್ಮರಿಸುತ್ತಾ ಬಾಂಗ್ಲಾದ ಜನತೆ ಇದನ್ನು ಮರೆಯುವುದಿಲ್ಲ ವೆಂದರು.

ಸಂಯುಕ್ತ ರಂಗ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಸಂಚಾಲನಾ ಸಮಿತಿಯಲ್ಲಿದ್ದು ಜ್ಯೋತಿ ... ನಿರ್ವಹಿಸಿದ ದಕ್ಷ ಪಾತ್ರವನ್ನು ಮಾಜಿ ಪ್ರ... ಗಳಾದ ದೇವೇಗೌಡರು ಶ್ಲಾಘಿಸಿದರು. ಪ್ರ... ಬಿಜೆಪಿ ಮತ್ತು ಬಳಗದ ಜನವಿರೋಧಿ ನೀ... ವಿರುದ್ಧ ಜನ ಚಳುವಳಿಯನ್ನು ಕಟ್ಟುವ ಮೂ... ತೃತೀಯ ರಂಗವನ್ನು ಬೆಸೆಯ ಬೇಕಿದೆಯೆಂದ...

ಮುಖ್ಯಮಂತ್ರಿಗಳಾಗಿ ಪ್ರಬುದ್ಧ ರಾಜಕ... ಯಾಗಿ ಜ್ಯೋತಿಬಸುರವರ ಪಾತ್ರದ ಕು... ಬಿಹಾರದ ಮುಖ್ಯಮಂತ್ರಿ ರಾಬ್ಡಿ ದೇವಿ, ಸಯ... ಉಲ್ ಅಲವತ್ ಚೌಧುರಿ, ಅನಿಲ್ ಸರ... ಮತ್ತು ಬುದ್ಧದೇವ ಭಟ್ಟಾಚಾರ್ಯರ... ಬಸುರವರನ್ನು ಕೊಂಡಾಡಿದರು.

ಬಡಜನರ ವಿರೋಧ ಅದರಲ್ಲೂ ... ವಿರೋಧಿಯಾದ ಬಿಜೆಪಿ ನೇತೃತ್ವದ ಸರ... ನೀತಿಗಳನ್ನು ವಿರೋಧಿಸಿ ಮಾತನಾಡಿದ ...ಲ್ಲೂ ಪ್ರಸಾದ್ ಯಾದವ್ ನೆರೆ ಹಾವಳಿಯಿ...ಗಿ ಬಂಗಾಳದ ಜನತೆ ತತ್ತರಿಸಿದ ಸಂದರ್ಭದಲ್ಲಿ ...ಜೆಪಿ ಮಾಡಿದ ಕೀಳು ರಾಜಕೀಯವನ್ನು ತೀ...ವಾಗಿ ಖಂಡಿಸಿದರು. ಅನಿವಾರ್ಯ ಕಾರಣಗಳ...ಗಿ ಬರಲಾಗದೇ ಮುಲಾಯಂ ಸಿಂಗ್ ಯಾ...ವ್ ಸಂದೇಶವನ್ನು ಕಳಿಸಿದ್ದರು.

ಜ್ಯೋತಿ ಬಸುರವರನ್ನು ಅಭಿನಂ... ಸಲುವಾಗಿ ಈ ಕಾರ್ಯಕ್ರಮ ಏರ್ಪಡಿಸಲಾ... ತೃತೀಯ ರಂಗ ಹುಟ್ಟಿಗೆ ಈ ಕಾಯ... ಮೆಟ್ಟಿಲಾಗಿತ್ತು.

ವರದಿ: ಎನ್. ...

ಆರ್.ಎಸ್.ಎಸ್.ನ ವಿಭಜತೆಗೆ ಜಾತ್ಯಾತೀತ ಗುದ್ದು; ಹೃತಿಕ್-ಸೂಸಾನ್ ವಿವಾಹ



ಸದಾ ತನ್ನ ಹಳದಿ ಕಣ್ಣುಗಳ ನೋಟದಿಂದ ಎಲ್ಲಾ ವಿಭಾಗಗಳ ಜನರನ್ನು ಹಿಂದು ಮತ್ತು ಹಿಂದುಯೇತರ ಎಂದು ವಿಭಜಿಸುವ, ಕೋಮು ಸಂಘರ್ಷಕ್ಕೆ ಪ್ರಚೋದಿಸುವ ಆರ್‌ಎಸ್‌ಎಸ್‌ನ ಸ್ವದೇಶಿ ನೀತಿಗೆ ಹಿಂದಿ ಚಿತ್ರರಂಗದ ಜನಪ್ರಿಯ ಯುವ ನಟ ಹೃತಿಕ್ ರೋಷನ್ ವಿವಾಹ ಬಲವಾದ ಗುದ್ದು ನೀಡಿದೆ.

ಹಿಂದೆ ತನ್ನ ಮುಖವಾಣಿ 'ಪಾಂಚಜನ್ಯ' ದಲ್ಲಿ ವಿದೇಶಿ ಖಾನ್‌ಗಳಾದ ಶಾರುಖ್, ಅಮೀರ್, ಸನ್ಮಾನ್‌ಖಾನ್ ಎಂಬ ಮುಸ್ಲಿಂ ಪಟಾಲಮ್ ಗುಂಪಿಗೆ ಹೃತಿಕ್ ರೋಷನ್ ಹಿಂದೂವಾಗಿ ಪ್ರತ್ಯುತ್ತರ ಎಂಬರ್ಥದಲ್ಲಿ ಬರೆದುಕೊಂಡು ಬಾಲಿವುಡ್‌ನ ವಿಭಜನೆಯತ್ತ ಹೆಜ್ಜೆ ಇಕ್ಕಿತ್ತು. ಆದರೆ, ಯುವ ನಟ ಹೃತಿಕ್ ರೋಷನ್ ಡಿಸೆಂಬರ್ 20 ರಂದು ಬೆಂಗಳೂರಿನಲ್ಲಿ ಮುಸ್ಲಿಂ ಹುಡುಗಿ ಸೂಸನ್ ಖಾನ್‌ಅವರನ್ನು ಬಾಳ ಸಂಗಾತಿಯಾಗಿ ಸ್ವೀಕರಿಸಿ ಭಾರತೀಯ ಮಣ್ಣಿನಲ್ಲಿ ಮೈಗೂಡಿರುವ ... ಸಂಸತಿ ಹಾಗೂ ಸೌಹಾರ್ದ ಮೌಲ್ಯವನ್ನು ಹಿಡಿದಿದ್ದಾರೆ. ಈ ವಿವಾಹ ಅತ್ಯಂತ ಖಾಸಗಿ... ನಡೆದಿದೆ.

ಹಿಂದಿ ಚಲನಚಿತ್ರ ನಿರ್ಮಾಪಕ ರಾ... ರೋಷನ್ ಮಗನಾದ ಹೃತಿಕ್ ಹಿಂದಿ ಚಿತ್ರರ...ದ ಜನಪ್ರಿಯ ನಟ ಹಾಗೂ ನಿರ್ದೇಶಕ, ನಿರ್ಮಾ... ಸಂಜಯ್‌ಖಾನ್ ಅವರ ಪುತ್ರಿ ಸೂಸನ್ ಅ... ಅತ್ತ ಹಿಂದೂ ಸಂಪ್ರದಾಯವೂ ಅಲ್ಲದ ಇತ್ತ ಮುಸ್ಲಿಂ ಸಂಪ್ರದಾಯವೂ ಅಲ್ಲದೆ ಕಾನೂನು ರೀತಿ...ಲ್ಲಿ ವಿವಾಹವಾಗಹುವ ಮೂಲಕ ಸಂಘ ಪರಿವಾರದ ಸಂಕುಚಿತ ಹಾಗೂ ವಿಷಕಾರಿ ಭಾವನೆಗಳಿಗೆ ತಕ್ಕು... ನೀಡಿದ್ದಾರೆ. ಇವರಿಬ್ಬರ ಕುಟುಂಬಗಳ ಸ್ನೇಹ ... ಮೊನ್ನೆಯದಲ್ಲ. ಹಲವು ದಶಕಗಳಷ್ಟು ಹಳೆಯದು.

ಸಂಘ ಪರಿವಾರ ಕೇವಲ ಧಾರ್ಮಿಕತೆಯ ಮಾತ್ರವಲ್ಲದೆ, ರಾಜಕೀಯ, ಸಾಮಾಜಿಕ, ಆರ್ಥಿಕ, ಕ್ರೀಡೆ, ಕಲೆ ಎಲ್ಲಾ ಕಡೆಗೂ ತನ್ನ ವಿಷಬಾಹು ಚಾಚಿ ಎಷ್ಟೇ ಮತೀಯ ವಾದ ಹರಡಿದರೂ ಜಾತ್ಯಾತೀತ ಹಾಗೂ ಸೌಹಾರ್ದತೆ ಬಾವುಟ ಹಾರಿಸುವ ಜನತೆಗೇನೂ ಕೊರತೆ ಇಲ್ಲ. ಶಾರುಖ್‌ಖಾನ್ ಹೆಂಡತಿ ಗೌರಿ ಕೂಡಾ ಹಿಂದೂ ಎಂಬುದು ಇಲ್ಲಿ ಗಮನಾರ್ಹ.

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಾ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ